ಕರ್ನಾಟಕ ಸರ್ಕಾರ

# ಪರಿಸರ ಅಧ್ಯಯನ

## ಅಭ್ಯಾಸಸಹಿತ ಪಠ್ಯಪುಸ್ತಕ

(ಪರಿಷ್ಕೃತ)

ಕನ್ನಡ ಮಾಧ್ಯಮ

3

## ಮೂರನೆಯ ತರಗತಿ

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,
ಬೆಂಗಳೂರು–85.

©KTBS
Not to be republished

# ಮುನ್ನುಡಿ

2005ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು 2010 ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು 12 ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು 7 ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. 1 ರಿಂದ 4 ನೇ ತರಗತಿಯವರೆಗೆ ಪರಿಸರ ಅಧ್ಯಯನ, ಗಣಿತ ಮತ್ತು 5 ರಿಂದ 10 ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

**2005ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.**

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು
- ವಿಷಯಗಳ ಮೇರೆಗಳನ್ನು ಮುರಿದು ಅವುಗಳ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯಪುಸ್ತಕಗಳೊಂದಿಗೆ ಅತ್ಯಂತ ಅವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥ ಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

© KTBS Not to be republished

ಪುಟ್ಟ ಮಕ್ಕಳು ತಮ್ಮ ಶಿಕ್ಷಣದ ಆರಂಭದ ಹಂತದಲ್ಲಿ ಅಂದರೆ 5ನೆಯ ವರ್ಷದಿಂದ 10ನೆಯ ವಯಸ್ಸಿನವರೆಗೆ ಅವರು ಮುಂದೆ ಜೀವನದಲ್ಲಿ ಕಲಿಯಬೇಕಾದ ಸಕಲ ವಿಷಯಗಳಿಗೆ ಅತ್ಯಾವಶ್ಯಕವಾದ ಮೂಲ ಪರಿಕಲ್ಪನೆಗಳನ್ನು ಹಾಗೂ ಜ್ಞಾನವನ್ನು ಗಳಿಸುತ್ತಾರೆ. ಈ ಪ್ರಕ್ರಿಯೆ ಯೋಜಿತವಾಗಿ ನಡೆದಲ್ಲಿ ಮುಂದೆ ಮಕ್ಕಳ ವ್ಯಕ್ತಿತ್ವದ ಬೆಳವಣಿಗೆ ಉತ್ತಮ ರೀತಿಯಲ್ಲಿ ನಡೆಯಲು ಸಹಾಯಕವಾಗುತ್ತದೆ. ಈ ತತ್ವದ ಆಧಾರದ ಮೇಲೆ ಪುಟ್ಟಮಕ್ಕಳಿಗೆ 1ನೇ ತರಗತಿಯಿಂದ 5ನೇ ತರಗತಿಯವರೆಗೆ ಅವರ ಮಾತೃಭಾಷೆ, ರಾಜ್ಯಭಾಷೆ ಹಾಗೂ ಪರಿಚಯ ಭಾಷೆಯಾಗಿ ಇಂಗ್ಲಿಷ್, ಗಣಿತ ಮತ್ತು ಪರಿಸರ ಅಧ್ಯಯನ ಎಂಬ ವಿಷಯಗಳು ಇರುತ್ತವೆ.

ಪರಿಸರ ಅಧ್ಯಯನದಲ್ಲಿ ಮಕ್ಕಳು ದೈನಂದಿನ ಜೀವನಕ್ಕೆ ಸಂಬಂಧಿಸಿದ ವಿಜ್ಞಾನ, ಸಮಾಜ, ಪರಿಸರದ ಪರಿಚಯ, ಕುಟುಂಬ, ದೇಶ, ತಮ್ಮ ಕರ್ತವ್ಯ ಹಾಗೂ ಹಕ್ಕುಗಳು ಇತ್ಯಾದಿ ವಿಷಯಗಳನ್ನು ಚಟುವಟಿಕೆಗಳ ಮೂಲಕ ತಮ್ಮನ್ನು ತೊಡಗಿಸಿಕೊಂಡು ಕಲಿಯುವ ಪ್ರಯತ್ನ ಮಾಡಲು ಅವಕಾಶ ಕೊಡಲಾಗಿದೆ. ಈ ಹಂತದಲ್ಲಿ ಬೋಧನೆಗಿಂತ ಮಕ್ಕಳು ಸ್ವಂತ ಪ್ರಯತ್ನದಿಂದ ಸಹಪಾಠಿಗಳೊಂದಿಗೆ ಬೆರೆತು, ಚರ್ಚಿಸಿ ಅನುಭವಗಳನ್ನು ಹಂಚಿಕೊಂಡು ಕಲಿಯಲು ಅವಕಾಶ ಮಾಡಿಕೊಡಲಾಗಿದೆ. ಈ ಪಠ್ಯಪುಸ್ತಕಗಳು ಸಚಿತ್ರವರ್ಣರಂಜಕವೂ, ಆಕರ್ಷಕವಾಗಿಯೂ ಇರುವಂತೆ ಮಾಡಲು ಶ್ರದ್ಧಾಪೂರ್ವಕ ಪ್ರಯತ್ನ ಮಾಡಲಾಗಿದೆ. ಶಿಕ್ಷಕರ ಪಾತ್ರ ಮಕ್ಕಳಿಗೆ ಕಲಿಯಲು ಪೂರಕವಾದ ಸನ್ನಿವೇಶಗಳನ್ನು ಒದಗಿಸಿಕೊಟ್ಟು ಮಾರ್ಗದರ್ಶನ ಮಾಡುವುದಾಗಿದೆ. ಕಲಿಕೆಯಲ್ಲಿ ಸಂತಸ, ಯಶಸ್ಸು ಹಾಗೂ ತೃಪ್ತಿಯನ್ನು ತರುವುದೇ ಈ ಪಠ್ಯಪುಸ್ತಕಗಳ ಗುರಿ. ಈ ವಿಚಾರದಲ್ಲಿ ಶಿಕ್ಷಕರ ಪಾತ್ರ ಬಹಳ ಮಹತ್ವದ್ದಾಗಿದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿ ವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯ ಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯಕ್ರಮ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು

**ನಾಗೇಂದ್ರ ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ,
ಬೆಂಗಳೂರು

© KTBS Not to be republished

# ಮೊದಲ ಮಾತು

ಇತ್ತೀಚಿನ ಮನುಕುಲದ ಅಭಿವೃದ್ಧಿ, ಸಂಶೋಧನೆ ಮತ್ತು ಮುಂಬರುವ ವರ್ಷಗಳಲ್ಲಿ ಮಾನವರು ಎದುರಿಸಬಹುದಾದ ಅನೇಕ ಹೊಸ ಸವಾಲುಗಳು ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ಎನ್.ಸಿ.ಇ.ಆರ್.ಟಿ. (NCERT) ಸಂಸ್ಥೆಯು ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟನ್ನು 2005ರಲ್ಲಿ ಹೊರತಂದಿದ್ದು, ಈ ಪಠ್ಯಕ್ರಮದ ಮಾರ್ಗದರ್ಶಿ ತತ್ವಗಳನ್ನು ಆಧರಿಸಿ ನಾವು ಕರ್ನಾಟಕ ರಾಜ್ಯದ 3 ಹಾಗೂ 4ನೆಯ ತರಗತಿಗಳ ಪರಿಸರ ಅಧ್ಯಯನ ಪಠ್ಯಪುಸ್ತಕಗಳನ್ನು ರಚಿಸಿದ್ದೇವೆ.

ರಾಜ್ಯದ ಸಾಮಾಜಿಕ, ಆರ್ಥಿಕ, ಪಾರಿಸಾರಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನು ಪರಿಗಣಿಸಿ, ಮಕ್ಕಳ ವಯೋಮಿತಿಗೆ ಅನುಗುಣವಾಗಿ, ಈ ಪಠ್ಯಪುಸ್ತಕಗಳನ್ನು ರಚಿಸಲು ಯತ್ನಿಸಿದ್ದೇವೆ. ಅಂತೆಯೇ, ಶಾಲಾ ಶಿಕ್ಷಣದ ಆರಂಭದಿಂದಲೇ ಮಕ್ಕಳು ನೈಸರ್ಗಿಕ ಮತ್ತು ಸಾಮಾಜಿಕ ಪರಿಸರಗಳನ್ನು ಸಮಗ್ರ ದೃಷ್ಟಿಕೋನದಿಂದ ನೋಡಬೇಕೆಂಬ ಉದ್ದೇಶದಿಂದ ಸಾಮಾನ್ಯ ವಿಜ್ಞಾನ ಹಾಗೂ ಸಮಾಜ ವಿಜ್ಞಾನಗಳ ಚೌಕಟ್ಟುಗಳನ್ನು ಸೇರಿಸಿ, ಈ ವಿಷಯಗಳಿಗೆ ಸಂಬಂಧಿಸಿದ ಪರಿಕಲ್ಪನೆಗಳನ್ನು ಸಮನ್ವಯಗೊಳಿಸಲು ಪ್ರಯತ್ನಿಸಿದ್ದೇವೆ.

ಮಕ್ಕಳು ಎರಡನೆಯ ತರಗತಿಯಿಂದ ಮುಂದಿನ ತರಗತಿಗಳಿಗೆ ಸಾಗುವಾಗ, ಜ್ಞಾನೇಂದ್ರಿಯಗಳನ್ನು ಬಳಸಿ ವಿಷಯಗಳನ್ನು ಸಂಗ್ರಹಿಸುವ ಅವರ ವೀಕ್ಷಣಾ ಸಾಮರ್ಥ್ಯ ಉತ್ತಮಗೊಳ್ಳುತ್ತಾ ಹೋಗುತ್ತದೆ. ಈ ಹಂತದಲ್ಲಿ ಮಕ್ಕಳು ವೀಕ್ಷಣೆ, ಸಂಶೋಧನೆ, ಪ್ರಯೋಗ, ಓದು, ಬರಹ, ಸಂಖ್ಯಾ ಅರಿವು, ಮೆಚ್ಚುಗೆ, ಪರಾನುಭೂತಿ ಇತ್ಯಾದಿ ಕೌಶಲ್ಯಗಳನ್ನು ಬೆಳೆಸಿಕೊಂಡಿರುತ್ತಾರೆ. ಸುತ್ತಲ ಪರಿಸರದತ್ತ ಹಾಗೂ ತಮ್ಮ ದಿನನಿತ್ಯದ ಅನುಭವಗಳಿಗೆ ಪ್ರಧಾನವಾಗಿ ಸ್ಪಂದಿಸಿದರೂ, ಮಕ್ಕಳ ವಿಷಯ ವ್ಯಾಪ್ತಿ ಹೆಚ್ಚುತ್ತಾ ಅಧಿಕ ವಿಷಯಗಳನ್ನೂ, ವಿದ್ಯಮಾನಗಳನ್ನೂ ಅವರು ಹೆಕ್ಕಿ ತೆಗೆಯುವ ಸಾಮರ್ಥ್ಯ ಹೊಂದಿರುತ್ತಾರೆ. ಹೀಗಾಗಿಯೇ ಮಕ್ಕಳು ಪರಿಸರ ಜ್ಞಾನವನ್ನು ತಮ್ಮ ದಿನನಿತ್ಯದ ಆಗು ಹೋಗುಗಳಿಗೆ ಅನ್ವಯಿಸುತ್ತಾ, ಅವೆರಡನ್ನೂ ಬೆಳೆಸುವ ಪ್ರಯತ್ನವನ್ನು ಮಾಡುತ್ತಾರೆ. ಅವರ ಈ ಬೌದ್ಧಿಕ ಬೆಳವಣಿಗೆಯನ್ನು ಗಮನದಲ್ಲಿರಿಸಿಕೊಂಡು ಹಲವು ಮೂಲಭೂತ ಪರಿಕಲ್ಪನೆಗಳನ್ನು (ನೈಸರ್ಗಿಕ ಮತ್ತು ಸಾಮಾಜಿಕ) ಚಿತ್ರಗಳೊಂದಿಗೆ (ಸುಲಭ ಸಂವಹನೆಗಾಗಿ) ವಿವರಿಸುವ ಪ್ರಯತ್ನವನ್ನು ಮಾಡಿದ್ದೇವೆ. ಸ್ಥಳೀಯ ಪರಿಸರದ ಮೂಲಕ ಮಕ್ಕಳು, ಪರಿಸರವನ್ನು ಮೆಚ್ಚಲು ಮತ್ತು ಅಲ್ಲಿನ ಪ್ರತಿಯೊಂದು ವಸ್ತುಗಳ ಮೌಲ್ಯವನ್ನು ಅರಿತುಕೊಳ್ಳಲು ಅಗತ್ಯವಾದ ಪರಿಜ್ಞಾನವನ್ನು ಈ ಪಠ್ಯಪುಸ್ತಕಗಳು ಕೊಡುತ್ತವೆ ಎಂದು ನಾವು ನಂಬಿದ್ದೇವೆ. ವೀಕ್ಷಣೆ, ಪರಿಶೋಧನೆ, ಅಳತೆ, ವಿಶ್ಲೇಷಣೆ, ಸಂಶ್ಲೇಷಣೆ ಮುಂತಾದ ಚಟುವಟಿಕೆಗಳನ್ನು ಸರಳವಾಗಿಸಿ, ಮಕ್ಕಳು ಕಲಿಯುವಿಕೆ ಕ್ರಮಗಳಲ್ಲಿ / ಕ್ರಿಯೆಗಳಲ್ಲಿ ಭಾಗವಹಿಸುವಂತೆ ಹಾಗೂ ತಮ್ಮನ್ನು ತೊಡಗಿಸಿಕೊಳ್ಳುವಂತೆ ಪ್ರಯತ್ನಿಸಿದ್ದೇವೆ. ಇದು ಮಕ್ಕಳಲ್ಲಿ ಪರಿಶೋಧನಾಧಾರಿತ ಕಲಿಯುವಿಕೆಯನ್ನು ಉತ್ತೇಜಿಸುವ ಉದ್ದೇಶವೇ ಆಗಿದೆ. ಶಿಕ್ಷಕ / ಶಿಕ್ಷಕಿಯರಿಗೆ ಅನುಕೂಲವಾಗುವಂತೆ, ಆಯಾ ಪಾಠದಿಂದ ಮಕ್ಕಳು ಬೆಳೆಸಿಕೊಳ್ಳಬಹುದಾದ ಸಾಮರ್ಥ್ಯಗಳನ್ನು ಪಾಠದ ಪ್ರಾರಂಭದಲ್ಲಿಯೇ ಕೊಟ್ಟಿದ್ದೇವೆ. ನಿರೂಪಣೆಯಲ್ಲಿ ಮತ್ತು ಭಾಷೆ ಬಳಕೆಯಲ್ಲಿ ನಾವು ಲಿಂಗಭೇದವನ್ನು ಆದಷ್ಟೂ ಕಡಿಮೆ ಮಾಡಲು ಶ್ರಮಿಸಿದ್ದೇವೆ.

ರಾಷ್ಟ್ರೀಯ ಪಠ್ಯಕ್ರಮ (2005) ದ ಪ್ರಾರಂಭಿಕ ಪಂಕ್ತಿಗಳಲ್ಲಿ ಉಲ್ಲೇಖಿಸಿದ, ರವೀಂದ್ರನಾಥ ಠಾಗೂರ್‌ರವರ **ಸಿವಿಲೈಜೇಷನ್ ಮತ್ತು ಪ್ರೊಗ್ರೆಸ್** (ನಾಗರೀಕತೆ ಮತ್ತು ಪ್ರಗತಿ) ನಿಂದ ಆಯ್ದ, ಅತ್ಯಂತ ಸ್ಫೂರ್ತಿದಾಯಕ, ಚಿಂತನ ಶೀಲ ವಿಚಾರಧಾರೆಯನ್ನು ಪ್ರತಿಯೊಬ್ಬ ಶಿಕ್ಷಕ/ಶಿಕ್ಷಕಿಯರು ಓದಿ, ಅರ್ಥೈಸಿ, ನವೀನ, ಸೃಜನಶೀಲ ಬೋಧನಾ–ಕಲಿಕಾ ವಿಧಾನಗಳನ್ನು ಮಕ್ಕಳಿಗೆ, ಅದರಲ್ಲೂ ಕಲಿಕೆಯ ಅತ್ಯಂತ ಪ್ರಮುಖ ಘಟ್ಟದಲ್ಲಿರುವ 3 ಮತ್ತು 4ನೆಯ ತರಗತಿಯ ಮಕ್ಕಳಿಗೆ ತಲುಪಿಸಬೇಕೆಂಬುದೇ ನಮ್ಮ ಅಪೇಕ್ಷೆ. ಅಂತೆಯೇ ಶಿಕ್ಷಕ ವೃಂದ, ಪೋಷಕ ಬಳಗ ಮತ್ತು ಸಾಮಾಜಿಕ ಕಳಕಳಿಯುಳ್ಳ ಸಾರ್ವಜನಿಕರಿಂದ ಸಲಹೆ, ಸೂಚನೆಗಳನ್ನು ಸದಾ ಸ್ವಾಗತಿಸುತ್ತಾ, ಆ ಮೇರೆಗೆ ಈ ಪಠ್ಯಪುಸ್ತಕಗಳನ್ನು ಇನ್ನೂ ಉತ್ತಮಗೊಳಿಸಬೇಕೆಂಬುದೇ ನಮ್ಮ ಅಭಿಲಾಷೆ.

**ಪರಿಸರದ ಬಗ್ಗೆ, ಪರಿಸರದಿಂದ, ಪರಿಸರ (ಸಂರಕ್ಷಣೆ)ಕ್ಕಾಗಿ ನೀಡುವ ಶಿಕ್ಷಣವೇ ಪರಿಸರ ಶಿಕ್ಷಣ.**

ಡಾ. ಆರ್. ಶೈಲಜಾ
ಅಧ್ಯಕ್ಷರು, ಪಠ್ಯಪುಸ್ತಕ ರಚನಾ ಸಮಿತಿ.

©KTBS Not to be republished

# ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು:**

**ಡಾ. ಆರ್. ಶೈಲಜಾ,** ನಿರ್ದೇಶಕರು, ಪ್ರಾದೇಶಿಕ ಪರಿಸರ ಶಿಕ್ಷಣ ಕೇಂದ್ರ, ದಕ್ಷಿಣ ವಲಯ, 143, ಇನ್ಫಂಟ್ರಿ ರಸ್ತೆ, ಬೆಂಗಳೂರು.

**ಸದಸ್ಯರು:**

**ಶ್ರೀಮತಿ ಆರ್.ಎನ್. ವಸಂತ ಸುಜಯ್,** ಸ.ಶಿ, ಸರ್ಕಾರಿ ಪ್ರೌಢಶಾಲೆ, ಹೆಬ್ಬಾಳ, ಬೆಂಗಳೂರು.

**ಶ್ರೀ ಅಶ್ವಥ್ ನಾರಾಯಣ,** ಸಿ.ಆರ್.ಪಿ, ಬೆಗ್ಲಿ ಹೊಸಹಳ್ಳಿ ಕ್ಲಸ್ಟರ್, ಕೋಲಾರ.

**ಶ್ರೀ ಕೆ.ಎನ್. ಮಧುಸೂದನ್‌ರಾವ್,** ಸಿ.ಆರ್.ಪಿ, ಹಿರೇಹಳ್ಳಿ ಕ್ಲಸ್ಟರ್, ತುಮಕೂರು.

**ಶ್ರೀ ರಾಘವೇಂದ್ರ ಸುಣಗಾರ,** ಸ.ಶಿ, ಸರ್ಕಾರಿ ಪ್ರೌಢಶಾಲೆ, ಮರಕಮದಿನ್ನಿ, ಮಾನ್ವಿ ತಾ., ರಾಯಚೂರು.

**ಶ್ರೀಮತಿ ಕೆ.ವಿ. ಗೀತಾ,** ಸ.ಶಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಯೋಧ್ಯ ನಗರ, ಪುತ್ತೂರು ತಾ., ದಕ್ಷಿಣ ಕನ್ನಡ.

**ಶ್ರೀ ವಿ.ಬಿ. ಶಿಂಗೆ,** ಚಿತ್ರಕಲಾ ಶಿಕ್ಷಕರು, ಕರ್ನಾಟಕ ಪ್ರೌಢಶಾಲೆ, ಧಾರವಾಡ.

**ಪರಿಶೀಲಕರು:**

**ಪ್ರೊ. ಜಿ.ಎಸ್. ಮುಡಂಬಡಿತ್ತಾಯ,** ಸಂಯೋಜಕರು, ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಸಂಪಾದಕ ಮಂಡಳಿ:**

**ಪ್ರೊ. ಎಮ್. ಆರ್. ನಾಗರಾಜು,** ಶಿಕ್ಷಣ ತಜ್ಞರು, ಯಲಹಂಕ ಉಪನಗರ, ಬೆಂಗಳೂರು.

**ಪ್ರೊ. ಹೆಚ್. ಎಸ್. ಲಕ್ಷ್ಮೀನಾರಾಯಣ ಭಟ್ಟ,** ಭೌತಶಾಸ್ತ್ರ ಪ್ರಾಧ್ಯಾಪಕರು(ನಿವೃತ್ತ), ಬಸವೇಶ್ವರನಗರ, ಬೆಂಗಳೂರು.

**ಡಾ. ಎಮ್. ಜೆ. ಸುಂದರ್ ರಾಮ್,** ಪ್ರಾಣಿಶಾಸ್ತ್ರ ಪ್ರಾಧ್ಯಾಪಕರು(ನಿವೃತ್ತ), ಗಿರಿನಗರ, ಬೆಂಗಳೂರು.

**ಮುಖ್ಯ ಸಂಯೋಜಕರು:**

**ಪ್ರೊ. ಜಿ.ಎಸ್. ಮುಡಂಬಡಿತ್ತಾಯ,** ಸಂಯೋಜಕರು, ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಮುಖ್ಯ ಸಲಹೆಗಾರರು:**

**ಶ್ರೀ ನಾಗೇಂದ್ರ ಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಶ್ರೀಮತಿ ಸಿ.ನಾಗಮಣಿ,** ಉಪ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು :**

**ಶ್ರೀಮತಿ ಎನ್. ಆರ್. ಶೈಲಜಕುಮಾರಿ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

©KTBS Not to be republished

## ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ 2014–15 ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವ ವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ 27 ಸಮಿತಿಗಳನ್ನು ರಚಿಸಿ ದಿನಾಂಕ: 24.11.2014 ರಂದು ಆದೇಶ ಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು 24.11.2014ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ 19.09.2015 ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು 2016–17 ರ ಬದಲು 2017–18ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿ ದೋಷ, ಆಶಯ ದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆ ಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳುಹಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯ ಪರಿವೀಕ್ಷಕರು ಮತ್ತು **ಡಯಟ್** ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ–ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದ ಕಡೆ ಪರಿಷ್ಕರಿಸಲಾಗಿದೆ.

Not to be republished ©KTBS

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇನೆ: ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯ ಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ 27 ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

**ನರಸಿಂಹಯ್ಯ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ)
ಬೆಂಗಳೂರು–85

**ಪ್ರೊ. ಬರಗೂರು ರಾಮಚಂದ್ರಪ್ಪ**
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ)
ಬೆಂಗಳೂರು–85

©KTBS Not to be republished

# ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು :**

**ಪ್ರೊ. ಬರಗೂರು ರಾಮಚಂದ್ರಪ್ಪ,** ರಾಜ್ಯಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

## ಪರಿಷ್ಕರಣ ಸಮಿತಿ

**ಅಧ್ಯಕ್ಷರು :**

**ಡಾ. ಎಸ್. ಶಿಶುಪಾಲ,** ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು, ಸೂಕ್ಷ್ಮಜೀವಿಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ.

**ಸದಸ್ಯರು :**

**ಶ್ರೀಮತಿ ಕೆ. ಮಮತ,** ಸ.ಶಿ, ಸರ್ಕಾರಿ ಪ್ರೌಢಶಾಲೆ, ಕೆಂಗೇರಿ ಉಪನಗರ, ಬೆಂಗಳೂರು.

**ಶ್ರೀ ಕೆ.ಎಸ್. ಗಿರೀಶ್,** ಸ.ಶಿ, ಸರ್ಕಾರಿ ಪ್ರೌಢಶಾಲೆ, ಜಾಲಿಗೆ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

**ಶ್ರೀಮತಿ ಜಿ. ರೇಣುಕಾ,** ಸ.ಶಿ, ಸರ್ಕಾರಿ ಪ್ರೌಢಶಾಲೆ, ಹೊನ್ನಶೆಟ್ಟಿಹಳ್ಳಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.

**ಶ್ರೀಮತಿ ಆರ್.ಎನ್. ವಸಂತ ಸುಜಯ್,** ಸ.ಶಿ, ಸರ್ಕಾರಿ ಪ್ರೌಢಶಾಲೆ, ಹೆಬ್ಬಾಳ, ಬೆಂಗಳೂರು.

**ಶ್ರೀಮತಿ ಎ. ಲಕ್ಷ್ಮೀದೇವಿ,** ಸ.ಶಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾವೇರಿಪುರ, ಬೆಂಗಳೂರು.

**ಶ್ರೀಮತಿ ಬಿ. ಹೇಮಲತ,** ಸ.ಶಿ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕೆ.ನಾರಾಯಣಪುರ, ಬೆಂಗಳೂರು.

**ಕಲಾವಿದರು :**

**ಶ್ರೀ ಯು. ಹಜರತ್ ಅಲಿ,** ಅಧ್ಯಾಪಕರು, ಲಲಿತಕಲಾ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು.

## ಉನ್ನತ ಪರಿಶೀಲನ ಸಮಿತಿ

**ಡಾ. ಟಿ.ಆರ್. ಅನಂತರಾಮು,** ಹಿರಿಯ ವಿಜ್ಞಾನಿ (ನಿವೃತ್ತ), ಭಾರತೀಯ ಭೂ ವೈಜ್ಞಾನಿಕ ಸರ್ವೇ ಸಂಸ್ಥೆ, ಬೆಂಗಳೂರು.

**ಪ್ರೊ. ವಿ.ಎಸ್. ವತ್ಸಲ,** ಪ್ರಾಂಶುಪಾಲರು (ನಿವೃತ್ತ), ಎಮ್.ಇ.ಎಸ್ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.

**ಡಾ. ಜಿ.ಎಮ್. ನಿಜಗುಣ,** ಪ್ರಾಂಶುಪಾಲರು (ನಿವೃತ್ತ), ವಿಜಯ ಕಾಲೇಜು, ಬಸವನಗುಡಿ, ಬೆಂಗಳೂರು.

**ಪ್ರೊ. ಕೆ.ಎಸ್. ನಟರಾಜ್,** ಭೌತವಿಜ್ಞಾನ ಪ್ರಾಧ್ಯಾಪಕರು (ನಿವೃತ್ತ), ನ್ಯಾಷನಲ್ ಕಾಲೇಜು, ಜಯನಗರ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

**ಶ್ರೀ ನರಸಿಂಹಯ್ಯ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

**ಶ್ರೀಮತಿ ಸಿ. ನಾಗಮಣಿ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು :**

**ಶ್ರೀಮತಿ ಎನ್.ಆರ್. ಶೈಲಜಕುಮಾರಿ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

©KTBS Not to be republished

# ಪರಿವಿಡಿ


| ಕ್ರ.ಸಂ. | ಪಾಠ | ಪುಟ ಸಂಖ್ಯೆ |
|---|---|---|
| 1. | ತೋಟದಲ್ಲಿ ಒಂದು ದಿನ | 1 – 10 |
| 2. | ಹಸಿರು ಸಿರಿ | 11 – 18 |
| 3. | ಗೂಬಕ್ಕನ ನ್ಯಾಯ | 19 – 26 |
| 4. | ಹನಿ ಹೇಳಿದ ಕಥೆ | 27 – 42 |
| 5. | ನೀರಿನ ಸಂಸಾರ | 43 – 52 |
| 6. | ಆಹಾರ ವೈವಿಧ್ಯ | 53 – 65 |
| 7. | ಅಡುಗೆ ಮನೆ | 66 – 74 |
| 8. | ಮನೆ ಕಟ್ಟೋಣ | 75 – 78 |
| 9. | ಚೆಂದದ ಮನೆ | 79 – 85 |
| 10. | ನಮ್ಮ ಜ್ಞಾನೇಂದ್ರಿಯಗಳು | 86 – 94 |
| 11. | ಹಲ್ಲಿನ ಮಹಿಮೆ | 95 – 100 |
| 12. | ಅಪಾಯ–ಅಪಘಾತ | 101 – 105 |
| 13. | ಸೌಲಭ್ಯಗಳು ನಮಗಾಗಿ | 106 – 114 |
| 14. | ಸಾರಿಗೆ ಸಂಚಾರ | 115 – 121 |
| 15. | ಪತ್ರ ಸಂವಾದ | 122 – 130 |
| 16. | ದೀಪಾಳ ತಲೆಮಾರು | 131 – 136 |
| 17. | ನನ್ನ ಹವ್ಯಾಸ | 137 – 143 |
| 18. | ಇವರೂ ನಮ್ಮಂತೆ | 144 – 148 |
| 19. | ಜಾತ್ರೆ ಬಂತು ಜಾತ್ರೆ | 149 – 154 |
| 20. | ನನ್ನ ಒಂದು ದಿನ | 155 – 161 |
| 21. | ಕಣ್ಣಾ ಮುಚ್ಚೆ ಕಾಡೆ ಗೂಡೆ | 162 – 169 |
| 22. | ಮಡಕೆಯ ಕಥೆ | 170 – 174 |
| 23. | ನಮ್ಮೆಲ್ಲರ ಮನೆ | 175 – 187 |
| 24. | ನಕ್ಷೆ | 188 – 191 |
| 25. | ನನ್ನ ಜಿಲ್ಲೆ–ನಿನ್ನ ಜಿಲ್ಲೆ | 192 – 203 |


©KTBS Not to be republished

# ಪಾಠ – 1

# ತೋಟದಲ್ಲಿ ಒಂದು ದಿನ

**ಈ ಪಾಠವನ್ನು ಕಲಿತ ನಂತರ ನೀನು,**

- ನೋಡಿರುವ ಪ್ರಾಣಿಗಳ ಬಣ್ಣ, ಗಾತ್ರ, ಆಕಾರ, ಆಹಾರ ಮತ್ತು ವಾಸಿಸುವ ಸ್ಥಳಗಳ ವೈವಿಧ್ಯವನ್ನು ವರ್ಣಿಸುವೆ.
- ಧ್ವನಿ, ಆಹಾರ, ಆವಾಸ ಮುಂತಾದವುಗಳನ್ನು ಆಧರಿಸಿ ಪಕ್ಷಿಗಳನ್ನು ವರ್ಣಿಸುವೆ.

ಸಂಜೆ ಮಕ್ಕಳ ಒಂದು ಗುಂಪು ಹರಟುತ್ತಾ ಸಾಗಿತ್ತು.


ವನಜ : ಆಹಾ! ಅಲ್ಲಿ ನೋಡಿ, ಬೆಳ್ಳಕ್ಕಿಯ ಸಾಲು!

ಲಿಖಿತ : ಆಹಾ! ಅವು ಹಾರುತ್ತಾ ನಮ್ಮ ತೋಟದ ಕೊಳದ ಹತ್ತಿರ ಇರುವ ಮರದಲ್ಲಿ ಕುಳಿತವು ನೋಡಿ.

ಅರುಣ : ಅಲ್ಲಿ ಹೋಗಿ ನೋಡೋಣ್ವಾ?

(ಮಕ್ಕಳ ಗುಂಪು ತೋಟದಲ್ಲಿರುವ ಕೊಳದ ಬಳಿ ಹೊರಟಿತು.)

ತೆರೇಸಾ : ಶಬ್ದ ಮಾಡದೇ ಬನ್ನಿ. ಮರದಲ್ಲಿ ಬೆಳ್ಳಕ್ಕಿ ಅಲ್ಲದೆ ಅಳಿಲು, ಇರುವೆ, ಜೇಡ, ಬಾವಲಿ, ಮೈನಾ... ಅಬ್ಬಾ! ಎಷ್ಟೊಂದು ಪ್ರಾಣಿಗಳಿವೆ. ಎಲ್ಲವೂ ಓಡಿ ಬಿಟ್ಟಾವು.



ಚಿತ್ರದಲ್ಲಿರುವ ಪ್ರಾಣಿಗಳ ಹೆಸರನ್ನು ಅದರಲ್ಲಿ ಕೊಟ್ಟಿರುವ ಖಾಲಿ ಜಾಗದಲ್ಲಿ ಬರೆ.

©KTBS Not to be republished

ಲಿಖಿತ : ಅಷ್ಟೇ ಅಲ್ಲ! ಕೊಳದಲ್ಲಿ ನೋಡಿ. ಮೀನು, ಕಪ್ಪೆಗಳು ಕಾಣುತ್ತಿವೆ. ಅಲ್ಲಿ ಆಮೆ ಈಜುತ್ತಿದೆ.

ಅರುಣ : ಹಕ್ಕಿಗಳ ಚಿಲಿಪಿಲಿ ಕೇಳೋಕ್ಕೆ ಎಷ್ಟು ಇಂಪಾಗಿ ಇದೆಯಲ್ವಾ?

ಅಲಿ : ನಾವೂ ಹಕ್ಕಿಗಳಂತೆ ಕೂಗೋಣ್ವಾ?

**ಚಟುವಟಿಕೆ :**

- ನಿನ್ನ ಊರಿನಲ್ಲಿ ನೀನು ನೋಡಿರುವ ಹಕ್ಕಿಗಳ ಹೆಸರನ್ನು ಬರೆ.

______________________________

- ನೀನು ಯಾವ ಹಕ್ಕಿಗಳ ಕೂಗನ್ನು ಕೇಳಿರುವೆ? ಆ ಹಕ್ಕಿಗಳ ಹೆಸರನ್ನು ಬರೆ.

______________________________

- ನೀನು, ನಿನ್ನ ಗೆಳೆಯರು ಅವುಗಳ ಧ್ವನಿಯನ್ನು ಅನುಕರಣೆ ಮಾಡಿ.

ಸೀಮಾ : ಸಾಕು ಸಾಕು, ನಮ್ಮ ಗಲಾಟೆಯಿಂದ ಹಕ್ಕಿಗಳು ಹೆದರಿ ಹಾರಿಬಿಟ್ಟಾವು.

ಲಿಖಿತ : ಓಹೋ, ತೋಟದ ರಂಗಪ್ಪ ಈ ಕಡೆಗೆ ಬರುತ್ತಿದ್ದಾರೆ. ಅವರಿಗೆ ಹಕ್ಕಿಗಳೆಂದರೆ ಪ್ರೀತಿ. ಅವುಗಳನ್ನು ಓಡಿಸಿದರೆ ಅವರಿಗೆ ಕೋಪ ಬರುತ್ತದೆ. ಗಲಾಟೆ ನಿಲ್ಲಿಸಿ.

ರಂಗಪ್ಪ : ಲಿಖಿತಮ್ಮ, ನೀವು ಇಲ್ಲಿ ಏಕೆ ಬಂದಿದ್ದೀರಿ?

ಲಿಖಿತ : ಬೆಳ್ಳಕ್ಕಿಗಳನ್ನು ನೋಡೋಕೆ ಬಂದ್ವಿ ರಂಗಪ್ಪ.

ರಂಗಪ್ಪ : ನಿಮಗೆ ಹಕ್ಕಿಗಳ ಬಗ್ಗೆ ಗೊತ್ತಾ?

ಆನಂದ : ಓಹೋ. ಎಲ್ಲಾ ಗೊತ್ತು.


ರಂಗಪ್ಪ : ಹಾಗಾದರೆ ನಾನು ಕೆಲವು ಪ್ರಶ್ನೆಗಳನ್ನು ಕೇಳ್ತೀನಿ, ಉತ್ತರ ಹೇಳ್ತೀರಾ?

ಎಲ್ಲಾ : ಓಹೋ. . . . . ಹೇಳ್ತೀವಿ.

ರಂಗಪ್ಪ :
- ಹಸಿರು ಬಣ್ಣದ ಹಕ್ಕಿ ಯಾವುದು? [ ]
- ಕಪ್ಪು ಬಣ್ಣದ ಹಕ್ಕಿ ಯಾವುದು? [ ]
- ಉದ್ದ ಬಾಲದ ಹಕ್ಕಿ ಯಾವುದು? [ ]
- ಉದ್ದ ಕಾಲಿನ ಹಕ್ಕಿ ಯಾವುದು? [ ]
- ಉದ್ದ ಕೊಕ್ಕಿನ ಹಕ್ಕಿ ಯಾವುದು? [ ]
- ಉದ್ದ ಕತ್ತಿನ ಹಕ್ಕಿ ಯಾವುದು? [ ]


©KTBS Not to be republished

- ಕೊಕ್ಕರೆಯ ಆಹಾರವೇನು?
- ಹದ್ದಿನ ಆಹಾರವೇನು?
- ನೀನು ನೋಡಿರುವ ಸಣ್ಣ ಗಾತ್ರದ ಹಕ್ಕಿ ಯಾವುದು?
- ನೀನು ನೋಡಿರುವ ದೊಡ್ಡ ಗಾತ್ರದ ಹಕ್ಕಿ ಯಾವುದು?
- ಚಿತ್ರದಲ್ಲಿನ ಹಕ್ಕಿಯ ವಿಶೇಷತೆ ಏನು?




ಬಾತುಕೋಳಿ

ರಂಗಪ್ಪ : ಪರವಾಗಿಲ್ಲ, ಸ್ವಲ್ಪ ಮಟ್ಟಿಗೆ ತಿಳಿದಿದ್ದೀರಿ. ಈಗ ಇಲ್ಲಿ ಕೆಲವು ಗೂಡುಗಳನ್ನು ತೋರಿಸುತ್ತೇನೆ. ಅವು ಯಾವುವೆಂದು ಹೇಳಿ.









© KTBS Not to be republished

ಅಲಿ : ಅಬ್ಬಾ ! ಈ ಗೀಜಗನ ಗೂಡು ನೋಡು. ಗೀಜಗ ಎಷ್ಟು ಸುಂದರವಾಗಿ ಗೂಡು ಕಟ್ಟಿದೆಯಲ್ಲಾ. ಇದಕ್ಕೆ ಯಾರು ಹೇಳಿ ಕೊಟ್ಟರು?

**ಚಟುವಟಿಕೆ :** ಗೀಜಗ ಹೇಗೆ ಗೂಡು ಕಟ್ಟುತ್ತದೆ ಎಂದು ಕೇಳಿ ತಿಳಿದುಕೊ.

ರಂಗಪ್ಪ : ನಿಜ ಅಲಿ. ಮೊನ್ನೆ ಏನಾಯಿತು ಗೊತ್ತೆ? ಗೆಳೆಯ ಕಲ್ಲೇಶಿ ಮೊನ್ನೆ ಇಲ್ಲೇ ದಾರಿಯ ಬದಿಯಲ್ಲಿ ಕುರಿ ಕಾಯುತ್ತಿದ್ದ. ಆಗ ಒಂದು ಕಾರು ಬಂದು ನಿಂತಿತು. ಒಬ್ಬ ವ್ಯಕ್ತಿ ಕಾರಿನಿಂದ ಇಳಿದು ಮರದಲ್ಲಿ ನೇತಾಡುತ್ತಿದ್ದ ಗೀಜಗನ ಗೂಡು ಕೀಳಲು ಹೋದ. ಕಲ್ಲೇಶಿ ಓಡಿಹೋಗಿ ಅವನನ್ನು ತಡೆದ. ಆ ವ್ಯಕ್ತಿಗೆ ಆಶ್ಚರ್ಯವಾಯಿತು. "ಏಕೆ ಅಡ್ಡಿಪಡಿಸುತ್ತಿರುವೆ!" ಎಂದು ಕೇಳಿದ. ಕಲ್ಲೇಶಿ ಹೇಳಿದ, "ನೀವು ಗೂಡು ತೆಗೆದುಕೊಂಡು ಹೋಗುತ್ತೀರಿ, ಗೀಜಗ ಮರಳಿ ಬಂದು ತನ್ನ ಗೂಡು ಕಾಣದೆ ಪರದಾಡುತ್ತದೆ. ಇದನ್ನು ನಾನು ಸಹಿಸಲಾರೆ".



ಕಲ್ಲೇಶಿಯ ಪಕ್ಷಿ ಪ್ರೇಮಕ್ಕೆ ಕಾರಿನಲ್ಲಿ ಬಂದ ವ್ಯಕ್ತಿ ಬೆರಗಾದ. ತನಗೆ ಒಳ್ಳೆಯ ಪಾಠ ಕಲಿಸಿದ ಕಲ್ಲೇಶಿಯನ್ನು ಹೊಗಳಿ ಗೂಡನ್ನು ಮುಟ್ಟದೇ ಮರಳಿದ.

ಲಿಖಿತ : ರಂಗಪ್ಪ, ನಮಗೂ ಕೂಡ ಹಕ್ಕಿಗಳನ್ನು ಮತ್ತು ಅವುಗಳ ಗೂಡುಗಳನ್ನು ಕಾಪಾಡೋಕೆ ಇಷ್ಟ. ಅದಕ್ಕೆ ಏನು ಮಾಡಬೇಕಾಗುತ್ತದೆ?

©KTBS Not to be republished

ರಂಗಪ್ಪ : ನಿನ್ನ ಶಾಲೆ ಅಥವಾ ಮನೆಯಲ್ಲಿ ಹಕ್ಕಿಗಳಿಗೆ ಸಣ್ಣ ಗೂಡುಗಳನ್ನು ತಯಾರಿಸಿ, ಮರಗಳಲ್ಲಿ ನೇತುಹಾಕು. ಹಕ್ಕಿಗಳಿಗೆ ಕುಡಿಯಲು ನೀರಿರುವ ಸಣ್ಣ ಬಟ್ಟಲುಗಳನ್ನು ಅಲ್ಲಲ್ಲಿ ಇಡು. ತಿನ್ನಲು ಕಾಳಿನ ಬಟ್ಟಲುಗಳನ್ನು ಇಡು. ಗಿಡ ಮರಗಳನ್ನು ನೆಡು ಮತ್ತು ರಕ್ಷಿಸು. ಇದರಿಂದ ಹಕ್ಕಿಗಳ ಸಂಖ್ಯೆ ಹೆಚ್ಚಾಗುತ್ತದೆ.

**ಮಾಡಿ-ನೋಡು**

**ಹಕ್ಕಿಗೊಂದು ಗೂಡು ನಿರ್ಮಿಸು.**

ಹಳೆಯ ಮಡಕೆ ತೆಗೆದುಕೊ. ಅದರ ಬಾಯಿಗೆ ಒಂದು ಬಟ್ಟೆಯನ್ನು ಕಟ್ಟು. ಆ ಬಟ್ಟೆಯ ಮಧ್ಯಭಾಗದಲ್ಲಿ ಪಕ್ಷಿ ಹೋಗಿ ಬರುವಷ್ಟು ರಂಧ್ರಮಾಡು. ಗೂಡು ಸಿದ್ಧವಾಯಿತು. ಗೂಡಿನ ತಳಭಾಗದಲ್ಲಿ ಸಣ್ಣ ಸಣ್ಣ ರಂಧ್ರಗಳನ್ನು ಮಾಡು. ಇದರಿಂದ ನೀರು ಒಳಗೆ ನಿಲ್ಲದೆ ಸೋರಿ ಹೋಗುತ್ತದೆ. ಹಿರಿಯರ ಸಹಾಯದಿಂದ ಗೂಡನ್ನು ಮರದಲ್ಲಿ ನೇತುಹಾಕು. ಪ್ರತಿ ದಿನ ನೀರು ಮತ್ತು ಕಾಳು ನೀಡು.



ವನಜ : ಹಕ್ಕಿಗಳಿಂದ ತೋಟಕ್ಕೆ ತೊಂದರೆ ಆಗುವುದಿಲ್ಲವೇ?


ರಂಗಪ್ಪ : ಇಲ್ಲ ಮಗೂ, ಇವುಗಳಿಂದ ನಮಗೆ ಒಳ್ಳೆಯದೇ ಆಗುತ್ತದೆ. ಇವು ಬೆಳೆಗಳ ಮೇಲಿರುವ ಹುಳುಗಳನ್ನು ತಿನ್ನುತ್ತವೆ. ಇದರಿಂದ ಬೆಳೆಗಳಿಗೆ ಆಗುವ ಹಾನಿ ಕಡಿಮೆಯಾಗುತ್ತದೆ. ಹೀಗಾಗಿ ಬೆಳೆ ಚೆನ್ನಾಗಿ ಬೆಳೆಯುತ್ತದೆ.

**ಚಟುವಟಿಕೆ :** ವಿವಿಧ ಹಕ್ಕಿಗಳು ಉದುರಿಸಿದ ಗರಿಗಳನ್ನು ಸಂಗ್ರಹಿಸು. ಯಾವ ಹಕ್ಕಿಯ ಗರಿ ಎಂದು ಪತ್ತೆ ಹಚ್ಚು. ಶಿಕ್ಷಕರ ಅಥವಾ ಹಿರಿಯರ ಸಹಾಯ ಪಡೆ. ಸಂಗ್ರಹಿಸಿದ ಗರಿಗಳನ್ನು ಹಳೆಯ ಪುಸ್ತಕದಲ್ಲ ಅಂಟಿಸಿ ಚಿತ್ರಕೋಶ ತಯಾರಿಸು.

ಸೀಮಾ : ಅಬ್ಬಾ! ದೊಡ್ಡ ಜೇಡ! ಮರದಲ್ಲಿ ಇದೆ. ಇವು ಮನೆಗಳಲ್ಲಿಯೂ ಇರುತ್ತವೆಯಲ್ವಾ?

© KTBS Not to be republished

ಅರುಣ : ಹೌದು. ಮನೆಗಳಲ್ಲಿ ಜಿರಳೆ, ಹಲ್ಲಿ, ನೊಣ, ಇಲಿ, ಬೆಕ್ಕು, ಸೊಳ್ಳೆಗಳ ಹಾಗೆ ಜೇಡ ಕೂಡ ಇರುತ್ತದೆ. ಇವುಗಳಲ್ಲದೆ ನಾವು ಸಾಕುವ ಕೆಲವು ಪ್ರಾಣಿಗಳು ಇರುತ್ತವೆ. ಹಸು, ಎಮ್ಮೆ, ಕುರಿ, ಪಾರಿವಾಳ.... ಎಷ್ಟೆಲ್ಲಾ ಇವೆ.





ತೆರೇಸಾ : ಅಯ್ಯೋ, ಇದೇನು ಹಾರಿತು?

ಲಿಖಿತ : ಗಾಬರಿ ಬೇಡ, ಅದು ಕಪ್ಪೆ. ಕೊಳದ ನೀರಿನಿಂದ ನೆಲದ ಮೇಲೆ ಜಿಗಿಯಿತು.

ತೆರೇಸಾ : ನೀರನ್ನು ಬಿಟ್ಟು ಕಪ್ಪೆ ನೆಲದ ಮೇಲೇನು ಮಾಡುತ್ತಾ ಇದೆ?

ಆನಂದ : ತೆರೇಸಾ, ನಿನಗೆ ಗೊತ್ತಿಲ್ವ. ಕಪ್ಪೆ, ಆಮೆ, ಮೊಸಳೆ ಮುಂತಾದ ಪ್ರಾಣಿಗಳು ನೀರು ಮತ್ತು ನೆಲ ಎರಡರಲ್ಲೂ ಇರುತ್ತವೆ.





ವನಜ : ಹಾಗಾದ್ರೆ ನೀರಿನಲ್ಲಿ ಮಾತ್ರ ವಾಸಿಸೋ ಪ್ರಾಣಿಗಳು ಯಾವುವು?

ಆನಂದ : ಮೀನು, ಸೀಗಡಿ ಇತ್ಯಾದಿ.

©KTBS Not to be republished

ವನಜ : ನಮ್ಮ ಅಜ್ಜಿ ಮನೆ ಇರೋ ಕಡೆ ಸಮುದ್ರಾನೂ ಇದೆ ಗೊತ್ತಾ. ಅಲ್ಲಿ ಸೀಗಡಿ, ಏಡಿ, ಆಮೆ, ನಕ್ಷತ್ರ ಮೀನು, ಹವಳ ಪ್ರಾಣಿಗಳು, ಶಂಕು ಪ್ರಾಣಿಗಳು ಇವೆ ಅಂತ ಅಜ್ಜಿ ಹೇಳಿದ್ರು . ನಾನು ಅಲ್ಲಿ ಮರಳಿನಲ್ಲಿ ಕೆಲವೊಂದು ಸಲ ಏಡಿ, ನಕ್ಷತ್ರ ಮೀನು ನೋಡಿದ್ದೀನಿ ಗೊತ್ತಾ? ಮುಂದಿನ ಸಲ ಹೋದಾಗ ಶಂಕುಗಳನ್ನು ಆರಿಸಿ ತರ್ತೀನಿ.




ರಂಗಪ್ಪ : ಶಂಕುಗಳಲ್ಲಿ ಪ್ರಾಣಿಗಳು ಇದ್ದರೆ ತರಬೇಡ. ಅವು ಸತ್ತು ಹೋಗುತ್ತವೆ. ಸಮುದ್ರದಲ್ಲೇ ಬಿಟ್ಟುಬಿಡು.

ವನಜ : ಹಾಗೇ ಮಾಡ್ತೀನಿ.

ರಂಗಪ್ಪ : ಎಷ್ಟೊಂದು ಪ್ರಾಣಿಗಳನ್ನು ನೀವು ನೋಡಿದ್ದೀರಾ. ಅವುಗಳ ಆಕಾರ, ಬಣ್ಣ, ಗಾತ್ರ ಎಲ್ಲ ಒಂದೇ ತರಹ ಇದೆಯಾ?

ಲಿಖಿತ : ಇಲ್ಲವೇ ಇಲ್ಲ. ಒಂದೊಂದು ಒಂದೊಂದು ತರಹ. ಆಕಾರ, ಬಣ್ಣ ಹಾಗೂ ಗಾತ್ರಗಳಲ್ಲಿ ಎಲ್ಲವೂ ವಿಧ ವಿಧವಾಗಿವೆ.

ರಂಗಪ್ಪ : ನಿಜ. ಪ್ರಾಣಿಗಳಲ್ಲಿ ಎಣಿಸಲೂ ಆಗದಷ್ಟು ವಿಧಗಳಿವೆ.

©KTBS Not to be republished

**ಚಟುವಟಿಕೆ :** ಈ ಕೆಳಗೆ ಕೊಟ್ಟಿರುವ ಪ್ರಾಣಿಗಳನ್ನು ಚಿಕ್ಕ ಗಾತ್ರದಿಂದ ದೊಡ್ಡ ಗಾತ್ರದವರೆಗೆ ಕ್ರಮದಲ್ಲಿ ಜೋಡಿಸು.

ಹಸು, ನಾಯಿ, ಮೇಕೆ, ಪಾರಿವಾಳ, ಜೇನುಹುಳ, ಇರುವೆ, ಗುಬ್ಬಚ್ಚಿ, ಆನೆ, ಮಿಡತೆ, ಬೆಕ್ಕು.

__________ __________ __________ __________ __________

__________ __________ __________ __________ __________

ವನಜ : ಈ ಮರದಲ್ಲಿ, ಕೊಳದಲ್ಲಿ ಎಷ್ಟೊಂದು ಬಗೆಯ ಕೀಟಗಳು, ಹಕ್ಕಿಗಳು ಇವೆ.

ರಂಗಪ್ಪ : ಕೀಟಗಳು ಮತ್ತು ಹಕ್ಕಿಗಳು ಕೂಡಾ ಪ್ರಾಣಿಗಳೇ ಆಗಿವೆ.

ಅಲಿ : ಆಹಾರದಲ್ಲೂ ಅಷ್ಟೇ. ಕೆಲವು ಹುಲ್ಲು ತಿನ್ನುತ್ತವೆ, ಕೆಲವು ಕಾಳು ತಿನ್ನುತ್ತವೆ, ಕೆಲವು ಹುಳ ಹುಪ್ಪಟೆ, ಮಾಂಸ ತಿನ್ನುತ್ತವೆ.


ರಂಗಪ್ಪ : ಹೌದು. ಹುಲ್ಲು, ಕಾಳು, ಹಣ್ಣು, ತರಕಾರಿ ಹೀಗೆ ಬರೀ ಸಸ್ಯಗಳಿಂದ ಸಿಗುವ ಪದಾರ್ಥಗಳನ್ನು ತಿನ್ನುವಂತಹವು ಸಸ್ಯಾಹಾರಿಗಳು. ಹುಳುಗಳು, ಮೀನು, ಸಣ್ಣ ಪ್ರಾಣಿಗಳು ಹೀಗೆ ಇತರ ಪ್ರಾಣಿಗಳನ್ನು ತಿನ್ನುವವು ಮಾಂಸಾಹಾರಿಗಳು.




Not to be republished ©KTBS


ಸೀಮಾ : ನಾನು ಹಣ್ಣು ಮತ್ತು ಮೀನು ಎರಡನ್ನೂ ತಿನ್ನುತ್ತೇನೆ.

ರಂಗಪ್ಪ : ನೀನು ಮಿಶ್ರಾಹಾರಿ. ನಾಯಿ ಬೆಕ್ಕು ಮುಂತಾದ ಪ್ರಾಣಿಗಳೂ ಕೂಡ ಮಿಶ್ರಾಹಾರಿಗಳೇ. ಸಸ್ಯ ಮತ್ತು ಪ್ರಾಣಿ ಇವೆರಡರಿಂದಲೂ ಸಿಗುವ ಪದಾರ್ಥಗಳನ್ನು ತಿನ್ನುವಂತಹವು ಮಿಶ್ರಾಹಾರಿಗಳು.



**ಆಟ–ಆಡು**

ಮೈದಾನದಲ್ಲಿ ಸಸ್ಯಾಹಾರಿ, ಮಾಂಸಾಹಾರಿ ಹಾಗೂ ಮಿಶ್ರಾಹಾರಿಗಳೆಂದು ಮೂರು ಭಾಗ ಮಾಡಿರುವ ವೃತ್ತದ ಸುತ್ತ ನಿನ್ನ ಗೆಳೆಯರೊಡನೆ ನಿಲ್ಲು. ವೃತ್ತದ ಮಧ್ಯದಲ್ಲಿರುವ ಡಬ್ಬದಲ್ಲಿ ಪ್ರಾಣಿಗಳ ಚಿತ್ರಗಳಿವೆ. ಒಬ್ಬೊಬ್ಬರು ಒಂದೊಂದು ಚಿತ್ರವನ್ನು ಆಯ್ದುಕೊಳ್ಳಬೇಕು. ಚಿತ್ರದಲ್ಲಿರುವ ಪ್ರಾಣಿಯ ಆಹಾರ ಅಭ್ಯಾಸಕ್ಕೆ ಅನುಗುಣವಾಗಿ ಆಯಾ ಭಾಗದಲ್ಲಿ ನಿಲ್ಲಬೇಕು. ತಪ್ಪಿದವರು ಔಟ್.




ಈ ಆಟವನ್ನು ಹೀಗೂ ಆಡಬಹುದು. ನೀನು ನಿನ್ನ ಗೆಳೆಯರೊಂದಿಗೆ ವೃತ್ತಾಕಾರವಾಗಿ ನಿಲ್ಲು. ಒಬ್ಬರು ವೃತ್ತದ ಮಧ್ಯೆ ನಿಂತು ಪ್ರಾಣಿಗಳ ಹೆಸರನ್ನು ಕೂಗಲಿ. ಆಯಾ ಪ್ರಾಣಿಯ ಆಹಾರ ಅಭ್ಯಾಸಕ್ಕೆ ತಕ್ಕ ಭಾಗದಲ್ಲಿ ಹೋಗಿ ನಿಲ್ಲಲಿ. ತಪ್ಪಾದರೆ ಔಟ್.

ತೆರೇಸಾ : ಓ, ಕತ್ತಲಾಗುತ್ತಿದೆ. ಮನೆಗೆ ಹೋಗೋಣ.

ರಂಗಪ್ಪ : ಸರಿ. ಎಲ್ಲರೂ ಈಗ ಮನೆಗೆ ಹೋಗಿ. ನಾಳೆ ಭಾನುವಾರ. ಬೆಳಿಗ್ಗೆ ಬೇಗ ಎದ್ದು ತೋಟಕ್ಕೆ ಬನ್ನಿ. ಎಲ್ಲಾ ಸೇರಿ ಪಕ್ಷಿಗಳನ್ನು ನೋಡೋಣ.

©KTBS Not to be republished

**ಈ ಪ್ರಾಣಿಗಳು ಎಲ್ಲಿ ವಾಸಿಸುತ್ತವೆ? ಗೆರೆ ಎಳೆದು ಹೊಂದಿಸು.**

| ಅ | ಆ |
|---|---|
| ಸಿಂಹ | ಹುತ್ತ |
| ಹಾವು | ಗುಹೆ |
| ಮೀನು | ಮರ |
| ಮಂಗ | ಕೊಳ |
| ಜೇನು | ಬಿಲ |
| ನಕ್ಷತ್ರ ಮೀನು | ನದಿ |
| ಕೊಕ್ಕರೆ | ಗೂಡು |
| ಇಲಿ | ಸಮುದ್ರ |
| ಜಿರಳೆ | ಜೇನುಗೂಡು |
| ಗೀಜಗ | ಸಂದಿಗಳು |

**ಚಟುವಟಿಕೆ :** ಈ ಚಿತ್ರದಲ್ಲಿ ಕಂಡುಬರುವ ಪ್ರಾಣಿಗಳ ಹೆಸರನ್ನು ಅಲ್ಲಿರುವ ಖಾಲಿ ಜಾಗದಲ್ಲಿ ಬರೆ.



©KTBS Not to be republished

# ಪಾಠ – 2

# ಹಸಿರು ಸಿರಿ

**ಈ ಪಾಠವನ್ನು ಕಲಿತ ನಂತರ ನೀನು,**

- ಸಸ್ಯಗಳ ಗಾತ್ರ, ಬೆಳೆಯುವ ಪ್ರದೇಶ, ಬಣ್ಣ ಮತ್ತು ಆಕಾರಗಳಲ್ಲಿರುವ ವೈವಿಧ್ಯದ ಬಗ್ಗೆ ತಿಳಿದಿರುವ ಅಂಶಗಳನ್ನು ವ್ಯಕ್ತಪಡಿಸುವೆ ಹಾಗೂ ಸಸ್ಯಗಳನ್ನು ಬೆಳೆಸಲು ಆಸಕ್ತಿ ವಹಿಸುವೆ.
- ನಿನ್ನ ಪ್ರದೇಶದಲ್ಲಿ ಕಂಡುಬರುವ ಸಸ್ಯ ವೈವಿಧ್ಯದ ಬಗ್ಗೆ ತಿಳಿಯುವೆ.
- ಬೆಳೆಗಳ ಬಗ್ಗೆ ತಿಳಿಯುವೆ.
- ವಿವಿಧ ರೀತಿಯ ಎಲೆಗಳನ್ನು ಸಂಗ್ರಹಿಸಿ, ಅವುಗಳ ಆಕಾರ, ಬಣ್ಣ, ರಚನೆ, ವಾಸನೆಯ ಬಗ್ಗೆ ಚರ್ಚಿಸುವೆ.
- ಕೆಲವು ಋತುಗಳಲ್ಲಿ ಎಲೆಗಳು ಉದುರುವುದನ್ನು ಗಮನಿಸುವೆ.
- ಉದುರಿದ ಎಲೆಗಳನ್ನು ಬಳಸಿ ಗೊಬ್ಬರ ತಯಾರಿಸುವ ವಿಧಾನವನ್ನು ತಿಳಿಯುವೆ.
- ವಿವಿಧ ವಸ್ತುಗಳ ಮೇಲೆ ಚಿತ್ರಿಸಿರುವ ಎಲೆಗಳನ್ನು ಗುರುತಿಸುವೆ.

ಹಿಂದಿನ ತರಗತಿಯಲ್ಲಿ ನೀನು ಈಗಾಗಲೇ ಸಸ್ಯಗಳ ಬಗ್ಗೆ ಸ್ವಲ್ಪ ತಿಳಿದಿರುವೆ. ನಿನ್ನ ಸುತ್ತಲಿರುವ ಅನೇಕ ಸಸ್ಯಗಳನ್ನು ನೀನು ಗಮನಿಸಿರಬಹುದು. ಅವುಗಳಲ್ಲಿ ನಿನಗೆ ಪರಿಚಯವಿರುವ 10 ಸಸ್ಯಗಳ ಹೆಸರನ್ನು ಇಲ್ಲಿ ಬರೆ.

________, ________, ________, ________,

________, ________, ________, ________,

________, ________ .

ಗುಲಾಬಿ ಹಾಗೂ ದಾಸವಾಳದ ಸಸ್ಯಗಳನ್ನು ಗಮನಿಸು. ಇವುಗಳ ಕೊಂಬೆಗಳು ಸಸ್ಯದ ಕೆಳಭಾಗದಿಂದಲೇ ಕವಲು ಕವಲಾಗಿ ಬೆಳೆಯುತ್ತವೆಯಲ್ಲವೆ? ಹೀಗಾಗಿ ಈ ಸಸ್ಯಗಳು ಪೊದೆಯಂತೆ ಕಾಣುತ್ತವೆ. ಆದ್ದರಿಂದಲೇ ಈ ಸಸ್ಯಗಳನ್ನು **ಪೊದೆ** ಅಥವಾ **ಪೊದರು** ಎನ್ನುವರು.

©KTBS Not to be republished

ಈಗ ನೀನು ಪಟ್ಟಿಮಾಡಿರುವ ಸಸ್ಯಗಳಲ್ಲಿ ಮೂಲಿಕೆ (ಸಣ್ಣ ಗಿಡ) ಪೊದೆ/ಮರ/ಬಳ್ಳಿ ಯಾವುದೆಂದು ಹೇಳು.

ಈ ಸಸ್ಯಗಳನ್ನು ಮೂಲಿಕೆ (ಸಣ್ಣ ಗಿಡ), ಪೊದೆ, ಮರ, ಬಳ್ಳಿ ಎಂದೇಕೆ ವಿಂಗಡಿಸಿದೆ? ವಿವರಿಸು.



ಮೂಲಿಕೆಗಳು ಸಣ್ಣ ಗಾತ್ರದ ಸಸ್ಯಗಳು. ಇವುಗಳ ಕಾಂಡಗಳು ಮೃದುವಾಗಿರುತ್ತವೆ.



ಪೊದರುಗಳ ಕಾಂಡಗಳು ಸ್ವಲ್ಪ ಗಟ್ಟಿಯಾಗಿರುತ್ತವೆ. ಕೊಂಬೆಗಳು ಸಸ್ಯದ ಬುಡದಿಂದಲೇ ಹುಟ್ಟಿ ಹರಡಿಕೊಂಡಿರುತ್ತವೆ.



ಮರಗಳ ಕಾಂಡಗಳು ಗಟ್ಟಿಯಾಗಿರುತ್ತವೆ. ಇವು ಎತ್ತರವಾಗಿ ಬೆಳೆಯುತ್ತವೆ.




ಬಳ್ಳಿಗಳ ಕಾಂಡಗಳು ಉದ್ದವಾಗಿದ್ದು, ಸಣ್ಣದಾಗಿರುತ್ತವೆ.

ಸಸ್ಯಗಳನ್ನು ಅವುಗಳ ಎತ್ತರ ಹಾಗೂ ಕಾಂಡದ ಗಟ್ಟಿತನಕ್ಕೆ ಅನುಗುಣವಾಗಿ ಮೂಲಿಕೆ (ಸಣ್ಣ ಗಿಡ), ಪೊದೆ, ಮರ ಹಾಗೂ ಬಳ್ಳಿ ಎಂದು ವರ್ಗೀಕರಿಸುತ್ತಾರೆ.

Not ©KTBS be republished

ಸಸ್ಯಗಳು ಆಹಾರ, ಮೇವು, ಗೊಬ್ಬರ, ಸೌದೆ, ಹಣ್ಣು, ಔಷಧಿ ಮುಂತಾದವುಗಳನ್ನು ನೀಡುತ್ತವೆ ಎಂದು ನಿನಗೆ ತಿಳಿದಿದೆ. ಇವೆಲ್ಲವೂ ಸಸ್ಯದ ವಿವಿಧ ಭಾಗಗಳಿಂದ ಬರುತ್ತವೆ.

ಈ ಚಿತ್ರದಲ್ಲಿ ಸಸ್ಯದ ಭಾಗಗಳ ಹೆಸರನ್ನು ಕೊಟ್ಟ ಜಾಗದಲ್ಲಿ ತುಂಬಿಸು.



ನೀನು ನೋಡಿರುವ ಒಂದು ಸಸ್ಯದ ವಿವಿಧ ಭಾಗಗಳ ಬಣ್ಣಗಳನ್ನು ಬರೆ.

ಎಲೆ ______________ ಬೇರು ______________

ಕಾಂಡ ______________ ಕಾಯಿ ______________

ಹೂ ______________ ಹಣ್ಣು ______________

**ಓದಿ–ತಿಳಿ**

- ಎಲೆಗಳು ಸಾಮಾನ್ಯವಾಗಿ ಹಸಿರಾಗಿರುತ್ತವೆ.
- ಕಾಂಡವು ಹಸಿರು, ಊದಾ ಅಥವಾ ಕಂದು ಬಣ್ಣವಿರುತ್ತದೆ.
- ಹೂವಿನ ಬಣ್ಣ ಅನೇಕ– ಕಂದು, ಹಳದಿ, ಬಿಳಿ, ಕೇಸರಿ ಇತ್ಯಾದಿ
- ಕಾಯಿ ಸಾಮಾನ್ಯವಾಗಿ ಹಸಿರಾಗಿರುತ್ತದೆ.
- ಹಣ್ಣುಗಳು ವಿವಿಧ ಬಣ್ಣಗಳಲ್ಲಿರುತ್ತವೆ – ಕೆಂಪು, ಹಳದಿ, ಹಸಿರು ಇತ್ಯಾದಿ.

©KTBS Not to be republished

ನಿನ್ನ ಮನೆಯಲ್ಲಿ ಉಪಯೋಗಿಸುವ ಸಸ್ಯಗಳ ವಿವರಗಳನ್ನು ಮಾದರಿಯಂತೆ ಈ ಕೋಷ್ಟಕದಲ್ಲಿ ಬರೆ.

| | ಸಸ್ಯದ ಹೆಸರು | ಗಿಡ/ಪೊದೆ/ ಮರ/ಬಳ್ಳಿ | ಉಪಯೋಗಿಸುವ ಸಸ್ಯದ ಭಾಗ | ಬಳಕೆ |
|---|---|---|---|---|
| ಮಾದರಿ : | ಹೀರೇಬಳ್ಳಿ | ಬಳ್ಳಿ | ಕಾಯಿ | ತರಕಾರಿ |
| | | | | |

**ಚಟುವಟಿಕೆ :**

- ನಿನ್ನ ಗೆಳೆಯರ ಕೋಷ್ಟಕದೊಡನೆ, ನಿನ್ನ ಕೋಷ್ಟಕವನ್ನು ಸೇರಿಸಿ ಒಂದು ದೊಡ್ಡ ಪಟ್ಟಿ ತಯಾರಿಸಿ, ಶಾಲೆಯಲ್ಲಿ ಪ್ರದರ್ಶಿಸು.
- ನಿನ್ನ ಗೆಳೆಯರೊಡನೆ ಸೇರಿ ಮನೆಯ ಮತ್ತು ಶಾಲೆಯ ಸುತ್ತ ಬೆಳೆಯುವ ಪ್ರತಿಯೊಂದು ಬಗೆಯ ಸಸ್ಯವನ್ನು ಎಣಿಸು.
- ಕೊತ್ತಂಬರಿ, ಪುದೀನಾ, ಕರಿಬೇವಿನ ಎಲೆಗಳನ್ನು ಅಡುಗೆಗೆ ಏಕೆ ಬಳಸುತ್ತಾರೆ? ತಿಳಿದುಕೋ. ಹೆಚ್ಚಿನ ವಾಸನೆ ಬೀರುವ ಎಲೆಗಳಿರುವ ಐದು ಸಸ್ಯಗಳ ಹೆಸರನ್ನು ಬರೆ.

________________ ________________

________________ ________________

________________

- ವಿವಿಧ ರೀತಿಯ ಎಲೆಗಳನ್ನು ಸಂಗ್ರಹಿಸು. ಅವುಗಳ ಗಾತ್ರ, ಆಕಾರಗಳನ್ನು ಗಮನಿಸು. ಅವುಗಳನ್ನು ಒಣಗಿಸಿ, ಈಗಾಗಲೇ ಉಪಯೋಗಿಸಿದ ನೋಟ್ ಪುಸ್ತಕದಲ್ಲಿ ಅಂಟಿಸು.

©KTBS Not to be republished

**ಹಾಡಿ–ನಲಿ**




ನಾನು ಹಸಿರು, ಗಿಡದ ಉಸಿರು
ನಮ್ಮದಿಲ್ಲಿ ವಿವಿಧ ಗಾತ್ರ,
ಅಪರೂಪಕ್ಕೆ ಬದಲು ಬಣ್ಣ.
ಸುವಾಸನೆಯು ಇನ್ನೂ ಚೆನ್ನ.



ಹುಟ್ಟಿ ಬೆಳೆದು ಉದುರಿ ಬಿದ್ದು
ಆಗುವೆ ನಾ ಗೊಬ್ಬರ
ಸಾರವಾಗಿ ಮರಳಿ ಹೋಗಿ
ಸೇರುವೆ ನಾ ಗಿಡ ಮರ.

ಗಿಡದ ಮೇಲೆ ಇದ್ದು ನಾನು
ಅದರ ಸೇವೆ ಮಾಡುವೆ
ಉದುರಿ ಚದರಿ ಬಿದ್ದು ನಾನು
ಮರಳಿ ಅದನೆ ಸೇರುವೆ.




**ಚಟುವಟಿಕೆ :** ನಿನ್ನ ಗೆಳೆಯರೊಂದಿಗೆ ಸೇರಿ ಶಾಲೆಯಲ್ಲಿ ಉದುರಿ ಬಿದ್ದಿರುವ ಎಲೆಗಳನ್ನು ಒಂದೆಡೆ ಸಂಗ್ರಹಿಸು. ಎಲೆಗಳಿಂದ ಗೊಬ್ಬರವನ್ನು ತಯಾರಿಸುವುದು ಹೇಗೆ ಎಂದು ಶಿಕ್ಷಕರನ್ನು ಕೇಳಿ ತಿಳಿದುಕೊ. ನಂತರ ಎಲ್ಲರೂ ಸೇರಿ ಗೊಬ್ಬರ ತಯಾರಿಸಿ. ಈ ಗೊಬ್ಬರವನ್ನು ಏತಕ್ಕೆ ಬಳಸಬಹುದು ಎಂದು ಗೆಳೆಯರೊಂದಿಗೆ ಚರ್ಚಿಸು, ಬಳಸು.

©KTBS Not to be republished

**ವಿವಿಧ ಎಲೆಗಳ ಚಿತ್ರಗಳನ್ನು ಬರೆ.**

**ಮಾಡಿ–ನೋಡು**

- ಮಣ್ಣನ್ನು ಒದ್ದೆಮಾಡಿ ಅದರ ಮೇಲೆ ಎಲೆಗಳನ್ನು ಒತ್ತಿ ಚಿತ್ರ ಬಿಡಿಸು.
- ಕಾಗದವನ್ನು ಕತ್ತರಿಸಿ, ಎಲೆಗಳ ಆಕೃತಿ ತಯಾರಿಸು. ಇವೆಲ್ಲದಕ್ಕೂ ಬಣ್ಣ ಹಾಕು.

ವಿವಿಧ ವಸ್ತುಗಳ ಮೇಲೆ ಚಿತ್ರಿಸಿರುವ ಎಲೆಗಳನ್ನು ಗಮನಿಸು.




**ಮಾಡಿ–ನೋಡು :** ಕಾಗದದ ಎಲೆಗಳಿಂದ ತೋರಣ ಮಾಡಿ ಶಾಲೆಯನ್ನು ಅಲಂಕರಿಸು.

©KTBS Not to be republished


ನೀನು ನೀರಿನಲ್ಲಿರುವ ಸಸ್ಯಗಳನ್ನು ಗಮನಿಸಿರಬಹುದು. ಅವು ಯಾವುವೆಂದು ಹೇಳಬಲ್ಲೆಯಾ?

ತಾವರೆ, ನೈದಿಲೆ ಇತ್ಯಾದಿ ಸಸ್ಯಗಳು ನೀರಿನಲ್ಲಿ ಬೆಳೆಯುತ್ತವೆ. ಇದೊ, ಅವುಗಳ ಎಲೆಗಳನ್ನು ನೋಡು, ಅವು ತೇಲುವಂತೆ ಕಾಣುತ್ತದೆ.





ದೊಡ್ಡ ಮರಗಳ ಕಾಂಡಗಳ ಮೇಲೆ ಬೆಳೆಯುವ ಸಸ್ಯಗಳ ಬಗ್ಗೆ ನಿನಗೆ ಗೊತ್ತೆ? ಊರಿನಲ್ಲಿ ಸುತ್ತಾಡುವಾಗ ಅವುಗಳನ್ನು ಗಮನಿಸು. ಇವೇ ಅಪ್ಪು ಸಸ್ಯಗಳು.



ಹೊಲಗದ್ದೆಗಳನ್ನು ಗಮನಿಸಿದ್ದೀಯ? ಅಲ್ಲಿ ಏನೇನು ಬೆಳೆಯುತ್ತಾರೆ? ಬಿಟ್ಟ ಸ್ಥಳಗಳಲ್ಲಿ ಬರೆ. ಶಿಕ್ಷಕರ ನೆರವು ಪಡೆ.

__________, __________, __________, __________, __________,

__________, __________, __________, __________, __________.

Not ©KTBS to be republished


### ಓದಿ – ತಿಳಿ

ನಾವು ದಿನ ನಿತ್ಯ ಬಳಸುವ ಅಕ್ಕಿ, ರಾಗಿ, ಜೋಳ, ಬೇಳೆ ಕಾಳುಗಳು, ಎಣ್ಣೆ ಕಾಳುಗಳು ಮುಂತಾದುವು ನಮಗೆ ಸಸ್ಯಗಳಿಂದ ದೊರಕುತ್ತವೆ. ಈ ಸಸ್ಯಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಆದ್ದರಿಂದ ಇದಕ್ಕೆ ವಿಶಾಲವಾದ ಜಾಗಗಳು ಬೇಕು. ಈ ಜಾಗಗಳೇ ಹೊಲಗದ್ದೆಗಳು. ಇಲ್ಲಿ ಬೆಳೆಸುವ ಸಸ್ಯಗಳೇ ಬೆಳೆಗಳು.

ನಿನ್ನ ಸುತ್ತಮುತ್ತ ಎಷ್ಟೊಂದು ವಿಧದ ಸಸ್ಯಗಳಿವೆ! ಅವುಗಳಿಂದ ನಮಗೆ ಎಷ್ಟು ತರಹದ ವಸ್ತುಗಳು ದೊರಕುತ್ತವೆ ಎಂದು ನಿನಗೆ ಈಗಾಗಲೆ ತಿಳಿದಿದೆ.

### ಮಾಡಿ–ನೋಡು

- ನಿನ್ನ ಕುಟುಂಬದವರೊಂದಿಗೆ ಮನೆಯಲ್ಲಿ ಕೈತೋಟ ಮಾಡು. ಹೂ, ತರಕಾರಿ, ಹಣ್ಣುಗಳ ಗಿಡಗಳನ್ನು ನೆಟ್ಟು ಅವುಗಳಿಗೆ ನೀರು, ಗೊಬ್ಬರ ಹಾಕಿ ಚೆನ್ನಾಗಿ ಬೆಳೆಸು.
- ನಿನ್ನ ಗೆಳೆಯರೊಂದಿಗೆ ಸೇರಿ ಶಿಕ್ಷಕರ ಸಹಾಯದಿಂದ ಶಾಲೆಯಲ್ಲಿ ಬಗೆ ಬಗೆಯ ಸಸ್ಯಗಳನ್ನು ಬೆಳೆಸು, ಪೋಷಿಸು.



- ಅನಗತ್ಯವಾಗಿ ಸಸ್ಯಗಳನ್ನು, ಎಲೆಗಳನ್ನು ಕೀಳದಂತೆ ನೋಡಿಕೊ.

©KTBS Not to be republished

## ಪಾಠ – 3

# ಗೂಬಕ್ಕನ ನ್ಯಾಯ

**ಈ ಪಾಠವನ್ನು ಕಲಿತ ನಂತರ ನೀನು,**
- ಸಜೀವಿಗಳು ಮತ್ತು ನಿರ್ಜೀವಿಗಳಿಗಿರುವ ವ್ಯತ್ಯಾಸಗಳನ್ನು ಗುರುತಿಸುವೆ.
- ಪ್ರಾಣಿಗಳಿಗೆ ಮತ್ತು ಸಸ್ಯಗಳಿಗೆ ಇರುವ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಗುರುತಿಸುವೆ.



ಒಮ್ಮೆ ಮಣ್ಣಿಗೂ, ಮಾವಿನ ಮರಕ್ಕೂ ನಾನು ಹೆಚ್ಚೋ, ನೀನು ಹೆಚ್ಚೋ ಎನ್ನುವ ಬಗ್ಗೆ ವಾದ ಪ್ರಾರಂಭವಾಯಿತು. ವಾದ ಬಿಸಿಯೇರಿತು.

ಗಲಾಟೆ ಕೇಳಿ ಬೆಕ್ಕಕ್ಕ, ಮಂಗಣ್ಣ, ಹಾವಣ್ಣ, ಗೂಬಕ್ಕ ಎಲ್ಲರೂ ಅಲ್ಲಿ ಸೇರಿದರು. ಎಲ್ಲರೂ ಗೂಬಕ್ಕನಿಗೆ ಜಗಳ ಪರಿಹಾರ ಮಾಡಲು ಕೇಳಿ ಕೊಂಡವು. ಸರಿ! ಗೂಬಕ್ಕ ಗಂಟಲು ಸರಿಪಡಿಸಿಕೊಂಡು ಇಬ್ಬರಿಗೂ ತಮ್ಮ ವಾದವನ್ನು ಹೇಳುವಂತೆ ಸೂಚನೆ ನೀಡಿದಳು.



© KTBS Not to be republished

ಮಣ್ಣು : ನಾನಿಲ್ಲದಿದ್ದರೆ ಈ ಮಾವು ಎಲ್ಲಿರುತ್ತಿತ್ತು? ನಾನಿಲ್ಲದೆ ಅದು ಹುಟ್ಟಲು ಆಗದು. ಅದಕ್ಕೆ ಬೇಕಾದ ಆಹಾರ, ನೀರು ಎಲ್ಲಾ ನಾನೇ ಕೊಡ್ತೀನಿ. ಹಾಗಾಗಿ ನಾನೇ ಹೆಚ್ಚು.

ಮಾವು : ನಾನು ಎಲ್ಲರಿಗೂ ಸಿಹಿಯಾದ ಹಣ್ಣುಗಳನ್ನು ಕೊಡ್ತೀನಿ. ಹಕ್ಕಿಗಳಿಗೆ ಗೂಡು ಕಟ್ಟಲು ಅವಕಾಶ ಕೊಡ್ತೀನಿ. ಮೇಲಾಗಿ ನಾನೊಬ್ಬ ಜೀವಿ ಕೂಡ.

ಗೂಬಕ್ಕ : ಅರೆ ಮಾವೆ! ನೀನು ಜೀವಿ ಎಂದು ಹೇಗೆ ಹೇಳ್ತಿಯಾ?

ಮಾವು : ನೋಡು, ನನ್ನ ಬೀಜಗಳು ಮೊಳಕೆಯಾಗಿ ಸಸಿಗಳು ಹುಟ್ಟಿ, ಬೆಳೆದು, ನನ್ನಂತೆ ದೊಡ್ಡ ಮರವಾಗುತ್ತವೆ.

ಗೂಬಕ್ಕ : ಸರಿ ಸರಿ, ಮಣ್ಣಿಗೆ ಇವೆಲ್ಲ ಆಗಲ್ಲ. ಆದರೆ ನೀನು ಬೆಳೆಯಲು ನೀರು ಆಹಾರ ಬೇಕಲ್ಲ. ಅವು ಹೇಗೆ ಸಿಗುತ್ತೆ?

ಮಾವು : ಮಣ್ಣಿನಿಂದ.

ಗೂಬಕ್ಕ : ನೋಡಿದೆಯಾ, ನೀನು ಬೆಳೆಯಲು ಮಣ್ಣು ಬೇಕಲ್ಲ.

ಮಾವು : ಆದರೆ ನನ್ನ ಉದುರಿದ ಎಲೆಗಳಿಂದ ನನಗೆ ಆಹಾರ ಬರುತ್ತಲ್ಲ.

ಮಣ್ಣು : ಆದರೆ ಅದು ನನ್ನ ಮೂಲಕ ತಾನೇ ಬರೋದು.

ಗೂಬಕ್ಕ : ನೋಡಿದಿರಾ, ನಮಗೆ ಇಬ್ಬರೂ ಬೇಕು. ಇಲ್ಲಿ ಯಾರೂ ಹೆಚ್ಚಲ್ಲ, ಯಾರೂ ಕಡಿಮೆಯಲ್ಲ.

ಅಳಿಲಣ್ಣ : ಗೂಬಕ್ಕ, ಮಾವು ಜೀವಿ ಅಂತ ಹೇಳಿತು. ಹಾಗಾದರೆ ಮಣ್ಣು?

ಗೂಬಕ್ಕ : ಅದು ಬೆಳೆಯೋದಿಲ್ಲ, ಅದಕ್ಕೆ ಆಹಾರಾನೂ ಬೇಡ, ಹಾಗಾಗಿ ಅದು ಜೀವಿಯಲ್ಲ. ಅದು ನಿರ್ಜೀವಿ.

ಮಂಗಣ್ಣ : ಅಲ್ಲ ಅಕ್ಕ, ನೀವು ಇಬ್ಬರೂ ಸಮ. ಇಬ್ಬರೂ ಬೇಕು ಅಂದ್ಯಲ್ಲ ಏಕೆ?

©KTBS Not to be republished

ಗೂಬಕ್ಕ : ನಮ್ಮ ಸುತ್ತ ನೋಡು ಮಂಗಣ್ಣ. ಮಣ್ಣಿದೆ, ನೀರಿದೆ, ಗಾಳಿ ಎಲ್ಲಾ ಇವೆ. ಇವೆಲ್ಲ ನಿರ್ಜೀವಿಗಳು. ಆದರೆ ನೀನೇ ಯೋಚಿಸು ಗಾಳಿ, ನೀರು, ಮಣ್ಣು ಇಲ್ಲದೆ ನಾವು ಬದುಕೋಕೆ ಆಗುತ್ತದೆಯೇ?

ಎಲ್ಲಾ : ಇಲ್ಲವೇ ಇಲ್ಲ.

ನೆರೆದವರೆಲ್ಲ ಗೂಬಕ್ಕನಿಗೆ ಜೈಕಾರ ಹಾಕುತ್ತಾ ಚದುರಿದರು.



ನಿನ್ನ ಸುತ್ತಲೂ ಹಲವು ವಸ್ತುಗಳನ್ನು ನೀನು ನೋಡಿರುವೆ. ಅವುಗಳನ್ನು ಜೀವಿಗಳು, ನಿರ್ಜೀವಿಗಳು ಎಂದು ವಿಂಗಡಿಸಿ ಕೆಳಗಿನ ಕೋಷ್ಟಕದಲ್ಲಿ ಬರೆ.

| **ಜೀವವಿರುವ ವಸ್ತುಗಳು (ಜೀವಿಗಳು)** | **ಜೀವವಿಲ್ಲದ ವಸ್ತುಗಳು (ನಿರ್ಜೀವಿಗಳು)** |
|---|---|
| | |

ಜೀವಿಗಳು ಹಾಗೂ ನಿರ್ಜೀವಿಗಳನ್ನು ಹೇಗೆ ಗುರುತಿಸುವೆ? ಗೂಬಕ್ಕನ ಮಾತುಗಳನ್ನು ನೆನಪಿಸಿಕೊ.

©KTBS Not to be republished

ಕೆಳಗಿನ ಚಿತ್ರಗಳನ್ನು ಹೋಲಿಕೆ ಮಾಡು.

| ಮೊದಲು | ನಂತರ |
|---|---|
|  |  |
|  |  |
|  |  |
|  |  |
|  |  |

ಇಲ್ಲಿ ಜೀವಿಗಳು ಯಾವುವು? ಅವುಗಳನ್ನು ಹೇಗೆ ಗುರುತಿಸಿದೆ?


ಜೀವಿಗಳು ಬೆಳೆಯುತ್ತವೆ.

©KTBS Not to be republished



ಮೇಲಿನ ಚಿತ್ರಗಳನ್ನು ಗಮನಿಸು. ನೀನೇನು ತಿಳಿದೆ ಹೇಳು.
ಮೇಜು, ಕುರ್ಚಿಗಳು ಆಹಾರ ತಿನ್ನುತ್ತವೆಯೆ?

**ಎಲ್ಲಾ ಜೀವಿಗಳಿಗೂ ಆಹಾರ ಬೇಕು.**



ಈ ಚಿತ್ರಗಳಿಂದ ನಿನಗೇನು ತಿಳಿಯಿತು?

© KTBS Not to be republished

ಪುಸ್ತಕದಿಂದ ಮತ್ತೊಂದು ಪುಸ್ತಕ, ಗೊಂಬೆಯಿಂದ ಮತ್ತೊಂದು ಗೊಂಬೆ ಹುಟ್ಟುತ್ತವೆಯೇ? ಯೋಚಿಸು.

**ಜೀವಿಗಳು ತಮ್ಮನ್ನೇ ಹೋಲುವ ಜೀವಿಗಳಿಗೆ ಜನ್ಮ ನೀಡುತ್ತವೆ.**

ಕೆಳಗಿನ ಚಿತ್ರಗಳನ್ನು ಗಮನಿಸು.






ಈ ಚಿತ್ರಗಳಿಂದ ನಿನಗೇನು ತಿಳಿಯಿತು?

**ಜೀವಿಗಳು ಉಸಿರಾಡುತ್ತವೆ.**

### ಮಾಡಿ–ನೋಡು



ರಾಗಿ, ಬದನೆ, ಟೊಮ್ಯಾಟೊ, ಮೆಣಸಿನ ಕಾಯಿ ಇವುಗಳಲ್ಲಿ ಯಾವುದಾದರೂ ಒಂದರ ಬೀಜಗಳನ್ನು ಸಂಗ್ರಹಿಸು. ಒಂದು ಖಾಲಿ ಮಡಕೆ ಅಥವಾ ಡಬ್ಬದಲ್ಲಿ ಮಣ್ಣನ್ನು ತುಂಬಿಸು. ಸಂಗ್ರಹಿಸಿದ ಬೀಜಗಳನ್ನು ಆ ಮಣ್ಣಿನಲ್ಲಿ ನೆಡು. ಪ್ರತಿದಿನ ಸ್ವಲ್ಪ ನೀರು ಸಿಂಪಡಿಸು. ಒಂದು ವಾರದಲ್ಲಿ ಆಗುವ ಬದಲಾವಣೆಗಳನ್ನು ಗಮನವಿಟ್ಟು ನೋಡು. ಗಮನಿಸಿದ ಬದಲಾವಣೆಗಳನ್ನು ಇಲ್ಲಿ ಬರೆ.



___________________________________

___________________________________


ಸಸ್ಯ ಮತ್ತು ಪ್ರಾಣಿಗಳು ಜೀವಿಗಳಾಗಿವೆ. ಗಾಳಿ, ನೀರು, ಮಣ್ಣು ಮುಂತಾದವು ನಿರ್ಜೀವಿಗಳು. ಜೀವಿಗಳು ಬದುಕಲು ಗಾಳಿ, ನೀರು, ಮಣ್ಣು ಬೇಕೇ ಬೇಕು. ಜೀವಿ ಮತ್ತು ನಿರ್ಜೀವಿಗಳು ಕೂಡಿ ಬಾಳುವ ಒಂದು ವ್ಯವಸ್ಥೆಯೇ ಪರಿಸರ.

©KTBS Not to be republished

ಸಸ್ಯ ಮತ್ತು ಪ್ರಾಣಿಗಳ ನಡುವೆ ಕೆಲವು ಹೋಲಿಕೆಗಳಿವೆ. ಉದಾಹರಣೆಗೆ, ಸಸ್ಯ ಮತ್ತು ಪ್ರಾಣಿಗಳು ಉಸಿರಾಡುತ್ತವೆ. ಇಲ್ಲಿ ಕೊಟ್ಟಿರುವ ಚಿತ್ರಗಳನ್ನು ಗಮನಿಸು. ಆ ಹೋಲಿಕೆಗಳು ಯಾವುವೆಂದು ಆವರಣದಲ್ಲಿ ಬರೆ.










© KTBS
Not to be republished

ಸಸ್ಯ ಮತ್ತು ಪ್ರಾಣಿಗಳ ನಡುವೆ ಇರುವ ವ್ಯತ್ಯಾಸಗಳನ್ನು ಗಮನಿಸಿರುವೆ? ಕೆಳಗೆ ಕೊಟ್ಟಿರುವ ಚಿತ್ರಗಳನ್ನು ನೋಡು. ಕಂಡು ಬರುವ ವ್ಯತ್ಯಾಸಗಳನ್ನು ಆವರಣದಲ್ಲಿ ಬರೆ.









©KTBS Not to be republished


# ಪಾಠ – 4

## ಹನಿ ಹೇಳಿದ ಕಥೆ

**ಈ ಪಾಠವನ್ನು ಕಲಿತ ನಂತರ ನೀನು,**

- ನೀರಿನ ವಿವಿಧ ಆಕರಗಳನ್ನು ಗುರುತಿಸುವೆ.
- ಮನೆ ಬಳಕೆಯ ನೀರನ್ನು ಎಷ್ಟು ದೂರದಿಂದ ತರುವರು ಎಂಬುದನ್ನು ವಿವರಿಸುವೆ.
- ಪ್ರತಿ ನಿತ್ಯದ ಕೆಲಸಗಳಿಗೆ ನೀರಿನ ಅವಶ್ಯಕತೆ ಮತ್ತು ಬಳಕೆಯ ಪ್ರಮಾಣವನ್ನು ಅರಿಯುವೆ.
- ನೀರನ್ನು ಸಂಗ್ರಹಿಸುವ ಪಾತ್ರೆಗಳ ಗಾತ್ರ, ಆಕಾರ ಮತ್ತು ಮಾಡಲ್ಪಟ್ಟ ಸಾಮಗ್ರಿಯ ಬಗ್ಗೆ ಚರ್ಚಿಸುವೆ.
- ನೀರಿನ ಸಂಗ್ರಹಣೆಯಲ್ಲಿ ಮತ್ತು ಬಳಕೆಯಲ್ಲಿ ಅನುಸರಿಸುವ ಸುರಕ್ಷಿತ ವಿಧಾನಗಳನ್ನು ಅರಿಯುವೆ.


ಓ ಹೋಯ್....... ಪುಟಾಣಿ!.......
ನಾನು ನೀರಿನ ಹನಿ. ನಾನು
ಮೋಡದಿಂದ ಹನಿ ಹನಿಯಾಗಿ,
ಮಳೆಯಾಗಿ ಭೂಮಿಗೆ ಬರುತ್ತಿದ್ದೇನೆ.
ನಿನ್ನ ಮೇಲೆ ಬೀಳುತ್ತೇನೀಗ.....
ನೆನೆದು ಬಿಡುವೆ! ಗೆಳೆಯರೊಡನೆ
ಒಳಹೋಗು.........






ಓ! ಹನಿಯಣ್ಣಾ ನೆನೆಯುವುದು ನನಗಿಷ್ಟ.
ನೀನೆಲ್ಲಿ ಹೊರಟೆ? ನಾನೂ, ನನ್ನ
ಗೆಳೆಯರೂ ನಿನ್ನೊಂದಿಗೆ ಬರುವೆವು.
ಅಣ್ಣಾ ಕರೆದೊಯ್ಯುವೆಯಾ....?

©KTBS Not to be republished




©KTBS Not to be republished






______________ ______________





______________ ______________



ಸರಿ, ಮಕ್ಕಳೇ...........
ನಾನೀಗ ಸೇರಿದ ಜಾಗಗಳೇ ನೀರಿನ ಆಕರಗಳು ಎಂದು ನಿಮಗೀಗಾಗಲೇ ಗೊತ್ತು.



ಹನಿಯಣ್ಣಾ....... ನಮ್ಮ ಊರಿನಲ್ಲೂ ನೀರಿನ ಹಲವು ಆಕರಗಳಿವೆ ಗೊತ್ತೇ?

©KTBS Not to be republished


ಹೌದೇ?



**ಚಟುವಟಿಕೆ :**

ಮಕ್ಕಳೇ....... ಕೆಳಗಿನ ಪಟದಲ್ಲಿ ನೀರಿನ ಆಕರಗಳೆಲ್ಲೋ ಅಡಗಿವೆ. ಅವುಗಳನ್ನು ಪತ್ತೆ ಹಚ್ಚಿ.....


ನದಿ



ಕೆರೆ



ಮಳೆ




ಹೊಳೆ





| | | | | | | |
|---|---|---|---|---|---|---|
| ಕೈ | ರ | ಕೆ | ರೆ | ಹ | ಸ | ಮ |
| ಪಂ | ವ | ಜ | ನ | ಳ್ಳ | ಡ | ಟ |
| ಪು | ರ | ಗ | ಝ | ರಿ | ನ | ದಿ |
| ನ | ವ | ಸ | ಳ | ಸ | ಮು | ದ್ರ |
| ಸ | ಹೊ | ರೋ | ಕುಂ | ಟೆ | ನ | ಮ |
| ಮ | ಳೆ | ವ | ಬಾ | ಹ | ಬಾ | ಳ್ಳ |
| ಜ | ಗ | ರ | ವಿ | ಜ | ಬಾ | ಗ |

ಝರಿ



ಬಾವಿ







ಸಮುದ್ರ



ಕೈಪಂಪು





| | |
|---|---|
| | |
| | |
| | |













©KTBS Not to be republished



ಮಕ್ಕಳೇ..... ನೀವು ನನ್ನನ್ನು ಯಾವ ಯಾವ ಕೆಲಸಗಳಿಗೆ ಉಪಯೋಗಿಸುತ್ತೀರಿ ಎಂದು ಇಲ್ಲಿ ಕೊಟ್ಟ ಹನಿಯ ಚಿತ್ರಗಳಲ್ಲಿ ಬರೆದು ತಿಳಿಸಿ.





ಸರಿ, ಈಗ ನಿಮ್ಮ ಮನೆಗೆ ನನ್ನನ್ನು ಎಲ್ಲಿಂದ ತರುತ್ತೀರಾ? ಬರೆಯಿರಿ ನೋಡೋಣ.




©KTBS Not to be republished





ಇವೆಲ್ಲಾ ನಿಮ್ಮ ಮನೆಯಿಂದ ಎಷ್ಟು ದೂರದಲ್ಲಿ ಇವೆ?





ಪುಟಾಣಿಗಳಾ....... ನಿಮ್ಮ ಮನೆಗೆ ನನ್ನನ್ನು ಯಾರು ತರುತ್ತಾರೆ? ಇಲ್ಲಿ ಕೊಟ್ಟ ಹನಿಗಳಲ್ಲಿ ಉತ್ತರ ಬರೆಯಿರಿ.







©KTBS Not to be republished



**ಚಟುವಟಿಕೆ :**

ಈಗ ನೀವೆಲ್ಲಾ ಇಲ್ಲಿ ಕೊಟ್ಟ ಕೋಷ್ಟಕವನ್ನು ಗಮನವಿಟ್ಟು ಓದಿ. ನಂತರ ಆಯಾ ಕೆಲಸಕ್ಕೆ ಬಳಸುವ ನೀರಿನ ಮೂಲವನ್ನು ಸರಿಯಾದ ಚೌಕದಲ್ಲಿ ಗುರುತಿಸಿ.

| ಕೆಲಸಗಳು | ನದಿ  | ಕೆರೆ  | ಬಾವಿ  | ಕೈಪಂಪು  | ಹೊಳೆ  | ಸಮುದ್ರ  | ಝರಿ  |
|---|---|---|---|---|---|---|---|
| ಕುಡಿಯಲು | | | ✓ | | | | ✓ |
| ಪಾತ್ರೆ ತೊಳೆಯಲು | | | | | | | |
| ಬಟ್ಟೆ ಶುಚಿಗೊಳಿಸಲು | | | | | | | |
| ಸ್ನಾನ ಮಾಡಲು | | | | | | | |
| ಅಡುಗೆ ಮಾಡಲು | | | | | | | |
| ಮರ-ಗಿಡಗಳಿಗೆ ಹಾಕಲು | | | | | | | |
| ಸಾಕು ಪ್ರಾಣಿಗಳನ್ನು ಶುಚಿಗೊಳಿಸಲು | | | | | | | |
| ವಾಹನ ತೊಳೆಯಲು | | | | | | | |




ಪುಟಾಣಿಗಳಾ, ನಿಮ್ಮ ಶಾಲೆಯಲ್ಲಿ ಕುಡಿಯುವ ನೀರನ್ನು ಯಾವ ಯಾವ ಆಕರಗಳಿಂದ ತರುತ್ತಾರೆ?



©KTBS Not to be republished

ನನ್ನನ್ನು ನಿಮ್ಮ ಮನೆಯಲ್ಲಿ ಹೇಗೆ
ಸಂಗ್ರಹಿಸಿಟ್ಟಿದ್ದೀರಿ? ಚಿತ್ರ ನೋಡಿ ಗುರುತು ಹಾಕಿ.
ಹಾಗೆ ಕೆಳಗೆ ಕೊಟ್ಟ ಜಾಗದಲ್ಲಿ ಇವು ಯಾವ
ಯಾವ ವಸ್ತುವಿನಿಂದ ತಯಾರಾಗಿವೆ ಎಂದು
ಬರೆಯಿರಿ.





✓

ಮಣ್ಣು














©KTBS
Not to be republished



ಇವಲ್ಲದೆ ನಿಮ್ಮ ಮನೆಯಲ್ಲಿ ಬೇರೆ ಸಂಗ್ರಹ ಪಾತ್ರೆಗಳು ಇದ್ದಲ್ಲಿ ಅವುಗಳ ಚಿತ್ರ ಬರೆದು, ಹೆಸರು ಬರೆಯಿರಿ.






©KTBS
Not to be republished

ಹಾಂ!....... ಮಕ್ಕಳೆ....... ಸಂಗ್ರಹ ಪಾತ್ರೆಗಳು ಯಾವ ಯಾವ ವಸ್ತುಗಳಿಂದ ತಯಾರಾಗಿವೆ ಎಂಬುದನ್ನು ಇಲ್ಲಿ ಬರೆಯಿರಿ.










ನೀರನ್ನು ಸಂಗ್ರಹಿಸಲು ಮಣ್ಣು, ಪ್ಲಾಸ್ಟಿಕ್, ಸ್ಟೀಲ್, ತಾಮ್ರ ಮುಂತಾದ ವಸ್ತುಗಳಿಂದ ಮಾಡಿದ ಪಾತ್ರೆಗಳನ್ನು ಬಳಸುತ್ತಾರೆ.


**ಚಟುವಟಿಕೆ :**

ನಿಮ್ಮ ಮನೆಯಲ್ಲಿ ಎಷ್ಟು ಸಂಗ್ರಹ ಪಾತ್ರೆಗಳಿವೆ? ಎಣಿಸಿ ಬರೆಯಿರಿ.

| **ಪಾತ್ರೆಗಳು** |  |  |  |  |
|---|---|---|---|---|
| ಸ್ಟೀಲ್ | 4 | 2 | – | – |
| ಪ್ಲಾಸ್ಟಿಕ್ | | | | |
| ಮಣ್ಣು | | | | |
| ಹಿತ್ತಾಳೆ | | | | |
| ತಾಮ್ರ | | | | |
| ಇತರೆ | | | | |

ನಿಮ್ಮ ಮನೆಯಲ್ಲಿ ನೀರು ಸಂಗ್ರಹಿಸುವ ದೊಡ್ಡ ಮತ್ತು ಚಿಕ್ಕ ಪಾತ್ರೆಯ ಚಿತ್ರ ಬರೆಯಿರಿ.






| | |
|---|---|
| | |
| **ಚಿಕ್ಕ ಪಾತ್ರೆಯ ಚಿತ್ರ** | **ದೊಡ್ಡ ಪಾತ್ರೆಯ ಚಿತ್ರ** |




©KTBS Not to be republished







©KTBS Not to be republished



ಹೌದು ಪುಟಾಣಿಗಳೇ...... ಕುಡಿಯುವ ನೀರು ಸ್ವಚ್ಛವಾಗಿರಬೇಕು. ಸಂಗ್ರಹಿಸಿದ ಪಾತ್ರೆಯೂ ಸ್ವಚ್ಛವಾಗಿರಬೇಕು. ಇಲ್ಲಿ ಕೇಳಿ.........



ಕುದಿಸಿ, ಆರಿಸಿ, ಮುಚ್ಚಿಟ್ಟ ನೀರನ್ನೇ ಕುಡಿಯಿರಿ. ಇದರಿಂದ ಆರೋಗ್ಯ ಚೆನ್ನಾಗಿರುತ್ತದೆ.




ಕುಡಿಯುವ ನೀರನ್ನು ನಲ್ಲಿಯಿರುವ ಪಾತ್ರೆಯಲ್ಲಿ ಸಂಗ್ರಹಿಸಿ ಬಳಸುವುದರಿಂದ ನಮ್ಮ ಕೈಗಳಲ್ಲಿರುವ ಕೊಳೆಯು ನೀರನ್ನು ಸೇರದಂತೆ ತಡೆಯಬಹುದು.



ದೊಡ್ಡ ಪಾತ್ರೆಯಿಂದ ನೀರನ್ನು ತೆಗೆಯುವಾಗ ಹಿಡಿ ಇರುವ ಪಾತ್ರೆಯನ್ನು ಬಳಸಿರಿ.

ಕೆಳಗಿನ ಚಿತ್ರ ಗಮನಿಸಿ





**ಓದಿ ತಿಳಿ**

ಶುದ್ಧವಾದ ನೀರನ್ನೇ ಕುಡಿಯಬೇಕು. ಹೀಗಾಗಿ ಕುಡಿಯುವ ನೀರನ್ನು ಯಾವಾಗಲೂ ಮುಚ್ಚಿರಬೇಕು. ನೀರನ್ನು ಕುಡಿಯಲು ತೆಗೆದುಕೊಳ್ಳುವ ಮೊದಲು ಕೈಗಳನ್ನು ಚೆನ್ನಾಗಿ ತೊಳೆದುಕೊಳ್ಳಬೇಕು.

©KTBS Not to be republished




**ಚಟುವಟಿಕೆ :**
ಪುಟಾಣಿಗಳಾ.... ಒಂದು ದಿನಕ್ಕೆ ನಿಮಗೆ ಎಷ್ಟು ನೀರು ಬೇಕು ಎಂಬುದನ್ನು ಅಳೆದು ಬರೆಯಿರಿ.



ಸರಿ ಹನಿಯಣ್ಣ, ನಾವೆಲ್ಲಾ ಎಣಿಸ್ತೀವಿ.

| ದಿನದ ಕೆಲಸ | ಲೋಟಗಳ ಸಂಖ್ಯೆ | ಚೆಂಬು/ ಚೆರಿಗೆ/ತಂಬಿಗೆಗಳ ಸಂಖ್ಯೆ | ಬಿಂದಿಗೆಗಳ ಸಂಖ್ಯೆ | ಬಕೀಟುಗಳ ಸಂಖ್ಯೆ |
|---|---|---|---|---|
| ಮುಂಜಾನೆ ಕೈ–ಕಾಲು, ಮುಖ ತೊಳೆಯಲು | | 5 | | |
| ಕುಡಿಯಲು | 8 | | | |
| ಸ್ನಾನ ಮಾಡಲು | | | | |
| ಬಟ್ಟೆ ಒಗೆಯಲು | | | | |
| ಪಾತ್ರೆ ತೊಳೆಯಲು | | | | |
| ನೆಲ ಒರೆಸಲು | | | | |
| ಶೌಚಕ್ಕೆ | | | | |
| ಇತರೆ | | | | |
| ಒಟ್ಟು | | | | |



ನಿಮಗೀಗ ತಿಳಿಯಿತೆ? ಒಂದು ದಿನಕ್ಕೆ ನೀವು ಎಷ್ಟು ನೀರು ಬಳಸುತ್ತೀರಿ ಎಂದು.

ನಿಮ್ಮ ಮನೆಯಲ್ಲಿ ನೀವು ಒಟ್ಟು ಎಷ್ಟು ಜನರು ಇದ್ದೀರಿ?

©KTBS Not to be republished



ಹಾಗಾದರೆ ನಿಮಗೆಲ್ಲರಿಗೂ ಒಂದು ದಿನಕ್ಕೆ ಎಷ್ಟು ನೀರು ಬೇಕು? ಲೆಕ್ಕ ಮಾಡಿ.

| ಮನೆ ಮಂದಿ | ಲೋಟಗಳಲ್ಲಿ | ಚೆಂಬು/ ಚೆರಿಗೆ/ತಂಬಿಗೆ ಗಳಲ್ಲಿ | ಬಿಂದಿಗೆಗಳಲ್ಲಿ | ಬಕೀಟು ಗಳಲ್ಲಿ |
|---|---|---|---|---|
| ನನಗೆ | | | | |
| ಅಮ್ಮನಿಗೆ | | | | |
| ಅಪ್ಪನಿಗೆ | | | | |
| ಅಣ್ಣ/ಅಕ್ಕ | | | | |
| ಅಜ್ಜ / ಅಜ್ಜಿ / ಇತರರು | | | | |
| **ಒಟ್ಟು** | | | | |



ನೋಡಿದ್ರಾ...... ಒಂದು ದಿನಕ್ಕೆ ನೀವು ಮತ್ತು ನಿಮ್ಮ ಮನೆಯವರು ನನ್ನನ್ನೆಷ್ಟು ಬಳಸುತ್ತಿದ್ದೀರಿ ಎಂದು?

ಮುದ್ದಿನ ಪುಟಾಣಿಗಳೇ?....... ಈಗ ಗೊತ್ತಾಯಿತೆ ನನ್ನ ಅಗತ್ಯ? ನೆನಪಿನಲ್ಲಿಡಿ. ನಾನು ನಿಮಗಷ್ಟೇ ಅಲ್ಲ, ಭೂಮಿಯ ಮೇಲೆ ಇರುವ ಎಲ್ಲಾ ಜೀವಿಗಳಿಗೂ ಬೇಕೇಬೇಕು. ನನ್ನನ್ನು ಯಾವ ಕಾರಣಕ್ಕೂ ಪೋಲು ಮಾಡದೆ, ಹಿತವಾಗಿ, ಮಿತವಾಗಿ ಬಳಸಿ.




ಸರಿ ಹನಿಯಣ್ಣಾ..... ನೀನು ಹೇಳಿಕೊಟ್ಟದ್ದನ್ನು ನೆನಪಿಟ್ಟುಕೊಳ್ಳುತ್ತೇವೆ.

©KTBS Not to be republished



ಪುಟಾಣಿಗಳಾ...........
ಈಗ ಸಾಕು. ನೀವು ಮನೆಗೆ
ಹೋಗಿ. ಇಲ್ಲಿ ಕಲಿತದ್ದನ್ನು
ಮನೆಯವರಿಗೂ ತಿಳಿಸಿ.
ನಾಳೆ ಮತ್ತೆ ಸಿಗೋಣ.
ಆಯ್ತಾ?



ಸರಿ ಹನಿಯಣ್ಣಾ.....
ಬರುತ್ತೇವೆ. ನಾಳೆ ಮತ್ತೆ
ಭೇಟಿಯಾಗೋಣ.

**ಹಾಡಿ–ನಲಿ**

ಮೋಡದಿ ಉದುರುವೆ ಹನಿಯಣ್ಣ
ಹರಿಯುತ ಸೇರುವೆ ಕೊಳವನ್ನ
ಸಾಗರ, ನದಿ, ಕೆರೆಗಳ ತುಂಬ
ನೀನೇ ಇರುವೆ ನೋಡಣ್ಣ

ಕುಡಿಯಲು ನೀನೇ ಬೇಕಣ್ಣ
ಹೊಲ–ಗದ್ದೆಗಳಿಗೆ ಬಾರಣ್ಣ
ಸ್ನಾನಕ್ಕೆ ನೀರು, ಅಡುಗೆಗೆ ನೀರು
ಪ್ರಾಣಿ–ಪಕ್ಷಿಗಳಿಗೂ ನೀ ಬೇಕಣ್ಣ

ನೀನಿಲ್ಲದೆ ನಾವು ಇಲ್ಲಣ್ಣ
ಪೋಲು ಮಾಡದೆ ಬಳಸುವೆವಣ್ಣ
ಹಿತ ಮಿತ ಬಳಸಿ, ನಿನ್ನಯ ಉಳಿಸಿ
ಎಲ್ಲರ ಮೆಚ್ಚುಗೆ ಪಡೆವೆವು ಅಣ್ಣ.



©KTBS Not to be republished

## ಪಾಠ – 5


# ನೀರಿನ ಸಂಸಾರ

**ಈ ಪಾಠವನ್ನು ಕಲಿತ ನಂತರ ನೀನು,**


- ನದಿ ಮತ್ತು ಸಮುದ್ರಗಳಲ್ಲಿ ವಾಸಿಸುವ ಜೀವಿಗಳನ್ನು ಗುರುತಿಸುವೆ.
- ಮಳೆಗೆ ಸಂಬಂಧಿಸಿದಂತೆ ಸಸ್ಯ ಮತ್ತು ಪ್ರಾಣಿಗಳ ಪ್ರತಿಕ್ರಿಯೆಯನ್ನು ಗಮನಿಸುವೆ.
- ನದಿ, ಮಳೆ ನೀರಿಗೆ ಸಂಬಂಧಿಸಿದ ಹಾಡು, ನೃತ್ಯ ಮುಂತಾದ ಕಲೆಗಳ ಮೂಲಕ ವಿಷಯವನ್ನು ವ್ಯಕ್ತಪಡಿಸುವೆ.
- ಋತುಮಾನಕ್ಕೆ ತಕ್ಕಂತೆ ನೀರಿನ ಹರಿವಿನಲ್ಲಿ ಆಗುವ ಬದಲಾವಣೆಗಳನ್ನು ಗುರುತಿಸುವೆ.

©KTBS Not to be republished






©KTBS Not to be republished




ಹನಿ ಹನಿಯಾಗಿ, ಮಳೆಯಾಗಿ ಭೂಮಿಗೆ ನಾನು ಬೀಳುವೆ. ತೊರೆಯಾಗಿ, ಝರಿಯಾಗಿ ನದಿಗಳನ್ನು ಸೇರುವೆ. ನದಿಗಳೆಲ್ಲ ಹೋಗಿ ಸಮುದ್ರವನ್ನು ಸೇರುತ್ತವೆ. ತೊರೆಯಲ್ಲಿ, ನದಿಯಲ್ಲಿ, ಸಮುದ್ರದಲ್ಲಿ ವಿಧವಿಧವಾದ ಸಸ್ಯ ಪ್ರಾಣಿಗಳು ಜೀವಿಸುತ್ತವೆ.

**ಚಟುವಟಿಕೆ :**

ಇಲ್ಲಿ ನೋಡು, ನದಿಯ ಚಿತ್ರ. ಇಲ್ಲಿರುವ ಜೀವಿಗಳನ್ನು ಗುರುತಿಸು. ಅಲ್ಲಿ ಕೊಟ್ಟಿರುವ ಖಾಲಿ ಜಾಗದಲ್ಲಿ ಅವುಗಳ ಹೆಸರುಗಳನ್ನು ಬರೆ.




©KTBS Not to be republished






**ಚಟುವಟಿಕೆ:**

ಇಲ್ಲಿರುವ ಜೀವಿಗಳ ಹೆಸರುಗಳನ್ನು ಆಯಾ ಚಿತ್ರದ ಕೆಳಗೆ ಬರೆ. ಈ ಜೀವಿಗಳನ್ನು ಅವುಗಳ ಸರಿಯಾದ ವಾಸಸ್ಥಳಕ್ಕೆ ಸೇರಿಸಲು ಸಂಬಂಧಿಸಿದ ಚೌಕಗಳಲ್ಲಿ ಅವುಗಳ ಹೆಸರು ಬರೆ.




© KTBS Not to be republished

|  ನದಿ | |  ಸಮುದ್ರ | |
|---|---|---|---|
| | | | |



ನೀನು ಕೆರೆ,
ನದಿ ಅಥವಾ ಸಮುದ್ರವನ್ನು
ನೋಡಿದ್ದೀಯಾ? ಅಲ್ಲಿ ಕಂಡು
ಬರುವ ಸಸ್ಯ, ಪ್ರಾಣಿಗಳ ಚಿತ್ರಗಳನ್ನು
ಸಂಗ್ರಹಿಸು. ಉಪಯೋಗಿಸಿದ ನೋಟ್
ಪುಸ್ತಕದಲ್ಲಿ ಈ ಚಿತ್ರಗಳನ್ನು
ಅಂಟಿಸು. ಅವುಗಳ
ಹೆಸರುಗಳನ್ನು ಬರೆ.



ಮಳೆ
ಬಂದಾಗ ನೋಡು
ನೆಲವೆಲ್ಲಾ ಹಸಿರೋ
ಹಸಿರು. ಗಿಡ ಮರಗಳೆಲ್ಲಾ
ಸೊಂಪಾಗಿ ಬೆಳೆಯುತ್ತವೆ.
ಕೆರೆ ನದಿಗಳೆಲ್ಲ
ತುಂಬಿ ಹರಿಯುತ್ತವೆ.
ಅಬ್ಬಾ !

ಅಬ್ಬಾ! ನೀರಿನಲ್ಲಿ
ಎಷ್ಟೊಂದು ಸಸ್ಯ,
ಪ್ರಾಣಿಗಳು
ಜೀವಿಸುತ್ತವೆ!






©KTBS Not to be republished







ಹೌದು ಹನಿಯಣ್ಣಾ !





**ಚಟುವಟಿಕೆ:**

ನಿಮ್ಮ ಊರಿನಲ್ಲಿ ನದಿ ಕೆರೆಗಳಿವೆ, ಅಲ್ಲವೆ? ಅವುಗಳಲ್ಲಿ ಎಷ್ಟು ನೀರಿದೆ ಎಂದು ಕೆಳಗಿನ ಕೋಷ್ಟಕದಲ್ಲಿ (✓) ಗುರುತು ಹಾಕು.

| ನೀರಿನ ಆಕರ | ಮಳೆಗಾಲ | | | ಚಳಿಗಾಲ | | | ಬೇಸಿಗೆ ಕಾಲ | | |
|---|---|---|---|---|---|---|---|---|---|
| | ಹೆಚ್ಚು | ಸಾಧಾರಣ | ಕಡಿಮೆ | ಹೆಚ್ಚು | ಸಾಧಾರಣ | ಕಡಿಮೆ | ಹೆಚ್ಚು | ಸಾಧಾರಣ | ಕಡಿಮೆ |
| ನದಿ | | | | | | | | | |
| ಕೆರೆ | | | | | | | | | |
| ಕಾಲುವೆ | | | | | | | | | |
| ಇತರೆ | | | | | | | | | |

©KTBS Not to be republished



**ಚಟುವಟಿಕೆ :**
ನದಿ, ಕೆರೆ, ಬಾವಿಗಳ ನೀರಿನ ಮಟ್ಟ ಬೇರೆ ಬೇರೆ ಕಾಲಗಳಲ್ಲಿ ಏಕೆ ಬದಲಾವಣೆ ಆಗುತ್ತದೆ ಎಂದು ಹಿರಿಯರಿಂದ ಕೇಳಿ ತಿಳಿ.

ಪುಟಾಣಿಗಳಾ....... ಗಿಡ, ಮರ ಮತ್ತು ಪ್ರಾಣಿಗಳನ್ನು ವಿವಿಧ ಕಾಲಗಳಲ್ಲಿ ಗಮನಿಸಿದ್ದೀರಾ?



ಅಯ್ಯೋ......... ಹನಿಯಣ್ಣಾ ಬೇಸಿಗೆಯಲ್ಲಂತೂ ನೀರು ಕಡಿಮೆಯಾಗಿ ಗಿಡ ಮರಗಳೆಲ್ಲಾ ಬಾಡಿರುತ್ತವೆ. ಪಕ್ಷಿಗಳು ಮತ್ತು ಇತರ ಪ್ರಾಣಿಗಳಿಗೆ ಲವಲವಿಕೆಯೇ ಇರುವುದಿಲ್ಲ.



ಮಳೆಗಾಲದಲ್ಲಿ ಮಳೆ ಬರುತ್ತದೆ, ಹಾಗಾಗಿ ಕೆರೆ, ನದಿಗಳು ತುಂಬಿ ಹರಿಯುತ್ತವೆ. ಬೇಸಿಗೆ ಕಾಲದಲ್ಲಿ ಬಿಸಿಲು ಹೆಚ್ಚು. ಮಳೆ ಕಡಿಮೆ. ನದಿ, ಕೆರೆಗಳ ನೀರು ಬತ್ತಿ ಹೋಗುತ್ತದೆ.



ಹೌದು ಹನಿಯಣ್ಣಾ.... ನೀನೆಲ್ಲರಿಗೂ ಬೇಕು. ಪ್ರಾಣಿಗಳಿಗೂ ಬೇಕು. ಸಸ್ಯಗಳಿಗೂ ಬೇಕು. ನಮಗೂ ಬೇಕು.



ಹೌದೌದು.... ನಾನು ಎಲ್ಲರಿಗೂ ಬೇಕು ಎಂದು ತಿಳಿದಿರಲ್ಲಾ.

Not to be republished ©KTBS





**ಹಾಡಿ–ನಲಿ**

ಹುಯ್ಯೋ ಹುಯ್ಯೋ ಮಳೆರಾಯ
ಹೂವಿನ ತೋಟಕ್ಕೆ ನೀರಿಲ್ಲಾ
ಬಾರೋ ಬಾರೋ ಮಳೆರಾಯ
ಬಾಳೆಯ ತೋಟಕ್ಕೆ ನೀರಿಲ್ಲಾ.

ಮಳೆರಾಯ ಮಳೆರಾಯ ಹೊನ್ನಸುರಿಸು
ಭೂಮಿತಾಯಿ ಭೂಮಿತಾಯಿ ಚಿನ್ನ ಬೆಳೆಸು
ಊರೆಲ್ಲಾ ನೀರಿಲ್ಲದೆ ಬಾಯಾರಿದೆ
ಜಗವೆಲ್ಲಾ ನೀನಿಲ್ಲದೆ ಹೌಹಾರಿದೆ
ನೀನೇಕೆ ಮುನಿದಿರುವೆ ಬರಬಾರದೆ
ಖುಷಿಯನ್ನು ನಮಗೆ ತರಬಾರದೆ
ಮಳೆರಾಯ ಮಳೆರಾಯ ಹೊನ್ನಸುರಿಸು
ಭೂಮಿತಾಯಿ ಭೂಮಿತಾಯಿ ಚಿನ್ನ ಬೆಳೆಸು.

ಹನಿಯಿತು ಸುರಿಯಿತು
ಮಳೆ ಮಳೆ
ಆಡಿತು ತೆನೆಯಿತು
ಬೆಳೆ ಬೆಳೆ
ಕಟ್ಟಿತು ಎಲ್ಲೆಡೆ
ಕಳೆ ಕಳೆ
ತುಂಬುತ ಬೀಗಿದೆ
ಇಳೆ ಇಳೆ.


©KTBS Not to be republished













©KTBS
Not to be republished




**ಚಟುವಟಿಕೆ :**

ಕೆಳಗೆ ಕೊಟ್ಟ ಜೀವಿಗಳು ಮಳೆ ಬರುವಾಗ ಅಥವಾ ನಂತರ ನಲಿಯುವುದನ್ನು ಅಭಿನಯಿಸಿ ತೋರಿಸು.

| | |
|---|---|
| ತೆಂಗಿನ ಮರ | ಕಪ್ಪೆ |
| ಬಾಳೆಯ ಗಿಡ | ಮೀನು |
| ಹುಲ್ಲು | ಹಸು |
| ಕುಂಬಳ ಬಳ್ಳಿ | ಆಮೆ |
| ಭತ್ತದ ಸಸಿ | ಹಕ್ಕಿ |



ಸರಿ, ಪುಟಾಣಿಗಳಾ.....
ನಾನಿನ್ನು ಮುಂದಕ್ಕೆ ಸಾಗುವೆ.



ಹನಿಯಣ್ಣಾ..... ನೀನು
ಹೊರಟೇಬಿಟ್ಟೆಯಾ?



ಹೌದು, ನಾನಿನ್ನು ಬರುತ್ತೇನೆ.
ನೀವು ಮಳೆಯ ಬಗ್ಗೆ ಸಣ್ಣ ಕವನಗಳನ್ನು
ಹಿರಿಯರಿಂದ ಸಂಗ್ರಹಿಸಿ. ಅವನ್ನು
ರಾಗವಾಗಿ ಹಾಡಿ.

©KTBS Not to be republished

## ಪಾಠ – 6

# ಆಹಾರ ವೈವಿಧ್ಯ

**ಈ ಪಾಠವನ್ನು ಕಲಿತ ನಂತರ ನೀನು,**

- ಆಹಾರದಲ್ಲಿನ ವೈವಿಧ್ಯವನ್ನು ತಿಳಿಯುವೆ.
- ನಿನ್ನ ಜಿಲ್ಲೆಯಲ್ಲಿನ ವಿವಿಧ ಆಹಾರಗಳನ್ನು ಪರಿಚಯ ಮಾಡಿಕೊಳ್ಳುವೆ.
- ಸಸ್ಯಜನ್ಯ ಮತ್ತು ಪ್ರಾಣಿಜನ್ಯ ಆಹಾರವನ್ನು ಪಟ್ಟಿಮಾಡುವೆ.
- ಲಿಂಗ, ವಯಸ್ಸು ಮತ್ತು ದೈಹಿಕ ಚಟುವಟಿಕೆಗಳಿಗೆ ಅನುಗುಣವಾಗಿ ಸೇವಿಸುವ ಆಹಾರದ ಪ್ರಮಾಣವನ್ನು ಗುರುತಿಸುವೆ.
- ಕಾಡುಪ್ರಾಣಿ, ಸಾಕುಪ್ರಾಣಿ ಮತ್ತು ಮನೆಯಲ್ಲಿ ಕಂಡುಬರುವ ಕೀಟಗಳು ಮೊದಲಾದ ಪ್ರಾಣಿಗಳ ಆಹಾರವನ್ನು ಗುರುತಿಸುವೆ.

ನೀನು ಸೇವಿಸುವ ವಿವಿಧ ಆಹಾರಗಳ ಬಗ್ಗೆ ಈಗಾಗಲೇ ತಿಳಿದಿರುವೆ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು.



1. ನೀನು ಪ್ರತಿನಿತ್ಯ ಸೇವಿಸುವ 5 ಆಹಾರ ಪದಾರ್ಥಗಳನ್ನು ಕೆಳಗೆ ಕೊಟ್ಟಿರುವ ಜಾಗದಲ್ಲಿ ಬರೆ.

   ____________, ____________,

   ____________, ____________,

   ____________.

2. ಈ ಆಹಾರ ಪದಾರ್ಥಗಳನ್ನು ಪ್ರತಿನಿತ್ಯ ಏಕೆ ತಿನ್ನುವೆ? ಕಾರಣವನ್ನು ಕೆಳಗಿನ ಖಾಲಿ ಜಾಗದಲ್ಲಿ ಬರೆ.

   ________________________________________

   ________________________________________

©KTBS Not to be republished

3. ನೀನು ಹಬ್ಬ ಅಥವಾ ವಿಶೇಷ ದಿನಗಳಲ್ಲಿ ತಿನ್ನುವ 5 ಆಹಾರಗಳನ್ನು ಬರೆ.

________, ________, ________, ________, ________.

4. ನಿನಗೆ ಇಷ್ಟವಾದ 5 ಆಹಾರಗಳನ್ನು ಬರೆ.

________, ________, ________, ________, ________.

5. ಇವು ನಿನಗೆ ಏಕೆ ಇಷ್ಟ?

______________________________________________

______________________________________________

6. ನೀನು ಇಷ್ಟ ಪಡದ 5 ಆಹಾರಗಳು ಯಾವುವು?

________, ________, ________, ________, ________.

7. ಇವುಗಳನ್ನು ನೀನು ಏಕೆ ಇಷ್ಟ ಪಡುವುದಿಲ್ಲ?

______________________________________________

______________________________________________

ನಿನ್ನ ಉತ್ತರಗಳನ್ನು ಗೆಳೆಯ–ಗೆಳತಿಯರ ಉತ್ತರದೊಂದಿಗೆ ಹೋಲಿಸು. ನಿಮ್ಮಿಬ್ಬರ ಉತ್ತರಗಳೂ ಒಂದೇ ಆಗಿವೆಯೇ? ಇಲ್ಲವಾದಲ್ಲಿ ಏಕೆ? ಯೋಚಿಸಿ ಬರೆ.

______________________________________________

______________________________________________

______________________________________________

______________________________________________

©KTBS Not to be republished

**ಚಟುವಟಿಕೆ :** ನಿನ್ನ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯುವ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡು.

________________________ ________________________

________________________ ________________________

________________________ ________________________

________________________ ________________________

**ಓದಿ–ತಿಳಿ**


- ಪ್ರತಿಯೊಬ್ಬರ ಆಹಾರ ಪದ್ಧತಿ ಬೇರೆ ಬೇರೆಯಾಗಿರುತ್ತದೆ. ಹಾಗೆಯೇ ವಿವಿಧ ಪ್ರದೇಶದ ಜನರ ಆಹಾರ ಕ್ರಮವೂ ಭಿನ್ನವಾಗಿರುತ್ತದೆ.
- ರುಚಿ, ಪದ್ಧತಿಗೆ ಅನುಗುಣವಾಗಿ ಮತ್ತು ಆಯಾ ಊರಿನಲ್ಲಿ ಅಥವಾ ಪ್ರದೇಶದಲ್ಲಿ ಹೆಚ್ಚಾಗಿ ದೊರಕುವ ಆಹಾರವನ್ನೇ ಜನರು ಸೇವಿಸುತ್ತಾರೆ.

  ಉದಾಹರಣೆಗೆ, ಜೋಳ ಹೆಚ್ಚಾಗಿ ಬೆಳೆಯುವ ಪ್ರದೇಶದ ಜನರು ಜೋಳವನ್ನು ಹೆಚ್ಚು ತಿನ್ನುತ್ತಾರೆ. ಸಮುದ್ರದ ತೀರದಲ್ಲಿ ವಾಸಿಸುವ ಜನರು ಸಮುದ್ರ ಮೀನನ್ನು ಹೆಚ್ಚಾಗಿ ತಿನ್ನುತ್ತಾರೆ. ಹೀಗಾಗಿ ಪ್ರತಿಯೊಬ್ಬರ ಆಹಾರ ಕ್ರಮದಲ್ಲಿ ವ್ಯತ್ಯಾಸ ಕಂಡುಬರುತ್ತದೆ.

ನಮಗೆ ಆಹಾರ ಏಕೆ ಬೇಕು ಎಂದು ನಿನಗೀಗಾಗಲೇ ಗೊತ್ತಿದೆ. ಕೆಳಗಿನ ಚಿತ್ರಗಳಲ್ಲಿ ಆಹಾರದ ವಿವಿಧ ಅವಶ್ಯಕತೆಗಳನ್ನು ತೋರಿಸಿದೆ. ಚಿತ್ರಗಳನ್ನು ಗಮನಿಸು.







©KTBS Not to be republished

ಯಾವ ಆಹಾರ ಪದಾರ್ಥಗಳು ನಮಗೆ ಶಕ್ತಿಯನ್ನು ಒದಗಿಸುತ್ತವೆ? ಯಾವ ಆಹಾರ ಪದಾರ್ಥಗಳು ನಮ್ಮ ಬೆಳವಣಿಗೆಗೆ ಸಹಕರಿಸುತ್ತವೆ? ನಾವು ಆರೋಗ್ಯವಂತರಾಗಿರಲು ಯಾವ ಆಹಾರಗಳು ಆವಶ್ಯಕ? ಎಂಬುದನ್ನು ಕೆಳಗಿನ ಚಿತ್ರಗಳಿಂದ ತಿಳಿದುಕೊ.




**ಶಕ್ತಿ ಪ್ರಧಾನವಾದ ಆಹಾರಗಳು**

ಅಕ್ಕಿ, ರಾಗಿ, ಜೋಳ, ಗೋಧಿ, ನವಣೆ, ಸಜ್ಜೆ, ಎಣ್ಣೆ, ತುಪ್ಪ, ಸಕ್ಕರೆ, ಬೆಲ್ಲ, ಮಾಂಸ ಇತ್ಯಾದಿಗಳು ನಮಗೆ ಶಕ್ತಿ ನೀಡುತ್ತವೆ.




**ಬೆಳವಣಿಗೆಗೆ ಪ್ರಧಾನವಾದ ಆಹಾರಗಳು**

ತೊಗರಿ, ಅವರೆ, ಉದ್ದುಗಳಂತಹ ಬೇಳೆ ಕಾಳುಗಳು, ಹಾಲು, ಮೊಟ್ಟೆ, ಮಾಂಸ ಇತ್ಯಾದಿಗಳು ನಮ್ಮ ಬೆಳವಣಿಗೆಗೆ ಸಹಾಯ ಮಾಡುತ್ತವೆ.

ನಿನಗೆ ಗೊತ್ತಿರುವ ಇತರ ಬೇಳೆಕಾಳುಗಳ ಹೆಸರುಗಳನ್ನು ಬರೆ.

__________ __________

__________ __________

__________ __________

__________ __________

__________ __________

©KTBS Not to be republished




**ಆರೋಗ್ಯ ಕಾಪಾಡುವ ಆಹಾರಗಳು**

ತರಕಾರಿ, ಹಣ್ಣುಗಳನ್ನು ಹೆಚ್ಚಾಗಿ ಸೇವಿಸಿದರೆ ರೋಗಗಳನ್ನು ತಡೆಗಟ್ಟಬಹುದು.

**ಓದಿ-ತಿಳಿ**

- ಹಸಿ ತರಕಾರಿ, ಮೊಳಕೆ ಕಟ್ಟಿದ ಕಾಳುಗಳು ಮತ್ತು ತಾಜಾ ಹಣ್ಣುಗಳು ನಮ್ಮ ಆರೋಗ್ಯವನ್ನು ಕಾಪಾಡುತ್ತವೆ.
- ಆರೋಗ್ಯವಾಗಿರಲು ಪ್ರತಿನಿತ್ಯವೂ ಹೆಚ್ಚು ನೀರನ್ನು ಕುಡಿಯಬೇಕು.

ನಿನ್ನೆ ನೀನು ಸೇವಿಸಿದ ಆಹಾರದ ಚಿತ್ರವನ್ನು ಈ ತಟ್ಟೆಯಲ್ಲಿ ಬರೆ.



ನಿನ್ನ ತಟ್ಟೆಯಲ್ಲಿರುವ ಹಾಗೂ ನಿನ್ನ ಗೆಳೆಯರ ತಟ್ಟೆಯಲ್ಲಿರುವ ಆಹಾರಗಳ ಪಟ್ಟಿ ತಯಾರಿಸು.

______, ______, ______, ______, ______,


______, ______, ______, ______, ______.


© KTBS Not to be republished

ಈ ಆಹಾರಗಳನ್ನು ತಯಾರಿಸಲು ಬಳಸಿರುವ ಆಹಾರ ಪದಾರ್ಥಗಳನ್ನು ಬರೆ.


| **ಆಹಾರ** | **ಆಹಾರದ ಮೂಲ ಪದಾರ್ಥ** |
|---|---|
| ಉದಾಹರಣೆ : ರೊಟ್ಟಿ | ರಾಗಿ/ಅಕ್ಕಿ/ಜೋಳ/ಗೋಧಿ |
| 1. ____________ | ____________________ |
| 2. ____________ | ____________________ |
| 3. ____________ | ____________________ |
| 4. ____________ | ____________________ |
| 5. ____________ | ____________________ |
| 6. ____________ | ____________________ |
| 7. ____________ | ____________________ |
| 8. ____________ | ____________________ |
| 9. ____________ | ____________________ |
| 10. ____________ | ____________________ |

**ಚಟುವಟಿಕೆ :** ನೀನು ತಯಾರಿಸಿದ ಪಟ್ಟಿಯನ್ನು ಇನ್ನೊಮ್ಮೆ ಗಮನಿಸು. ಇದರಿಂದ ಸುಳಿವು ಪಡೆದು ಇಲ್ಲಿ ಬಿಟ್ಟ ಜಾಗಗಳನ್ನು ತುಂಬು.





©KTBS Not to be republished




**ಚಟುವಟಿಕೆ :** ಪಟ್ಟಿ ಮಾಡಿದ ಆಹಾರ ಪದಾರ್ಥಗಳು ಎಲ್ಲಿಂದ ಬರುತ್ತವೆ ಎಂದು ನಿನಗೆ ತಿಳಿದಿದೆ. ಉದಾಹರಣೆಗೆ ಅಕ್ಕಿಯು ಭತ್ತದ ಸಸಿಯಿಂದ ಬರುತ್ತದೆ.

ನಿನ್ನ ಊರಿನಲ್ಲಿ ದೊರಕುವ ಆಹಾರ ಪದಾರ್ಥಗಳನ್ನು ಸಸ್ಯಮೂಲ ಮತ್ತು ಪ್ರಾಣಿಮೂಲ ಎಂದು ವಿಂಗಡಿಸಿ ಬರೆ.

**ಸಸ್ಯಮೂಲ** **ಪ್ರಾಣಿಮೂಲ**



©KTBS Not to be republished

**ಆಟ–ಆಡು**

ಆಹಾರ ಪದಾರ್ಥಗಳ ಹೆಸರಿನ ಸಣ್ಣ ಸಣ್ಣ ಚಿಲ್ಲೆಗಳನ್ನು ಗೆಳೆಯರೊಂದಿಗೆ ಕೂಡಿ ತಯಾರಿಸು. ಎರಡು ರಟ್ಟಿನ ಡಬ್ಬಗಳನ್ನು ತೆಗೆದುಕೊ. ಒಂದು ಡಬ್ಬದ ಮೇಲೆ ನಿನಗಿಷ್ಟವಾದ ಪ್ರಾಣಿಯ ಚಿತ್ರ ಅಂಟಿಸು. ಮತ್ತೊಂದು ಡಬ್ಬದ ಮೇಲೆ ನಿನಗಿಷ್ಟವಾದ ಸಸ್ಯದ ಚಿತ್ರ ಅಂಟಿಸು.

ಎಲ್ಲರೂ ಚಿಲ್ಲೆಗಳನ್ನು ಹಂಚಿಕೊಳ್ಳಿ. ಅವರವರಿಗೆ ಸಿಕ್ಕಿರುವ ಆಹಾರ ಚಿಲ್ಲೆಗಳನ್ನು ಸೂಕ್ತವಾಗಿರುವ ಡಬ್ಬಕ್ಕೆ ಹಾಕಿ.

ನೀನು, ನಿನಗಿಂತ ಸಣ್ಣವರು ಹಾಗೂ ನಿನಗಿಂತ ದೊಡ್ಡವರು ಸೇವಿಸುವ ಅಹಾರದ ಪ್ರಮಾಣವನ್ನು ಗಮನಿಸು.

**ಚಟುವಟಿಕೆ :** ಮಧ್ಯಾಹ್ನದ ಊಟದ ವೇಳೆಯಲ್ಲಿ ನಿನ್ನ ಶಾಲೆಯ ವಿವಿಧ ತರಗತಿಯ ಮಕ್ಕಳು ಊಟ ಮಾಡುವುದನ್ನು ಗಮನಿಸು. ನೀನು ಏನನ್ನು ಗಮನಿಸಿದೆ ಎಂದು ಇಲ್ಲಿ ಬರೆ.



**ಓದಿ–ತಿಳಿ**

ಜನರು ತಮ್ಮ ವಯಸ್ಸಿಗೆ ತಕ್ಕಂತೆ ಆಹಾರವನ್ನು ಸೇವಿಸುತ್ತಾರೆ. ಅವರು ಮಾಡುವ ಕೆಲಸಕ್ಕೆ ತಕ್ಕಂತೆ ಅಹಾರವನ್ನು ಸೇವಿಸುತ್ತಾರೆ. ಒಂದೇ ವಯಸ್ಸಿನ ಹುಡುಗರು/ಹುಡುಗಿಯರು ತಿನ್ನುವ ಆಹಾರದ ಪ್ರಮಾಣ ಬೇರೆ ಬೇರೆಯಾಗಿರುತ್ತದೆ.

©KTBS Not to be republished

* ಪುಟ್ಟ ಮಗುವಿಗೆ ಕೊಡುವ ಆಹಾರವೇನು?



______________________

ಹಾಲು ಚಿಕ್ಕ ಮಕ್ಕಳ ಪ್ರಮುಖ
ಹಾಗೂ ಸಂಪೂರ್ಣ ಆಹಾರ.

* ನೀನು ಹಾಲನ್ನು ಮಾತ್ರ ಕುಡಿದು ಇರಬಲ್ಲೆಯಾ?

______________________

ನಿನ್ನಂತೆ ಪ್ರಾಣಿಗಳಿಗೂ ಆಹಾರ ಬೇಕು ಎಂದು ಹಿಂದಿನ ಪಾಠದಿಂದ ತಿಳಿದಿದ್ದೀಯ. ಈ ಕೆಳಗೆ ಕೊಟ್ಟಿರುವ ಪ್ರಾಣಿಗಳ ಆಹಾರವನ್ನು ಬರೆ.

| ಪ್ರಾಣಿಗಳ ಹೆಸರು | ಆಹಾರ |
|---|---|
| 1. ನಾಯಿ | ______ |
| 2. ಬೆಕ್ಕು | ______ |
| 3. ಹಸು | ______ |
| 4. ಕೋತಿ | ______ |
| 5. ಕೋಳಿ | ______ |
| 6. ಹೆಗ್ಗಣ | ______ |
| 7. ಸೊಳ್ಳೆ | ______ |
| 8. ಹಲ್ಲಿ | ______ |
| 9. ಕರಡಿ | ______ |
| 10. ಹುಲಿ | ______ |

©KTBS Not to be republished

11. ಗಿಡುಗ ____________


12. ಹಾವು ____________

13. ಮೀನು ____________

14. ಜಿಂಕೆ ____________

15. ಕಪ್ಪೆ ____________

16. ಕಾಡುಕೋಣ ____________



ಹಸು ಮತ್ತು ಕರು ತಿನ್ನುವ ಆಹಾರದ ಪ್ರಮಾಣವನ್ನು ಗಮನಿಸು. ಹೀಗೆಯೇ ಬೇರೆ ಪ್ರಾಣಿಗಳು ಸೇವಿಸುವ ಆಹಾರ ಮತ್ತು ಅದರ ಪ್ರಮಾಣವನ್ನು ಗಮನಿಸು.

ನಿನಗೆ ಗೊತ್ತಿರುವ ಸಾಕು ಪ್ರಾಣಿಗಳ ಹೆಸರು ಬರೆದು ಅವುಗಳಿಗೆ ನೀಡುವ ಆಹಾರವನ್ನು ಬರೆ.

| **ಪ್ರಾಣಿಗಳ ಹೆಸರು** | **ನೀಡುವ ಅಹಾರ** |
|---|---|
| 1. ____________ | ____________ |
| 2. ____________ | ____________ |
| 3. ____________ | ____________ |
| 4. ____________ | ____________ |
| 5. ____________ | ____________ |

© KTBS Not to be republished

## ಆಟ–ಆಡು



ನಿನ್ನ ಗೆಳೆಯ, ಗೆಳತಿಯರೊಂದಿಗೆ ಆಟದ ಮೈದಾನಕ್ಕೆ ಹೋಗಿ ಶಿಕ್ಷಕರ ಸಹಾಯದಿಂದ ವೃತ್ತಾಕಾರದಲ್ಲಿ ನಿಲ್ಲಿರಿ. ಎಲ್ಲರೂ ಶಿಕ್ಷಕರಿಂದ ಪ್ರಾಣಿಗಳ ಚಿತ್ರವಿರುವ ಅಥವಾ ಅವುಗಳ ಆಹಾರದ ಚಿತ್ರವಿರುವ ಕಾರ್ಡ್‌ಗಳನ್ನು ಪಡೆದುಕೊಳ್ಳಿ. ಅವುಗಳನ್ನು ಪಿನ್ನಿನ ಸಹಾಯದಿಂದ ಅಂಗಿಗೆ ಹಾಕಿಕೊಳ್ಳಿ. ಶಿಕ್ಷಕರು **ಸುತ್ತಿ** ಎಂದಾಗ ವೃತ್ತಾಕಾರವಾಗಿ ಸುತ್ತಿ. **ನಿಲ್ಲಿ** ಎಂದಾಗ ಪ್ರಾಣಿಯ ಚಿತ್ರವಿರುವವರು ಅದರ ಆಹಾರದ ಚಿತ್ರವಿರುವವರ ಬಳಿ ಹೋಗಿ ನಿಲ್ಲಿ. ತಪ್ಪಿದವರು ಆಟದಿಂದ ಹೊರಗುಳಿಯಬೇಕು. ಉಳಿದವರು ಆಟವನ್ನು ಮುಂದುವರೆಸಬಹುದು.



©KTBS Not to be republished

## ಓದಿ-ತಿಳಿ

- ಸಸ್ಯಗಳು ಮತ್ತು ಅವುಗಳಿಂದ ದೊರೆಯುವ ಪದಾರ್ಥಗಳನ್ನು ತಿನ್ನುವ ಪ್ರಾಣಿಗಳು ಸಸ್ಯಾಹಾರಿಗಳು.
- ಪ್ರಾಣಿಗಳನ್ನೇ ಆಹಾರವಾಗಿ ತಿನ್ನುವ ಪ್ರಾಣಿಗಳು ಮಾಂಸಾಹಾರಿಗಳು.
- ಸಸ್ಯ ಮತ್ತು ಪ್ರಾಣಿಗಳು ಹಾಗೂ ಅವುಗಳಿಂದ ದೊರೆಯುವ ಪದಾರ್ಥಗಳನ್ನು ತಿನ್ನುವ ಪ್ರಾಣಿಗಳು ಮಿಶ್ರಾಹಾರಿಗಳು.

**ಚಟುವಟಿಕೆ :** ಇಲ್ಲೊಂದು ಸಮಸ್ಯೆ ಇದೆ. ಪ್ರಾಣಿಗಳು ಮತ್ತು ಅವುಗಳ ಆಹಾರವನ್ನು ದಾರದಿಂದ ಕಟ್ಟಲಾಗಿದೆ. ಈ ದಾರಗಳು ಚೆನ್ನಾಗಿ ಹೆಣೆದುಕೊಂಡಿರುವುದರಿಂದ ಪ್ರಾಣಿಗಳಿಗೆ ಅವುಗಳ ಆಹಾರವನ್ನು ಹುಡುಕಲು ಕಷ್ಟವಾಗುತ್ತಿದೆ. ನೀನು ಹುಡುಕಿ ಕೊಡುವೆಯಾ?



©KTBS Not to be republished

**ಚಟುವಟಿಕೆ :** ಇಲ್ಲಿ ಕೆಲವು ಪ್ರಾಣಿಗಳ ಚಿತ್ರಗಳಿವೆ. ಪ್ರಾಣಿಗಳ ಮಧ್ಯದಲ್ಲಿ ೩ ಚೀಲಗಳಿವೆ. ಪ್ರಾಣಿಗಳನ್ನು ಅವುಗಳ ಆಹಾರ ಕ್ರಮದ ಮೇಲೆ ವಿಂಗಡಿಸಿ, ನಂತರ ಅವುಗಳಿಗೆ ಸಂಬಂಧಿಸಿದ ಚೀಲಕ್ಕೆ ಗೆರೆ ಎಳೆ.




©KTBS
Not to be republished

## ಪಾಠ – 7

# ಅಡುಗೆ ಮನೆ

**ಈ ಪಾಠವನ್ನು ಕಲಿತ ನಂತರ ನೀನು,**

- ಆಹಾರ ತಯಾರಿಕೆಯಲ್ಲಿ ಬಳಸುವ ವಿವಿಧ ಪರಿಕರಗಳು ಮತ್ತು ಇಂಧನಗಳನ್ನು ಗುರುತಿಸುವೆ.
- ಆಹಾರ ತಯಾರಿಕೆಯಲ್ಲಿ ಕುಟುಂಬದ ಸದಸ್ಯರ ಪಾತ್ರವನ್ನು ಗುರುತಿಸುವೆ.

ಎಲ್ಲಾ ಜೀವಿಗಳಿಗೂ ಆಹಾರ ಬೇಕು. ಆಹಾರದಲ್ಲಿ ಅನೇಕ ಬಗೆಗಳಿವೆ. ವಿವಿಧ ಪ್ರದೇಶದ ಜನರು ವಿವಿಧ ಆಹಾರ ಕ್ರಮಗಳನ್ನು ಅನುಸರಿಸುತ್ತಾರೆ ಎನ್ನುವುದನ್ನು ನೀನು ಹಿಂದಿನ ಪಾಠದಲ್ಲಿ ಕಲಿತಿದ್ದೀಯೆ. ಈಗ ನಿನ್ನ ಮನೆಯಲ್ಲಿ ಆಹಾರವನ್ನು ಹೇಗೆ ತಯಾರಿಸುತ್ತಾರೆ ಎಂಬುದನ್ನು ತಿಳಿಯೋಣ.

- ನಿನ್ನ ಮನೆಯಲ್ಲಿ ಯಾರು ಯಾರು ಅಡುಗೆ ಮಾಡಲು ಸಹಕರಿಸುತ್ತಾರೆ?

______________________________

______________________________

______________________________

- ಅಡುಗೆ ಮಾಡಲು ನೀನು ಹೇಗೆ ಸಹಾಯ ಮಾಡುವೆ?

______________________________

______________________________

______________________________

- ನಿನ್ನ ಮನೆಯಲ್ಲಿ ಅಡುಗೆ ಮಾಡಲು ಬಳಸುವ 5 ವಸ್ತುಗಳನ್ನು ಬರೆ.

____________, ____________,

____________, ____________,

____________.

©KTBS Not to be republished

ಈ ಚಿತ್ರದಲ್ಲಿ ರಾಮು, ಅವನ ಅಕ್ಕ, ತಂದೆ ಮತ್ತು ತಾಯಿ ಸೇರಿ ಅಡುಗೆ ಮಾಡುತ್ತಿದ್ದಾರೆ. ಚಿತ್ರದ ಸಹಾಯದಿಂದ ಪ್ರಶ್ನೆಗಳಿಗೆ ಉತ್ತರಿಸು.



- ಇವರು ಯಾವ ಕೆಲಸಗಳನ್ನು ಮಾಡುತ್ತಿದ್ದಾರೆ ?

ತಾಯಿ ______________ ತಂದೆ ______________

ರಾಮು ______________ ಅಕ್ಕ ______________

- ಈ ಚಿತ್ರದಲ್ಲಿ ಕಂಡು ಬರುವ ವಸ್ತುಗಳ ಹೆಸರುಗಳನ್ನು ಬರೆ.

________, ________, ________, ________, ________,

________, ________, ________, ________, ________ .

- ಆಹಾರ ತಯಾರಿಕೆಯಲ್ಲಿ ಉಪಯೋಗಿಸುವ ವಿವಿಧ ಪರಿಕರಗಳ ಪಟ್ಟಿಯನ್ನು ಕೊಟ್ಟಿದೆ. ಮೇಲಿನ ಚಿತ್ರದಲ್ಲಿ ಕಂಡುಬರುವ ಪರಿಕರಗಳಿಗೆ (✓) ಗುರುತು ಹಾಕು.

| | | |
|---|---|---|
| ಲೋಟ | ಚಮಚ | ನೀರಿನ ಚೆಂಬು |
| ಸ್ಟೀಲ್ ಪಾತ್ರೆ | ತಟ್ಟೆ | ಗಾಜಿನ ಬಟ್ಟಲು |
| ನೀರಿನ ಡ್ರಂ | ಮಡಕೆ | ಕೊಡ/ಬಿಂದಿಗೆ |
| ಗ್ಯಾಸ್ ಸ್ಟೌವ್ | ಚಾಕು | ಕೆಂಡದ ಒಲೆ (ಇದ್ದಿಲು ಒಲೆ) |
| ಕುಕ್ಕರ್ | ಸೌಟು | ತರಕಾರಿ ಹೆಚ್ಚುವ ಮಣೆ |
| ಸೌದೆ ಒಲೆ | ಇಕ್ಕಳ | ಸೀಮೆಎಣ್ಣೆ ಸ್ಟೌವ್ |
| ಚಪಾತಿ ಮಣೆ | ಹಿಟ್ಟಿನ ಕೋಲು | ಲಟ್ಟಣಿಗೆ (ಲತ್ತೊಡಿ) |

Not to be republished ©KTBS

ನಿನ್ನ ಮನೆಯಲ್ಲಿ ಆಹಾರವನ್ನು ತಯಾರಿಸಲು ಯಾವ ಯಾವ ಪರಿಕರಗಳನ್ನು ಬಳಸುತ್ತಾರೆ? ಪಟ್ಟಿ ಮಾಡು.


______, ______, ______, ______.

______, ______, ______, ______.

______, ______, ______, ______.

______, ______, ______, ______.

**ಚಟುವಟಿಕೆ :** ನೀನೇನು ಸಹಾಯ ಮಾಡಿದೆ ?



**1. ತಂಪು ಪಾನಕ ತಯಾರಿಸಲು**

| ಅಣ್ಣ | ತಂಗಿ | ನಾನು |
|---|---|---|
| ನಿಂಬೆಹಣ್ಣು ಹೆಚ್ಚಿದನು. | ನೀರು-ಸಕ್ಕರೆ ತಂದಳು. | |

**2. ಬಿಸಿಬಿಸಿ ಚಪಾತಿ ಮಾಡಲು**



| ನಾನು | ಅಪ್ಪ | ಅಮ್ಮ |
|---|---|---|
| | ಗೋಧಿಹಿಟ್ಟನ್ನು ನೀರಿನೊಂದಿಗೆ ಕಲಸಿ, ಉಂಡೆಗಳನ್ನಾಗಿ ಮಾಡಿದರು. | ಹಿಟ್ಟನ್ನು ಲಟ್ಟಿಸಿ ಚಪಾತಿ ಮಾಡಿದರು. |

| ಅಕ್ಕ | ನಾವೆಲ್ಲರೂ |
|---|---|
| ಕಾವಲಿಯ ಮೇಲೆ ಬೇಯಿಸಿದಳು | ಒಟ್ಟಾಗಿ ಚಪಾತಿ ತಿಂದೆವು. |

**3. ಅನ್ನ ಮಾಡಲು**



| ಅಜ್ಜ | ನಾನು | ಅಕ್ಕ |
|---|---|---|
| ಅಕ್ಕಿಯನ್ನು ಪಾತ್ರೆಗೆ ಹಾಕಿದರು | | ಅಕ್ಕಿಗೆ ನೀರು ಬೆರೆಸಿ ಒಲೆಯ ಮೇಲಿಟ್ಟು ಅನ್ನ ಮಾಡಿದರು. |

©KTBS
Not to be republished

- ಬೇಯಿಸದೇ ಇರುವ ಆಹಾರವನ್ನು ನೀನು ತಿಂದಿದ್ದೀಯಾ ?

______________________________________

- ಬೇಯಿಸದೇ ತಿನ್ನಬಹುದಾದ 3 ಆಹಾರಗಳನ್ನು ಸೂಚಿಸು. (ಹಿಂದಿನ ತರಗತಿಯಲ್ಲಿ ಕಲಿತ ಅಂಶಗಳನ್ನು ಇಲ್ಲಿ ನೆನಪು ಮಾಡಿಕೋ)

| | | |
|---|---|---|
| | | |

- ನಿನ್ನ ಗೆಳತಿ ಲತಾ **ಹೆಸರುಬೇಳೆ ಕೋಸಂಬರಿ** ತಯಾರಿಸುವ ವಿಧಾನವನ್ನು ಪರಿಚಯಿಸುತ್ತಿದ್ದಾಳೆ.


ಹೆಸರುಬೇಳೆಯನ್ನು ನೀರಿನಲ್ಲಿ ಸ್ವಲ್ಪ ಹೊತ್ತು ನೆನೆಹಾಕು. → ಕ್ಯಾರೆಟನ್ನು ತುರಿ. → ಮೆಣಸಿನ ಕಾಯಿ ಮತ್ತು ಕೊತ್ತಂಬರಿ ಸೊಪ್ಪನ್ನು ಸಣ್ಣಗೆ ಕತ್ತರಿಸು.

ಚೆನ್ನಾಗಿ ನೆನೆದ ಹೆಸರುಬೇಳೆಯೊಂದಿಗೆ ಎಲ್ಲವನ್ನೂ ಮಿಶ್ರಣ ಮಾಡಿ, ಸ್ವಲ್ಪ ತೆಂಗಿನ ತುರಿಯನ್ನು ಹಾಕು. → ಸ್ವಲ್ಪ ಎಣ್ಣೆಯನ್ನು ಕಾಯಿಸಿ ಸಾಸಿವೆ, ಕರಿಬೇವು ಹಾಕಿ ಒಗ್ಗರಣೆ ತಯಾರಿಸು. → ಒಗ್ಗರಣೆಯನ್ನು ಮಿಶ್ರಣಕ್ಕೆ ಹಾಕು. ನಿಂಬೆ ರಸವನ್ನು ಹಿಂಡು.


ಅಗತ್ಯಕ್ಕೆ ತಕ್ಕಷ್ಟು ಉಪ್ಪನ್ನು ಹಾಕು. → ಎಲ್ಲವನ್ನು ಚೆನ್ನಾಗಿ ಕಲಸು. → ನಿನ್ನ ಸ್ನೇಹಿತರೊಡನೆ ತಿನ್ನು.

©KTBS Not to be republished

**ಚಟುವಟಿಕೆ :** ನಿನಗೆ ಗೊತ್ತಿರುವ ಯಾವುದಾದರೂ ಆಹಾರವನ್ನು ತಯಾರಿಸುವ ವಿಧಾನವನ್ನು ಇಲ್ಲಿ ಬರೆ.



**ಚಟುವಟಿಕೆ :** ಕೆಳಗಿನ ಚಿತ್ರದಲ್ಲಿ ಕೊಟ್ಟಿರುವ ಚುಕ್ಕೆಗಳನ್ನು ಸೇರಿಸಿ ಬಣ್ಣ ಹಚ್ಚು. ಈ ಪಾತ್ರೆಗಳ ಹೆಸರನ್ನು ಬಿಟ್ಟಿರುವ ಜಾಗದಲ್ಲಿ ಬರೆ.



1. ____________
2. ____________
3. ____________
4. ____________
5. ____________
6. ____________
7. ____________

©KTBS Not to be republished


ಕೆಳಗಿನ ಚಿತ್ರದಲ್ಲಿರುವ ಪಾತ್ರೆಗಳಲ್ಲಿ ಯಾವ ಆಹಾರ ತಯಾರಿಸಬಹುದು ಎಂಬುದನ್ನು ಬರೆ.




________ ________ ________




________ ________ ________




________ ________ ________




________ ________ ________



________ ________ ________




________ ________ ________




©KTBS
Not to be republished


ಇಲ್ಲಿ ತೋರಿಸಿರುವ ಒಲೆಗಳು ಯಾವುದರ ಸಹಾಯದಿಂದ ಉರಿಯುತ್ತಿವೆ?





________________ ________________





________________ ________________

ಸೌದೆ, ಸೀಮೆಎಣ್ಣೆ, ವಿದ್ಯುತ್, ಅಡುಗೆ ಅನಿಲ (ಗ್ಯಾಸ್) ಇವೆಲ್ಲವೂ ಇಂಧನಗಳು. ಆಹಾರವನ್ನು ಬೇಯಿಸಲು ಇಂಧನಗಳು ಬೇಕು.

ನಿನ್ನ ಮನೆಯಲ್ಲಿ ಅಡುಗೆ ಮಾಡಲು ಬಳಸುವ ಇಂಧನಗಳಾವುವು?

________________________________________




ಅಡುಗೆ ಮಾಡಲು ಬಳಸುವ ಬೇರೆ ಯಾವ ಇಂಧನಗಳು ನಿನಗೆ ಗೊತ್ತು?



________________________________________


ಸೌದೆ, ಬೆರಣಿ, ಸೀಮೆಎಣ್ಣೆ, ವಿದ್ಯುತ್, ಗ್ಯಾಸ್, ಗೋಬರ್ ಗ್ಯಾಸ್, ಇದ್ದಿಲು ಇವೆಲ್ಲ ಅಡುಗೆಗೆ ಬಳಸುವ ವಿವಿಧ ಇಂಧನಗಳು.


©KTBS Not to be republished

**ಚಟುವಟಿಕೆ :** ಪ್ರತಿಯೊಂದು ಇಂಧನವನ್ನು ಉರಿಸಲು ವಿಶಿಷ್ಟವಾದ ಒಲೆಗಳಿವೆ. ಕೆಳಗೆ ಕೊಟ್ಟಿರುವ ಚಿತ್ರಗಳನ್ನು ಗಮನಿಸು. ನಂತರ ಕೆಳಗೆ ಸೂಚಿಸಿದಂತೆ ಗುರುತು ಹಾಕು.



- ನಿನ್ನ ಮನೆಯಲ್ಲಿ ಅಡುಗೆ ಮಾಡಲು ಬಳಸುವ ಒಲೆಗೆ ◯ ಗುರುತು ಹಾಕು.
- ನಿನ್ನ ಗೆಳೆಯ/ಗೆಳತಿಯ ಮನೆಯಲ್ಲಿ ಬಳಸುವ ಒಲೆಗೆ ▭ ಗುರುತು ಹಾಕು.
- ನೀನು ನೋಡಿರುವ ಒಲೆ/ಸಾಧನಗಳಿಗೆ △ ಗುರುತು ಹಾಕು.

©KTBS Not to be republished

**ಚಟುವಟಿಕೆ :** ಈ ಒಲೆಗಳಲ್ಲಿ ಬಳಸುವ ಇಂಧನಗಳನ್ನು ಹೆಸರಿಸು.



________________




________________




________________



________________



________________



________________



________________

©KTBS Not to be republished

## ಪಾಠ – 8

# ಮನೆ ಕಟ್ಟೋಣ

**ಈ ಪಾಠವನ್ನು ಕಲಿತ ನಂತರ ನೀನು,**
- ವಿವಿಧ ರೀತಿಯ ಮನೆಗಳನ್ನು ಗುರುತಿಸುವೆ.
- ಮನೆ ಕಟ್ಟಲು ಉಪಯೋಗಿಸುವ ವಿವಿಧ ವಸ್ತುಗಳ ಪರಿಚಯ ಮಾಡಿಕೊಳ್ಳುವೆ.

ನಿನ್ನ ಮನೆಯ ಪರಿಚಯ ನಿನಗಿದೆ. ನೀನು ವಿವಿಧ ರೀತಿಯ ಮನೆಗಳನ್ನು ನಿನ್ನ ಊರಿನಲ್ಲಿ ನೋಡಿರಬಹುದು. ಕೆಲವನ್ನು ಈ ಕೆಳಗೆ ಚಿತ್ರದಲ್ಲಿ ತೋರಿಸಲಾಗಿದೆ. ಇವುಗಳನ್ನು ಗುರುತಿಸಿ, ಬಿಟ್ಟ ಜಾಗದಲ್ಲಿ ಹೆಸರಿಸು.



______________



______________



______________





______________



______________

______________



______________

© KTBS Not to be republished

**ಚಟುವಟಿಕೆ :** ಚಿತ್ರದಲ್ಲಿ ನೀನು ಹೆಸರಿಸಿದ ಮನೆಗಳನ್ನು ಕಟ್ಟಲು ಯಾವ ವಸ್ತುಗಳನ್ನು ಬಳಸುತ್ತಾರೆ? ನಿನ್ನ ಗೆಳೆಯರೊಂದಿಗೆ ಸೇರಿ ಒಂದು ಪಟ್ಟಿಯನ್ನು ತಯಾರಿಸು.

| ಮನೆಯ ವಿಧ | ಬಳಕೆಯಾಗುವ ಸಾಮಗ್ರಿಗಳು |
|---|---|
| 1. ______________ | ________, ________, ________, ________. |
| 2. ______________ | ________, ________, ________, ________. |
| 3. ______________ | ________, ________, ________, ________. |
| 4. ______________ | ________, ________, ________, ________. |
| 5. ______________ | ________, ________, ________, ________. |
| 6. ______________ | ________, ________, ________, ________. |
| 7. ______________ | ________, ________, ________, ________. |

**ಮಾಡಿ–ನೋಡು**

ನಿನ್ನ ಗೆಳೆಯರೊಂದಿಗೆ ನಿನ್ನ ಊರಿನಲ್ಲಿರುವ ವಿವಿಧ ರೀತಿಯ ಮನೆಗಳಿಗೆ ಭೇಟಿ ಕೊಡು. ಅಲ್ಲಿ ಬಳಸಿರುವ ವಸ್ತುಗಳನ್ನು ನೋಡು. ಕಟ್ಟುತ್ತಿರುವ ಮನೆಗಳನ್ನೂ ನೋಡು. ಅಲ್ಲಿ ಬಳಸುತ್ತಿರುವ ವಸ್ತುಗಳನ್ನು ಗಮನಿಸು.

ಮನೆಗಳನ್ನು ಹೇಗೆ ನಿರ್ಮಿಸುತ್ತಾರೆ? ನಿನ್ನ ಮಾತುಗಳಲ್ಲಿ ವಿವರಿಸು.

______________________________________________

______________________________________________


______________________________________________

______________________________________________

______________________________________________

©KTBS Not to be republished


ಕೆಳಗೆ ವಿವಿಧ ಮನೆಗಳ ಚಿತ್ರಗಳಿವೆ. ಪಕ್ಕದಲ್ಲಿ ಮಾಹಿತಿಯೂ ಇದೆ. ಬಿಟ್ಟಿರುವ ಮಾಹಿತಿಯನ್ನು ನೀನು ಪೂರ್ಣಗೊಳಿಸು.




ನಾನು ಗುಡಾರ(ಟೆಂಟ್). ನಾನು ಬೇರೆ ಮನೆಗಳ ತರಹ ಶಾಶ್ವತ ಮನೆ ಅಲ್ಲ. ನನ್ನಲ್ಲಿ ಕೆಲಕಾಲವಿರಬಹುದು ಅಷ್ಟೇ! ನನ್ನನ್ನು ಕಟ್ಟಲು ______, ______, ______, ______, ______ ವಸ್ತುಗಳು ಸಾಕು. ನನ್ನನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವುದು ಕೂಡ ಸುಲಭ.



ನನ್ನನ್ನು ಕಟ್ಟಲು ಹೆಚ್ಚಿನ ವಸ್ತುಗಳು ಬೇಡ. ನನ್ನ ನಿರ್ಮಾಣಕ್ಕೆ ______, ______, ______, ______, ______ ಇದ್ದರೆ ಸಾಕೇ ಸಾಕು. ನಾನು ಬಲು ಸರಳ.




ನನ್ನ ಚಾವಣಿಯನ್ನು ಹೆಂಚಿನಿಂದ ನಿರ್ಮಿಸುತ್ತಾರೆ. ನನ್ನನ್ನು ಕಟ್ಟಲು ಬೇಕಾದ ವಸ್ತುಗಳೆಂದರೆ ______, ______, ______, ______, ______, ______, ______, ______, ______, ______.



ನನ್ನ ಚಾವಣಿ ದಪ್ಪ. ಬೇಸಿಗೆಯಲ್ಲಿ ತಂಪು. ಚಳಿಗಾಲದಲ್ಲಿ ಬೆಚ್ಚಗೆ. ಏಕೆ ಗೊತ್ತೆ? ನನ್ನ ಚಾವಣಿಯನ್ನು ______, ______, ______, ______, ______ ಗಳಿಂದ ಕಟ್ಟುತ್ತಾರೆ.

©KTBS Not to be republished



ಇಗೋ ನೋಡು ನನ್ನ ತಾರಸಿ! ಎಷ್ಟು ಚೆಂದ. ನಾನು ಬಿಸಿಲು, ಮಳೆ, ಗಾಳಿಯನ್ನು ತಡೆದುಕೊಳ್ಳಬಲ್ಲೆ. ಆದ್ದರಿಂದ ಹೆಚ್ಚಿನ ಜನರು ನನ್ನನ್ನೇ ಮೆಚ್ಚುತ್ತಾರೆ. ನನ್ನನ್ನು ಕಟ್ಟಲು ಬೇಕಾಗುವ ವಸ್ತುಗಳ ಪಟ್ಟಿ ಮಾಡಿ ನೋಡು.

ಗೋಡೆ ______, ______, ______, ______, ______.

ಬಾಗಿಲು ______, ______, ______, ______, ______.

ಕಿಟಕಿ ______, ______, ______, ______, ______.

ಮೇಲ್ಛಾವಣಿ ______, ______, ______, ______, ______.

ನೆಲ ______, ______, ______, ______, ______.

**ಹಾಡಿ–ನಲಿ**

ಸುಲಭವು ಒಯ್ಯಲು ಟೆಂಟು ಮನೆ
ಸರಳವು ಕಟ್ಟಲು ಹುಲ್ಲು ಮನೆ
ಕೆಂಪು ಕಪ್ಪಿನ ಹೆಂಚು ಮನೆ
ದಪ್ಪ ಛಾವಣಿಯ ಮಾಡಿನ ಮನೆ
ಸಿಮೆಂಟ್, ಕಬ್ಬಿಣದ ತಾರಸಿ ಮನೆ
ನೋಡಲು ಸುಂದರ ಎಲ್ಲ ಮನೆ
ಬದುಕಲು ಬೇಕು ನಮಗೆ ಮನೆ.



©KTBS Not to be republished


## ಪಾಠ – 9


# ಚೆಂದದ ಮನೆ

**ಈ ಪಾಠವನ್ನು ಕಲಿತ ನಂತರ ನೀನು,**

- ಉತ್ತಮ ಮನೆಯ ಲಕ್ಷಣಗಳನ್ನು ಗುರುತಿಸುವೆ.
- ವಿವಿಧ ಸಂಸ್ಕೃತಿಗನುಗುಣವಾಗಿ ಮನೆಯ ಅಲಂಕಾರದ ವಿಧಾನಗಳನ್ನು ತಿಳಿಯುವೆ.

ಒಬ್ಬನು ತನ್ನ ಮನೆ ಸುಭದ್ರವಾಗಿ ಇರಬೇಕೆಂದುಕೊಂಡ. ಇಟ್ಟಿಗೆ ಉಕ್ಕುಗಳಿಂದ ಮನೆಯನ್ನು ಕಟ್ಟಿ ತಾರಸಿ ಹಾಕಿದ. ಆನಂತರ ಒಳಗೆ ಹೋಗಿ ನೋಡುತ್ತಾನೆ. ತುಂಬಾ ಕತ್ತಲೆ! ಜೊತೆಗೆ ಗಾಳಿಯೂ ಇಲ್ಲ. ಸರಿ, ಗಾಳಿ, ಬೆಳಕು ಬೇಕು ತಾನೆ, ತಂದರಾಯಿತು ಎಂದು ದೊಡ್ಡ ಬೋಗುಣಿಯನ್ನು ಬಿಸಿಲಿಗೆ ಹಿಡಿದು ನಿಂತ. ಸ್ವಲ್ಪ ಸಮಯದ ನಂತರ ಒಳಗೆ ಹೋಗಿ ಸುರಿದ. ಹೀಗೆ ಮಾಡುತ್ತಲೇ ಹೋದ. ಆದರೂ ಗಾಳಿ ಬೆಳಕು ತುಂಬಲೇ ಇಲ್ಲ. ದಾರಿ ಹೋಕನೊಬ್ಬ ಅವನನ್ನು ನೋಡಿ ನಕ್ಕ. ಮನೆಗೆ ಗಾಳಿ ಬೆಳಕು ಬರಲು ನೆರವಾದ. ದಾರಿಹೋಕ ಮನೆಗೆ ಗಾಳಿ ಬೆಳಕು ಬರಲು ಏನು ಮಾಡಿರಬಹುದು? ನಿನ್ನ ಮಾತುಗಳಲ್ಲಿ ವಿವರಿಸು.





______________________________

______________________________

______________________________

______________________________


______________________________


______________________________

© KTBS Not to be republished

ಉತ್ತಮ ಮನೆಯ ಲಕ್ಷಣಗಳನ್ನು ತಿಳಿದು ಬರೆ.

ಈ ಎರಡು ಮನೆಗಳಲ್ಲಿ ನಿನಗೆ ಯಾವ ಮನೆಯಲ್ಲಿ ಇರಲು ಇಷ್ಟ? ಏಕೆ? ಕೊಟ್ಟಿರುವ ಜಾಗದಲ್ಲಿ ಬರೆ.





©KTBS Not to be republished



**ಓದಿ–ತಿಳಿ**

**ಉತ್ತಮ ಮನೆ ಹೇಗಿರಬೇಕು?**

1. ಮನೆಯಲ್ಲಿ ನಮಗೆ ಅಗತ್ಯವಾದ ಗಾಳಿ ಮತ್ತು ಬೆಳಕು ಬರುವಂತಿರಬೇಕು. ಅದಕ್ಕಾಗಿ ದೊಡ್ಡ ದೊಡ್ಡ ಕಿಟಕಿಗಳು, ಬಾಗಿಲು ಇರಬೇಕು.
2. ಮನೆಯ ಸುತ್ತಲೂ ಸಾಕಷ್ಟು ಜಾಗವಿರಬೇಕು. ಈ ಜಾಗದಲ್ಲಿ ಕೈ ತೋಟವನ್ನು ಬೆಳೆಸಿರಬೇಕು.
3. ಕಳ್ಳರು ಒಳನುಗ್ಗದಂತೆ ಮನೆ ಸುರಕ್ಷಿತವಾಗಿರಬೇಕು. ಅಂದರೆ ಕಿಟಕಿ ಬಾಗಿಲುಗಳು ಭದ್ರವಾಗಿರಬೇಕು.
4. ಮನೆಯಲ್ಲಿ ಕ್ರಿಮಿ, ಕೀಟಗಳ ಹಾವಳಿ ತಪ್ಪಿಸಲು ಮನೆಯನ್ನು ಪ್ರತಿದಿನವೂ ಗುಡಿಸಿ, ಒರೆಸಿ ಸ್ವಚ್ಛವಾಗಿಟ್ಟುಕೊಳ್ಳಬೇಕು.
5. ಮಳೆ ನೀರು ಸೋರದಂತೆ ಹಾಗೂ ಹಾವು, ಇಲಿ ಮುಂತಾದ ಪ್ರಾಣಿಗಳು ಒಳನುಗ್ಗದಂತೆ ಇರಲು ಮನೆಯಲ್ಲಿ, ಛಾವಣಿಯಲ್ಲಿ ಬಿರುಕು, ಸಂದುಗಳಿರಬಾರದು.
6. ಮನೆಯ ಸುತ್ತ ಕಸವನ್ನು ಹಾಕಬಾರದು. ಆಗಾಗ ಗುಡಿಸಿ ಸ್ವಚ್ಛವಾಗಿಡಬೇಕು. ಕಸವನ್ನು ಬೇರ್ಪಡಿಸಿ, ಕಸದ ಬುಟ್ಟಿಗೆ ಹಾಕಬೇಕು. ಕಸದ ಬುಟ್ಟಿಯಲ್ಲಿರುವ ಕಸವನ್ನು ಪ್ರತಿದಿನವೂ ಬೀದಿಯಲ್ಲಿರುವ ಕಸದ ತೊಟ್ಟಿಗೆ ಅಥವಾ ಮನೆಯಿಂದ ದೂರದಲ್ಲಿರುವ ತಿಪ್ಪೆಗೆ ಹಾಕಬೇಕು. ನಗರ ಪ್ರದೇಶಗಳಲ್ಲಾದರೆ, ಪೌರ ಕಾರ್ಮಿಕರ ಕಡೆ ಕೊಡಬೇಕು.
7. ಮನೆಯ ಸುತ್ತ ಮುತ್ತ ಹಾಗೂ ಚರಂಡಿಯಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಮನೆಯ ಸುತ್ತ ತಿಪ್ಪೆ, ಕೊಚ್ಚೆಗುಂಡಿಗಳು ಇರದಂತೆ ನೋಡಿಕೊಳ್ಳಬೇಕು.

- ನಿನ್ನ ಮನೆಯಲ್ಲಿ ಯಾವ ವಿಧದ ಕಸ ಉಂಟಾಗುತ್ತದೆ?

  __________, __________, __________, __________, __________

- ಮನೆಯ ವಿವಿಧ ಕಸವನ್ನು ಎಲ್ಲಿ ಹಾಕುತ್ತೀಯ?

  __________, __________, __________, __________, __________.

- ನಿನ್ನ ಶಾಲೆಯನ್ನು ಹೇಗೆ ಸ್ವಚ್ಛಗೊಳಿಸುವೆ?

©KTBS Not to be republished

- ನಿನ್ನ ಶಾಲೆಯಲ್ಲಿ ಉಂಟಾಗುವ ಕಸ ಯಾವುವು?

_______________________________________________


_______________________________________________

- ಶಾಲೆಯ ಕಸವನ್ನು ಎಲ್ಲಿ ಹಾಕುತ್ತಾರೆ?

_______________________________________________

_______________________________________________

ಮೂರನೇ ತರಗತಿಯ ಪ್ರಿಯಾಳ ಮನೆ ಬಹಳ ಸ್ವಚ್ಛವಾಗಿದೆ. ಎಲ್ಲೂ ಕಸವಿಲ್ಲ. ಮನೆಯ ಮುಂದೆ ದಿನವೂ ಅವಳೇ ವಿವಿಧ ರೀತಿಯ ರಂಗೋಲಿ ಹಾಕುತ್ತಾಳೆ. ಹಬ್ಬದ ದಿನಗಳಲ್ಲಿ ರಂಗೋಲಿಗೆ ಬಣ್ಣಗಳನ್ನು ತುಂಬಿ ಆಕರ್ಷಕವಾಗಿ ಕಾಣುವಂತೆ ಮಾಡುತ್ತಾಳೆ. ರಜಾ ದಿನಗಳಲ್ಲಿ ಹೂದಾನಿಗಳಲ್ಲಿ ಹೂಗಳನ್ನು ಇಡುತ್ತಾಳೆ. ಹಬ್ಬದ ದಿನಗಳಲ್ಲಿ ತೋರಣ ಕಟ್ಟುತ್ತಾಳೆ. ಮನೆಯ ಒಳಗೆ ಅಲ್ಲಲ್ಲಿ ಚಂದದ ಬೊಂಬೆಗಳನ್ನು ಇಟ್ಟಿದ್ದಾಳೆ. ಮನೆಯ ವಸ್ತುಗಳನ್ನು ಅವುಗಳ ಜಾಗದಲ್ಲಿ ಓರಣವಾಗಿ ಜೋಡಿಸಿದ್ದಾಳೆ. ಅವಳ ಮನೆ ಬಹಳ ಸುಂದರವಾಗಿದೆ. ಪ್ರಿಯಾಳಿಗೆ ಮನೆಯನ್ನು ಸಿಂಗರಿಸುವುದು ಬಹಳ ಇಷ್ಟವಾದ ಕೆಲಸ.



©KTBS Not to be republished

ನಿನ್ನ ಮನೆಯ ಅಲಂಕಾರವನ್ನು ಕುರಿತು 4 ಸಾಲುಗಳಲ್ಲಿ ಬರೆ.

________________________________

________________________________

________________________________

________________________________

ನಿನ್ನ ಮನೆಯನ್ನು ಸ್ವಚ್ಛವಾಗಿಟ್ಟುಕೊಳ್ಳಲು ಹಿರಿಯರಿಗೆ ನೀನು ಹೇಗೆ ನೆರವಾಗುವೆ?

________________________________

________________________________

________________________________

________________________________

________________________________

________________________________

________________________________

________________________________

________________________________



**ಚಟುವಟಿಕೆ :**

- ನಿನ್ನ ಗೆಳೆಯರ ಮನೆಗಳಿಗೆ ಭೇಟಿ ನೀಡಿ ಅಲ್ಲಿನ ಅಲಂಕಾರವನ್ನು ಗಮನಿಸು.
- ಹಬ್ಬ ಅಥವಾ ವಿಶೇಷ ದಿನಗಳಲ್ಲಿ ನೀನು ಮತ್ತು ನಿನ್ನ ಗೆಳೆಯರು ಮನೆಯನ್ನು ಹೇಗೆ ಅಲಂಕರಿಸುತ್ತೀರಿ? ವಿವರಿಸು.

________________________________

________________________________

________________________________

©KTBS Not to be republished

**ಚಟುವಟಿಕೆ :** ಈ ಚಿತ್ರಗಳನ್ನು ಗಮನಿಸು. ಇಲ್ಲಿ ಕಂಡು ಬರುವ ಮನೆಗಳ ಅಲಂಕಾರದ ವಿಶೇಷತೆಯನ್ನು ಬರೆ.



________________________________________

________________________________________

________________________________________

________________________________________

**ಚಟುವಟಿಕೆ :** ಇದೊಂದು ಮನೆಯನ್ನು ಅಲಂಕರಿಸುವ ಸಾಮಗ್ರಿಗಳನ್ನು ಮಾರುವ ಅಂಗಡಿ. ಈ ಅಂಗಡಿಯಲ್ಲಿ ನಿನ್ನ ಮನೆಯನ್ನು ಅಲಂಕರಿಸಲು ಬೇಕಾದ ವಸ್ತುಗಳಿಗೆ (✓) ಗುರುತು ಹಾಕು.




©KTBS Not to be republished


- ಮನೆಯನ್ನು ಸಿಂಗರಿಸಲು ಬಳಸಬಹುದಾದ ವಸ್ತುಗಳ ಪಟ್ಟಿ ತಯಾರಿಸು.

__________, __________, __________, __________,

__________, __________, __________, __________,

__________, __________, __________, __________.

- ಚಿತ್ರದಲ್ಲಿರುವ ಮನೆಗೆ ಅಲಂಕಾರ ಮಾಡು.



**ಮಾಡಿ–ನೋಡು**

ನಿನ್ನ ಗೆಳೆಯರೊಡನೆ ಸೇರಿ ನೀನು ಇಷ್ಟಪಡುವ ಮನೆಯ ಮಾದರಿಯನ್ನು ಮಣ್ಣು, ರಟ್ಟು, ಬೆಂಡು – ಇವುಗಳಲ್ಲಿ ಯಾವುದಾದರೂ ವಸ್ತುವಿನಿಂದ ತಯಾರಿಸು. ಆನಂತರ ಎಲ್ಲರೊಡನೆ ಸೇರಿ ಮನೆಯನ್ನು ಅಲಂಕರಿಸು.

©KTBS Not to be republished


# ಪಾಠ – 10

# ನಮ್ಮ ಜ್ಞಾನೇಂದ್ರಿಯಗಳು

**ಈ ಪಾಠವನ್ನು ಕಲಿತ ನಂತರ ನೀನು,**

- ದೇಹದ ಭಾಗಗಳಾದ ಜ್ಞಾನೇಂದ್ರಿಯಗಳನ್ನು ಗುರುತಿಸುವೆ ಮತ್ತು ಅವುಗಳ ಕಾರ್ಯಗಳನ್ನು ತಿಳಿಯುವೆ.
- ಜ್ಞಾನೇಂದ್ರಿಯಗಳ ಸ್ವಚ್ಛತೆ ಮತ್ತು ರಕ್ಷಣೆಯ ವಿಧಾನಗಳನ್ನು ಅರಿಯುವೆ.

ಮೂರನೆಯ ತರಗತಿಯ ಶಿಕ್ಷಕರು ಅಂದು ರಜೆ ಪಡೆದಿದ್ದರು. ತರಗತಿಯಲ್ಲಿ ಗುಲ್ಲೋ ಗುಲ್ಲು. ಗಲಾಟೆ ನಿಲ್ಲಿಸಲು ಬೇರೆ ಶಿಕ್ಷಕರು ತರಗತಿಗೆ ಬಂದರು. ದೇಹದ ಭಾಗಗಳನ್ನು ಗುರುತಿಸಲು ಮಕ್ಕಳಿಗೆ ಹೇಳಿದರು. ನೀನು ಎರಡನೆಯ ತರಗತಿಯಲ್ಲಿ ದೇಹದ ಭಾಗಗಳನ್ನು ಗುರುತಿಸಿರುವೆ. ನಿನ್ನ ಸ್ನೇಹಿತರೊಡನೆ ಸೇರಿ ಈ ಚಿತ್ರದಲ್ಲಿರುವ ದೇಹದ ಭಾಗಗಳನ್ನು ಗುರುತಿಸು.



©KTBS Not to be republished

ದೇಹದ ಭಾಗಗಳನ್ನು ಗುರುತಿಸಿದೆಯಲ್ಲವೆ? ಈಗ ಒಂದು ಕಡೆ ಮೌನವಾಗಿ ಕುಳಿತುಕೊ. ನಿನ್ನ ಗಮನಕ್ಕೆ ಅಥವಾ ಅನುಭವಕ್ಕೆ ಬಂದ ವಿಷಯಗಳನ್ನು ಇಲ್ಲಿ ಪಟ್ಟಿಮಾಡು.

ಉದಾಹರಣೆ: ಹೂವಿನ ಸುವಾಸನೆ, ಬಸ್ಸಿನ ಶಬ್ದ, ಕೈತೋಟದ ದೃಶ್ಯ,

______________________________

______________________________

ಇವೆಲ್ಲವೂ ನಿನ್ನ ಗಮನಕ್ಕೆ ಹೇಗೆ ಬಂದವು? ಯಾವ ಅಂಗಗಳ ಸಹಾಯದಿಂದ ಈ ವಿಷಯಗಳು ನಿನ್ನ ಅನುಭವಕ್ಕೆ ಬಂದವು. ಕೊಟ್ಟಿರುವ ಜಾಗದಲ್ಲಿ ಬರೆ.

______________________________

______________________________

### ಕಣ್ಣು :

ಕೆಲವು ಮಕ್ಕಳು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಕಣ್ಣು ಮುಚ್ಚಾಲೆ ಆಡುತ್ತಿದ್ದರು. ಹೀಗೆಯೇ ಆಡುತ್ತಾ ಪುಟ್ಟ ಚಿತ್ರಾಳ ಕಣ್ಣಿಗೆ ಬಟ್ಟೆ ಕಟ್ಟಿಬಿಟ್ಟರು. ಕಾಣುತ್ತಿಲ್ಲ. ನಾನು ಹೇಗೆ ಹುಡುಕಲಿ?



ಚಿತ್ರಾಳಿಗೆ ಏಕೆ ಏನೂ ಕಾಣುತ್ತಿಲ್ಲ?

______________________________

______________________________

ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ನಿನ್ನ ಸ್ನೇಹಿತರನ್ನು ಅಥವಾ ವಸ್ತುಗಳನ್ನು ಗುರುತಿಸು. ನಿನಗಾಗುವ ಅನುಭವಗಳನ್ನು ಸ್ನೇಹಿತರೊಂದಿಗೆ ಹಂಚಿಕೊ.

**ಓದಿ-ತಿಳಿ**

- ಕಣ್ಣುಗಳು ಸುತ್ತಲಿನ ಪರಿಸರವನ್ನು ನೋಡಲು ಸಹಾಯ ಮಾಡುತ್ತವೆ.
- ಪರಿಸರದಲ್ಲಿರುವ ವಸ್ತುಗಳ ಗಾತ್ರ, ಆಕಾರ, ಬಣ್ಣ ಮತ್ತು ಅವುಗಳಿಗಿರುವ ದೂರ ಇವೆಲ್ಲವನ್ನು ಗುರುತಿಸಲು ಸಹಾಯ ಮಾಡುತ್ತವೆ.

©KTBS Not to be republished

ಮಂಜು ಶಾಲೆಗೆ ಬರುತ್ತಿರುವಾಗ ಕಸದ ಚೂರೊಂದು ಕಣ್ಣಲ್ಲಿ ಬಿತ್ತು. ಅವನು ಕಣ್ಣನ್ನು ಉಜ್ಜಿದ. ಕಣ್ಣು ಕೆಂಪಾಗಿ ನೀರು ಸುರಿಯಿತು. ವಿಷಯ ತಿಳಿದ ಶಿಕ್ಷಕರು ಅವನನ್ನು ವೈದ್ಯರಲ್ಲಿಗೆ ಕರೆದುಕೊಂಡು ಹೋದರು. ವೈದ್ಯರು ಕೂಡಲೇ ಚಿಕಿತ್ಸೆ ನೀಡಿದರು. ಜೊತೆಗೆ ಕಣ್ಣಿನ ಬಗ್ಗೆ ತಿಳುವಳಿಕೆಯನ್ನು ಕೊಟ್ಟರು. "ಕಣ್ಣು ಸೂಕ್ಷ್ಮ ಅಂಗ. ಕಣ್ಣಿನಲ್ಲಿ ಧೂಳು, ಕೀಟ ಇಂತಹ ವಸ್ತುಗಳು ಬಿದ್ದಾಗ ಕಣ್ಣನ್ನು ಉಜ್ಜಬಾರದು. ಕಣ್ಣಿಗೆ ತೊಂದರೆಯಾಗುತ್ತದೆ. ಕಣ್ಣನ್ನು ಶುದ್ಧ ನೀರಿನಿಂದ ತೊಳೆಯಬೇಕು. ಇಲ್ಲವೆ, ವೈದ್ಯರಲ್ಲಿಗೆ ಹೋಗಬೇಕು. ಕಣ್ಣಿನ ರಕ್ಷಣೆಯ ಬಗ್ಗೆ ಎಚ್ಚರಿಕೆ ವಹಿಸಬೇಕು."

ನೀನು ನಿನ್ನ ಕಣ್ಣಿನ ರಕ್ಷಣೆಯ ಬಗ್ಗೆ ಎಚ್ಚರ ವಹಿಸು.

ಕೆಳಗಿನ ಚಿತ್ರಗಳಲ್ಲಿ ಸರಿಯಾದವುಗಳಿಗೆ (✓) ಗುರುತು, ತಪ್ಪಾದವುಗಳಿಗೆ (X) ಗುರುತು ಹಾಕು.

 ☐

 ☐

 ☐

 ☐

 ☐

 ☐

ಈ ಮೇಲಿನ ಚಿತ್ರಗಳಿಂದ ನೀನು ಏನು ತಿಳಿದೆ ಎಂಬುದನ್ನು ಸ್ನೇಹಿತರೊಡನೆ ಚರ್ಚಿಸು.


©KTBS Not to be republished

## ಕಿವಿ :

ನಿನ್ನ ಸ್ನೇಹಿತರ ಕಣ್ಣಿಗೆ ಬಟ್ಟೆಕಟ್ಟು. ವಿವಿಧ ಶಬ್ದಗಳನ್ನು ಮಾಡು. ಗಂಟೆಯ ಶಬ್ದ, ಹಕ್ಕಿಯ ಕೂಗು, ಪೀಪಿಯ ಶಬ್ದ ಇತ್ಯಾದಿ. ಈ ಶಬ್ದಗಳು ಯಾವುವು ಎಂದು ಕೇಳು. ಹಾಗೆಯೇ ಅಲ್ಲಿ ಆಗುತ್ತಿರುವ ಇತರ ಶಬ್ದಗಳನ್ನೂ ಗುರುತಿಸಲು ಹೇಳು. ಈ ಶಬ್ದಗಳು ಯಾವುವು, ಯಾವ ದಿಕ್ಕಿನಿಂದ ಬರುತ್ತಿವೆ ಎಂದು ಅವರು ಹೇಳಲಿ.

**ಓದಿ–ತಿಳಿ**

- ಕಿವಿ, ಶಬ್ದಗಳನ್ನು ಕೇಳಲು ಉಪಯೋಗಿಸುವ ಅಂಗ.
- ಕಿವಿಯ ಸಹಾಯದಿಂದ ನಾವು ವಿವಿಧ ಶಬ್ದಗಳನ್ನು ಗುರುತಿಸುತ್ತೇವೆ.



ಡಂ! ಎಂದು ಸಿಡಿಯಿತು ಒಂದು ಆನೆ ಪಟಾಕಿ. ಹೆದರಿದ ಟಾಮಿ ಓಡುವಾಗ ಸಿಡಿದ ಒಂದು ತುಂಡು ಟಾಮಿಯ ಕಿವಿಗೆ ತಗುಲಿ ಪೆಟ್ಟಾಯಿತು. ಚಂದನಾ ಸಾಕಿದ ನಾಯಿಯೇ ಟಾಮಿ. ಚಂದನಾ ಟಾಮಿಯನ್ನು ಕೂಡಲೇ ವೈದ್ಯರಲ್ಲಿಗೆ ಕರೆದುಕೊಂಡು ಹೋದಳು. ವೈದ್ಯರು ಚಿಕಿತ್ಸೆ ನೀಡಿ, ಟಾಮಿಯ ಕಿವಿಯನ್ನು ಸರಿಪಡಿಸಿದರು. ಕಿವಿಯ ರಕ್ಷಣೆಯ ಬಗ್ಗೆ ಅಲ್ಲಿದ್ದ ಚಿತ್ರಪಟವನ್ನು ಚಂದನಾಳಿಗೆ ತೋರಿಸಿದರು.

## ಕಿವಿಯ ರಕ್ಷಣೆ :



x



✓



✓

ಮೇಲಿನ ಚಿತ್ರಗಳನ್ನು ನೀನು ಗಮನಿಸು. **ತಪ್ಪು** ಅಥವಾ **ಸರಿ** ಗುರುತುಗಳನ್ನು ಏಕೆ ಹಾಕಿದ್ದಾರೆ? ಹೇಳು.

©KTBS Not to be republished

## ಮೂಗು :



ಚೆನ್ನಾಗಿ ವಾಸನೆ ಬರುವ ಯಾವುದೇ ಒಂದು ಹೂ ಅಥವಾ ಎಲೆಯನ್ನು ಸ್ವಲ್ಪ ಉಜ್ಜಿ ಕೈಯಲ್ಲಿ ಮುಚ್ಚಿಟ್ಟುಕೊ. ಹೆಚ್ಚು ವಾಸನೆ ಕೊಡುವಂತಹ ಸಂಪಿಗೆ ಹೂ, ಮಲ್ಲಿಗೆ ಹೂ, ತುಳಸಿ, ಕರಿಬೇವು, ನೀಲಗಿರಿ ಎಲೆಗಳಾದರೆ ಉತ್ತಮ. ಕೈಯನ್ನು ಸ್ನೇಹಿತರ ಬಳಿ ತಾ. ನಿನ್ನ ಮುಷ್ಟಿಯಲ್ಲಿರುವಂತಹ ವಸ್ತು ಯಾವುದು ಎಂದು ಕೇಳು. ಅವರು ಹೇಗೆ ಗುರುತಿಸಿದರೆಂದು ತಿಳಿದುಕೊ.



**ಓದಿ–ತಿಳಿ**

- ಮೂಗು ವಾಸನೆಯನ್ನು ಗ್ರಹಿಸುತ್ತದೆ.
- ಮೂಗು ಉಸಿರಾಟಕ್ಕೆ ಅಗತ್ಯವಾದ ಅಂಗ.


ವಾಸನೆಯಿಂದಲೇ ಗುರುತಿಸಬಹುದಾದ 10 ವಸ್ತುಗಳನ್ನು ಇಲ್ಲಿ ಬರೆ.

__________, __________, __________, __________, __________,

__________, __________, __________, __________, __________ .

ನೆಗಡಿಯಾದಾಗ ವಾಸನೆಯನ್ನು ಗುರುತಿಸಬಹುದೆ? ಪ್ರಯತ್ನಿಸು.

**ಚಟುವಟಿಕೆ :** ಈ ಕೆಳಗಿನ ಚಿತ್ರಗಳಲ್ಲಿ ಕೊಟ್ಟಿರುವ ಚಟುವಟಿಕೆಗಳು ಸರಿಯೇ (✓) ಅಥವಾ ತಪ್ಪೇ (X) ಎಂದು ಗುರುತಿಸು. ತಪ್ಪಾಗಿದ್ದರೆ ಏಕೆ ಎಂಬುದನ್ನು ಪ್ರತಿಯೊಂದು ಚಿತ್ರದ ಕೆಳಗೆ ಬರೆ.

__________ __________ __________ __________

__________ __________ __________ __________

__________ __________ __________ __________

©KTBS Not to be republished

### ನಾಲಿಗೆ :

ಇಂದು ರಮೇಶನ ಶಾಲೆಯಲ್ಲಿ ವಿಶೇಷ ಬಿಸಿಯೂಟ. ಪಾಯಸ, ನಿಂಬೆ ಹಣ್ಣಿನ ಚಿತ್ರಾನ್ನ, ಮೆಣಸಿನಕಾಯಿ ಬೋಂಡ, ಹಾಗಲಕಾಯಿ ಗೊಜ್ಜು ಇವೆಲ್ಲಾ ಇವೆ. ಇವುಗಳಲ್ಲಿ ನಿನಗೆ ಯಾವುದು ಇಷ್ಟ? ಏಕೆ?

ಇವುಗಳ ರುಚಿಯನ್ನು ಬರೆ

ಪಾಯಸ ____________

ನಿಂಬೆಹಣ್ಣಿನ ಚಿತ್ರಾನ್ನ ____________

ಹಾಗಲಕಾಯಿ ಗೊಜ್ಜು ____________

ಮೆಣಸಿನಕಾಯಿ ಬೋಂಡ ____________


ಇವುಗಳ ರುಚಿ ನಿನಗೆ ಹೇಗೆ ತಿಳಿಯಿತು? ನಾಲಿಗೆಯನ್ನು ಇತರೆ ಯಾವ ಕೆಲಸಗಳಿಗೆ ಉಪಯೋಗಿಸುತ್ತೀಯೆ?



**ಓದಿ-ತಿಳಿ**



- ನಾಲಿಗೆಯು ಆಹಾರ ಪದಾರ್ಥಗಳ ರುಚಿಯನ್ನು ಗ್ರಹಿಸುತ್ತದೆ.
- ಆಹಾರವನ್ನು ಹಲ್ಲುಗಳ ನಡುವೆ ನೂಕಲು ಸಹಾಯ ಮಾಡುತ್ತದೆ.
- ಮಾತನಾಡಲು ಸಹಾಯ ಮಾಡುತ್ತದೆ.



ನೀನು ನಾಲಿಗೆ ಬಳಸದೆ ಮಾತನಾಡಲು ಪ್ರಯತ್ನಿಸು.

©KTBS Not to be republished

**ಚಟುವಟಿಕೆ :** ಈ ಕೆಳಗೆ ಕೆಲವು ವಾಕ್ಯಗಳಿವೆ. ಇವುಗಳನ್ನು ಗಮನವಿಟ್ಟು ಓದು. ತಪ್ಪಾಗಿರುವ ವಾಕ್ಯವನ್ನು ಸರಿಪಡಿಸಿ ಬರೆ.

1. ಪ್ರತಿದಿನ ಹಲ್ಲುಜ್ಜುವಾಗ ನಾಲಗೆಯನ್ನು ಬೆರಳಿನಿಂದ ಉಜ್ಜಿ ಸ್ವಚ್ಛಗೊಳಿಸಬಾರದು. ಇದರಿಂದ ಬಾಯಿ ವಾಸನೆ ಬರುವುದಿಲ್ಲ.

______________________________

______________________________

______________________________

2. ಊಟವಾದ ಮೇಲೆ ಬಾಯಿಯನ್ನು ನೀರಿನಿಂದ ಚೆನ್ನಾಗಿ ತೊಳೆಯಬಾರದು. ಇದರಿಂದ ನಾಲಗೆ ಮತ್ತು ಹಲ್ಲುಗಳು ಸ್ವಚ್ಛವಾಗುತ್ತವೆ.

______________________________

______________________________

______________________________

3. ಅತಿ ಬಿಸಿಯಾದ ಹಾಗೂ ಅತಿ ತಣ್ಣನೆಯ ಆಹಾರ ವಸ್ತುಗಳನ್ನು ಸೇವಿಸಿದರೆ, ನಾಲಗೆ ರುಚಿಯನ್ನು ಹೆಚ್ಚು ಗ್ರಹಿಸುತ್ತದೆ.

______________________________

______________________________

______________________________

4. ಚೂಪಾದ ವಸ್ತುಗಳನ್ನು ಬಾಯಿಯಲ್ಲಿಟ್ಟುಕೊಂಡರೆ ನಾಲಗೆಗೆ ಗಾಯವಾಗುವುದಿಲ್ಲ.

______________________________

______________________________

______________________________

©KTBS Not to be republished

### ಚರ್ಮ :

ಅಮ್ಮಾ ನೋವು! ಎಂದು ತಾರಾ ಕಿರುಚಿದಳು. ಸುತ್ತಲಿದ್ದವರು ಬೆಚ್ಚಿಬಿದ್ದರು. ತಾರಾ ಆಶಾಳತ್ತ ಬೆರಳು ಮಾಡಿ, ಇವಳು ಜೋರಾಗಿ ಚಿವುಟಿದಳು ಎಂದಳು. ಆಶಾಳು ಚಿವುಟಿದ್ದಕ್ಕೆ ತಾರಾಳಿಗೆ ಏಕೆ ನೋವಾಯಿತು?


ಬಡಿಸಿದ ಊಟ ಬಿಸಿಯಾಗಿದೆಯೋ ಇಲ್ಲವೋ ಎಂದು ನೀನು ಹೇಗೆ ತಿಳಿಯುವೆ?

ಕಣ್ಣಿಗೆ ಬಟ್ಟೆ ಕಟ್ಟಿಕೋ, ಕೈಗೆ ಸಿಗುವ ವಸ್ತುಗಳನ್ನು ಮುಟ್ಟಿನೋಡು. ಅದು ಯಾವ ವಸ್ತು ಎಂದು ಗುರುತಿಸಬಲ್ಲೆಯಾ?

ನಿನಗೆ ಗುರುತಿಸಲು ಹೇಗೆ ಸಾಧ್ಯವಾಯಿತು?

**ಓದಿ–ತಿಳಿ**

- ಚರ್ಮವು ನಮ್ಮ ಇಡೀ ದೇಹವನ್ನು ಆವರಿಸಿದೆ.
- ವಸ್ತುಗಳು ಚರ್ಮಕ್ಕೆ ತಗುಲಿದಾಗ ನಮಗೆ ಬಿಸಿ, ತಂಪು, ನುಣುಪು, ಒರಟು ಇವುಗಳ ಅನುಭವವಾಗುತ್ತದೆ. ಅಲ್ಲದೆ ಸ್ಪರ್ಶ ಮತ್ತು ನೋವಿನ ಅನುಭವವೂ ಆಗುತ್ತದೆ.



ನೀನು ಚರ್ಮವನ್ನು ಹೇಗೆ ಕಾಪಾಡಿಕೊಳ್ಳುವೆ?

**ಬಿಟ್ಟ ಸ್ಥಳವನ್ನು ಸರಿಯಾದ ಪದಗಳಿಂದ ತುಂಬಿಸು.**

1. ಸ್ನಾನ ಮಾಡುವುದರಿಂದ ____________ ಸ್ವಚ್ಛವಾಗಿರುತ್ತದೆ.
2. ಹಣ್ಣು ತರಕಾರಿಗಳನ್ನು ತಿನ್ನುವುದರಿಂದ ಚರ್ಮ ____________ವಾಗಿರುತ್ತದೆ.
3. ಚರ್ಮವು ಸ್ವಚ್ಛವಾಗಿಲ್ಲದಿದ್ದರೆ __________ ರೋಗಗಳು ಬರುತ್ತವೆ.
4. ಆಗಾಗ್ಗೆ ಎಣ್ಣೆ ಸವರಿ ಸ್ನಾನ ಮಾಡುವುದರಿಂದ ಚರ್ಮ _________ವಾಗಿರುತ್ತದೆ.
5. ಬ್ಲೇಡು, ಸೂಜಿ ಮುಂತಾದ ಚೂಪಾದ ಪದಾರ್ಥಗಳು ತಗುಲಿದಾಗ ಚರ್ಮಕ್ಕೆ ________ಆಗುತ್ತದೆ.

**ಓದಿ–ತಿಳಿ**

ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ ಇವು ನೋಡಲು, ಕೇಳಲು, ವಾಸನೆ, ರುಚಿ, ಸ್ಪರ್ಶಗಳನ್ನು ಅನುಭವಿಸಲು ಸಹಾಯಕಾರಿ. ಆದ್ದರಿಂದ ಈ ಐದು ಅಂಗಗಳಿಗೆ **ಪಂಚೇಂದ್ರಿಯಗಳು** ಅಥವಾ **ಜ್ಞಾನೇಂದ್ರಿಯಗಳು** ಎನ್ನುತ್ತಾರೆ.

©KTBS Not to be republished

**ಚಟುವಟಿಕೆ :** ಚಿತ್ರಗಳನ್ನು ಗಮನಿಸು. ಅವುಗಳಿಗೆ ಸೂಕ್ತವಾದ ಜ್ಞಾನೇಂದ್ರಿಯಗಳನ್ನು ಹೊಂದಿಸು.



ನಿನ್ನ ನೋಟ್‌ಪುಸ್ತಕದಲ್ಲಿ ಜ್ಞಾನೇಂದ್ರಿಯಗಳ ಸರಳ ಗೆರೆಚಿತ್ರಗಳನ್ನು ರಚಿಸು.

ಆಸ್ಪತ್ರೆಗೆ ಹೋದಾಗ ಅಲ್ಲಿ ಜ್ಞಾನೇಂದ್ರಿಯಗಳ ಬಗ್ಗೆ ಪಟಗಳಿದ್ದರೆ ಅವುಗಳನ್ನು ಓದು.

ಕೆಲವರಿಗೆ ಕಣ್ಣು, ಕಿವಿ ಸರಿಯಾಗಿ ಕೆಲಸ ಮಾಡುವುದಿಲ್ಲ. ಅಂತಹವರಿಗೆ ವಿಶೇಷ ಸೌಲಭ್ಯಗಳು ಬೇಕಾಗಬಹುದು. ಅವರನ್ನು ಅಣಕಿಸಬೇಡ. ಅವರಿಗೆ ಸಹಾಯ ಮಾಡುವ ಮನೋಭಾವ ಬೆಳಸಿಕೊ.



©KTBS Not to be republished

# ಪಾಠ – 11

# ಹಲ್ಲಿನ ಮಹಿಮೆ

**ಈ ಪಾಠವನ್ನು ಕಲಿತ ನಂತರ ನೀನು,**

- ಹಲ್ಲು, ಹಲ್ಲುಗಳ ವಿಧಗಳು, ಅವುಗಳ ಕಾರ್ಯಗಳ ಬಗ್ಗೆ ತಿಳಿಯುವೆ ಹಾಗೂ ಅವುಗಳ ಸ್ವಚ್ಛತೆಯ ಅಭ್ಯಾಸಗಳನ್ನು ರೂಢಿಸಿಕೊಳ್ಳುವೆ.

ಮೊಲ ಮತ್ತು ನಾಯಿ ಗೆಳೆಯರು. ಅವು ಒಂದು ದಿನ ಕೊಳದ ಬಳಿ ಹೋಗುತ್ತಿದ್ದವು.

ಮೊಲ : ಆಹಾ! ಹುಲ್ಲು ಸಾಕಷ್ಟು ಬೆಳೆದಿದೆ. ನಾನು ಬೇಗ ಬೇಗನೆ ತಿನ್ನುವೆ.

ನಾಯಿ : ಏಯ್! ಅಲ್ಲಿ ನೋಡು. ಮಾಂಸದ ತುಂಡೊಂದು ಬಿದ್ದಿದೆ. ಅದನ್ನು ಕಚ್ಚಿ ತುಂಡರಿಸಿ ತಿನ್ನುವೆ.

ನಾಯಿಯು ಮಾಂಸವನ್ನು ತುಂಡರಿಸುವ ರೀತಿ ನೋಡಿ ಮೊಲಕ್ಕೆ ಆಶ್ಚರ್ಯವಾಯಿತು.

ಮೊಲ : ಅಯ್ಯಾ ಗೆಳೆಯ, ಅದೆಷ್ಟು ಬೇಗ ಮಾಂಸವನ್ನು ತುಂಡರಿಸಿಬಿಟ್ಟೆ?

ನಾಯಿ : ನನ್ನ ಈ ಹಲ್ಲುಗಳನ್ನು ನೋಡಿದೆಯಾ? ಎಷ್ಟು ಮೊನಚಾಗಿವೆ. ಆದರೆ ನಿನ್ನ ಹಾಗೆ ನನಗೆ ಹುಲ್ಲು ತಿನ್ನಲು ಆಗುವುದಿಲ್ಲ.

ಮೊಲ : (ನಗುತ್ತಾ) ನನ್ನ ಬಾಚಿ ಹಲ್ಲುಗಳನ್ನು ನೋಡು. ಇವು ಹುಲ್ಲನ್ನು ಚೆನ್ನಾಗಿ ಕತ್ತರಿಸುತ್ತವೆ. ಗೊತ್ತೆ?

ನಾಯಿ : ನಿಜ ನನ್ನ ಕೋರೆ ಹಲ್ಲುಗಳು ಮಾಂಸವನ್ನು ತುಂಡರಿಸಿದಂತೆ!


ಮೊಲ ಮತ್ತು ನಾಯಿಯ ಸಂಭಾಷಣೆಯನ್ನು ಕೇಳಿದೆಯಲ್ಲವೇ? ಈಗ ಕನ್ನಡಿಯ ಮುಂದೆ ನಿಲ್ಲು. ನಿನ್ನ ಹಲ್ಲುಗಳನ್ನು ಗಮನಿಸು.

ನಿನ್ನ ಸ್ನೇಹಿತನ ಹಲ್ಲುಗಳನ್ನು ನೋಡು. ಎಷ್ಟು ಹಲ್ಲುಗಳಿವೆ ಎಣಿಸು, ಎಲ್ಲಾ ಹಲ್ಲುಗಳು ಒಂದೇ ರೀತಿ ಇವೆಯೇ? ಮುಂಭಾಗದಲ್ಲಿರುವ ಹಲ್ಲುಗಳನ್ನು ಗಮನಿಸು.

©KTBS Not to be republished

ಇವು ಅಗಲವಾಗಿವೆ. ಇವಕ್ಕೆ ಹರಿತವಾದ ಅಂಚುಗಳಿವೆ. ಇವೇ ಬಾಚಿ ಹಲ್ಲುಗಳು. ಇಂತಹ ಹಲ್ಲುಗಳು ನಿನಗೆ ಎಷ್ಟಿವೆ?

ನಿನ್ನ ಸ್ನೇಹಿತರು ಹಣ್ಣು ತರಕಾರಿಗಳನ್ನು ತಿನ್ನುವಾಗ ಈ ಹಲ್ಲುಗಳ ಕೆಲಸವನ್ನು ಗಮನಿಸು.



ಬಾಚಿ ಹಲ್ಲುಗಳು ಆಹಾರವನ್ನು ಕತ್ತರಿಸಲು ಸಹಾಯಕವಾಗಿವೆ.



ಬಾಚಿ ಹಲ್ಲುಗಳ ಪಕ್ಕದಲ್ಲಿರುವ ಹಲ್ಲುಗಳನ್ನು ನಿನ್ನ ಸ್ನೇಹಿತರ ಬಾಯಲ್ಲಿ ಗಮನಿಸು. ಇವು ಸ್ವಲ್ಪ ಉದ್ದವಾಗಿವೆ ಹಾಗೂ ಮೊನಚಾಗಿವೆ ಅಲ್ಲವೆ? ಇವೇ ಕೋರೆ ಹಲ್ಲುಗಳು. ಕಬ್ಬು ಮುಂತಾದ ಗಟ್ಟಿಯಾದ ಪದಾರ್ಥಗಳನ್ನು ನಿನ್ನ ಸ್ನೇಹಿತರು ತಿನ್ನುವಾಗ ಈ ಹಲ್ಲುಗಳ ಕೆಲಸವನ್ನು ಗಮನಿಸು.

ಕೋರೆ ಹಲ್ಲುಗಳು ಆಹಾರವನ್ನು ಸಿಗಿಯಲು ಸಹಾಯಕವಾಗಿವೆ.

ನಾಯಿ, ಹುಲಿ ಮುಂತಾದ ಮಾಂಸಾಹಾರಿ ಪ್ರಾಣಿಗಳಲ್ಲಿ ಕೋರೆ ಹಲ್ಲುಗಳು ಹೆಚ್ಚು ಉದ್ದವಾಗಿ ಮೊನಚಾಗಿ ಇರುತ್ತವೆ. ಏಕೆ? ಯೋಚಿಸು.



ಒಂದು ಕೊಬ್ಬರಿ ಚೂರು ಅಗಿಯಲು ಪ್ರಾರಂಭಿಸು. ಬಾಯಿಯ ಯಾವ ಭಾಗದಲ್ಲಿ ಅಗಿಯುವೆ ಹೇಳು. ದವಡೆಯ ಭಾಗದಲ್ಲಿರುವ ಹಲ್ಲುಗಳೇ ದವಡೆ ಹಲ್ಲುಗಳು. ನಿನ್ನ ಸ್ನೇಹಿತರ ದವಡೆಯಲ್ಲಿರುವ ದೊಡ್ಡ ಹಲ್ಲುಗಳನ್ನು ಗಮನಿಸು. ಅವು ದೊಡ್ಡದಾಗಿವೆ ಮತ್ತು ಚಪ್ಪಟೆಯಾಗಿವೆ.

ದವಡೆ ಹಲ್ಲುಗಳು ಆಹಾರವನ್ನು ಅರೆಯಲು ಸಹಾಯ ಮಾಡುತ್ತವೆ.

©KTBS Not to be republished

**ಚಟುವಟಿಕೆ :** ಹಲ್ಲುಗಳು ಇಲ್ಲದವರ ಬಾಯಿಯನ್ನು ಗಮನಿಸು. ಇವರು ಯಾವ ರೀತಿಯ ಪದಾರ್ಥಗಳನ್ನು ತಿನ್ನುತ್ತಾರೆ? ಹೇಗೆ ತಿನ್ನುತ್ತಾರೆ? ನೋಡು.

**ಮಾಡಿ–ನೋಡು**

ಶಿಕ್ಷಕರ ಸಹಾಯದಿಂದ ಅಥವಾ ಗೆಳೆಯರೊಡನೆ ಸೇರಿ ಮಣ್ಣು ಅಥವಾ ಬೆಂಡಿನಲ್ಲಿ ಹಲ್ಲುಗಳ ಮಾದರಿ ತಯಾರಿಸು. ನಂತರ ಅವುಗಳ ವಿಧಗಳನ್ನು ಹೆಸರಿಸು.

ಕರೀಂ 7 ತಿಂಗಳ ಮಗು. ಈಗ ಹಲ್ಲುಗಳು ಹುಟ್ಟುತ್ತಾ ಇವೆ. ಇವು ಹಾಲು ಹಲ್ಲುಗಳು. ಜಾನ್‌ಗೆ ಈಗ 8 ವರ್ಷ. ಅವನಿಗೆ ಒಟ್ಟು 20 ಹಲ್ಲುಗಳಿವೆ. ಅವನ ಹಲ್ಲುಗಳು ಉದುರಲು ಪ್ರಾರಂಭವಾಗಿವೆ. ಹಾಗೆಯೇ ಆ ಜಾಗದಲ್ಲಿ ಹೊಸ ಹಲ್ಲುಗಳು ಮೂಡುತ್ತಿವೆ. ಸುರೇಶನಿಗೆ ಈಗ 35 ವರ್ಷ. ಅವನಿಗೆ ಒಟ್ಟು 32 ಹಲ್ಲುಗಳಿವೆ. ರಂಗಜ್ಜಿಗೆ ಈಗ 70 ವರ್ಷ. ಅವಳ ಹಲವು ಹಲ್ಲುಗಳು ಉದುರಿವೆ. ರಂಗಜ್ಜಿಗೆ ಬಿದ್ದ ಹಲ್ಲುಗಳು ಮತ್ತೆ ಹುಟ್ಟುವುದಿಲ್ಲ.

**ಚಟುವಟಿಕೆ :** ನಿನ್ನ ಹಲ್ಲುಗಳನ್ನು ಎಣಿಸಿ ಬರೆ. ☐

ನಿನ್ನ ಉದುರಿರುವ ಹಲ್ಲುಗಳನ್ನು ಎಣಿಸಿ ಬರೆ. ☐

ನಿನಗಿರುವ ಒಟ್ಟು ಹಲ್ಲುಗಳು ☐



**ಓದಿ–ತಿಳಿ**

1 ವರ್ಷದಿಂದ 6 ವರ್ಷದ ವಯಸ್ಸಿನ ಮಕ್ಕಳಲ್ಲಿ ಕಂಡುಬರುವ ಹಲ್ಲುಗಳು ಹಾಲು ಹಲ್ಲುಗಳು. ಸುಮಾರು 7–8 ವರ್ಷಗಳಿರುವಾಗ ಹಾಲು ಹಲ್ಲುಗಳು ಉದುರಲು ಆರಂಭಿಸುತ್ತವೆ. ಆ ಜಾಗದಲ್ಲಿ ಹೊಸ ಹಲ್ಲುಗಳು ಮತ್ತೆ ಹುಟ್ಟುತ್ತವೆ. ಇವೇ ಶಾಶ್ವತ ಹಲ್ಲುಗಳು. ಶಾಶ್ವತ ಹಲ್ಲುಗಳು ಬಿದ್ದರೆ ಪುನಃ ಹುಟ್ಟುವುದಿಲ್ಲ. ಹೀಗಾಗಿ ಶಾಶ್ವತ ಹಲ್ಲುಗಳನ್ನು ಚೆನ್ನಾಗಿ ಕಾಪಾಡಿಕೊಳ್ಳಬೇಕು. ದೊಡ್ಡವರಿಗೆ (ವಯಸ್ಕರಿಗೆ) ಒಟ್ಟು ಮೂವತ್ತೆರಡು ಹಲ್ಲುಗಳಿರುತ್ತವೆ. ಇವುಗಳಲ್ಲಿ 8 ಬಾಚಿಹಲ್ಲು, 4 ಕೋರೆ ಹಲ್ಲು ಮತ್ತು 20 ದವಡೆ ಹಲ್ಲುಗಳಿರುತ್ತವೆ. ಸಣ್ಣ ಮಕ್ಕಳಲ್ಲಿ ಒಟ್ಟು 20 ಹಾಲು ಹಲ್ಲುಗಳಿರುತ್ತವೆ.

©KTBS Not to be republished

ಕಾಂತಿ 3ನೇ ತರಗತಿಯ ಹುಡುಗಿ. ಸಿಹಿಯೆಂದರೆ ಅವಳಿಗೆ ಬಹಳ ಪ್ರೀತಿ. ದಿನವೂ ಚಾಕಲೇಟ್ ಮತ್ತು ಇತರ ಸಿಹಿ ಪದಾರ್ಥಗಳನ್ನು ತಿನ್ನುತ್ತಿದ್ದಳು. ಇವಳು ಸೋಮಾರಿ ಕೂಡ. ಸರಿಯಾಗಿ ಹಲ್ಲುಜ್ಜುತ್ತಿರಲಿಲ್ಲ. ಸಿಹಿತಿಂದ ನಂತರ ಬಾಯಿ ತೊಳೆಯುತ್ತಿರಲಿಲ್ಲ. ಕ್ರಮೇಣ ಹಲ್ಲಿನ ಸಂದಿಗಳಲ್ಲಿ ಆಹಾರ ಸಿಕ್ಕಿಕೊಂಡು, ಬಾಯಿಂದ ಕೆಟ್ಟವಾಸನೆ ಬರಲು ಶುರುವಾಯಿತು. ಹಲ್ಲುಗಳು ಹುಳುಕಾದವು. ಹಲ್ಲುಗಳಲ್ಲಿ ಅಸಾಧ್ಯ ನೋವು, ವಸಡುಗಳಲ್ಲಿ ರಕ್ತ, ಕೀವು ಕಾಣಿಸಿಕೊಂಡವು. ಅವಳ ತಂದೆ ಅವಳನ್ನು ದಂತ ವೈದ್ಯರಲ್ಲಿ ಕರೆದುಕೊಂಡು ಹೋದರು. ದಂತ ವೈದ್ಯರು ಕಾಂತಿಯ ಹಲ್ಲುಗಳನ್ನು ಪರೀಕ್ಷಿಸಿದರು. ನಂತರ ಕಾಂತಿಗೆ ಹೇಳಿದರು, "ಕಾಂತಿ ನೀನು ದಿನವೂ ಊಟದ ನಂತರ ಚೆನ್ನಾಗಿ ಹಲ್ಲುಜ್ಜುತ್ತಿಲ್ಲ. ಹಲ್ಲಿನ ಸಂದಿಗಳಲ್ಲಿ ಆಹಾರ ಪದಾರ್ಥಗಳು ಸೇರಿಬಿಟ್ಟಿವೆ. ಸಿಹಿ ತಿಂದ ಕೂಡಲೇ ಬಾಯಿ ತೊಳೆಯುತ್ತಿಲ್ಲ. ಹೀಗಾಗಿ ನಿನ್ನ ಮೂರು ಹಲ್ಲುಗಳು ಹುಳುಕಾಗಿವೆ. ಬಾಯಿಯಿಂದಲೂ ದುರ್ಗಂಧ ಬರುತ್ತಿದೆ. ನಿನ್ನ ಎರಡು ಹಲ್ಲುಗಳನ್ನು ಕೀಳಲೇಬೇಕು. ಇನ್ನೊಂದಕ್ಕೆ ಸೂಕ್ತ ಚಿಕಿತ್ಸೆ ಮಾಡುವೆ" ಎಂದರು.

ಕಾಂತಿ ಏನು ಮಾಡಿದ್ದರೆ ಅವಳ ಎರಡು ಹಲ್ಲುಗಳು ಉಳಿಯುತ್ತಿತ್ತು?

______________________________

______________________________

______________________________

______________________________

- ಹಲ್ಲುಗಳು ಮುಖದ ಸೌಂದರ್ಯವನ್ನು ಹೆಚ್ಚಿಸುತ್ತವೆ.
- ಸ್ಪಷ್ಟವಾಗಿ ಉಚ್ಚರಿಸಲು ಹಲ್ಲುಗಳು ಸಹಕರಿಸುತ್ತವೆ.

©KTBS Not to be republished

**ಚಟುವಟಿಕೆ :** ಈ ಕೆಳಗಿನ ಚಟುವಟಿಕೆಗಳನ್ನು ಗಮನಿಸಿ, ಸರಿಯಾದವುಗಳಿಗೆ (✓) ಗುರುತು, ತಪ್ಪಾದವುಗಳಿಗೆ (X) ಗುರುತು ಹಾಕು.

















©KTBS Not to be republished


## ಓದಿ–ತಿಳಿ

- ಆಗಾಗ ಹಸಿ ಕ್ಯಾರೆಟ್, ಕಬ್ಬು, ಕೊಬ್ಬರಿ ಮುಂತಾದ ಗಟ್ಟಿ ಪದಾರ್ಥಗಳನ್ನು ಅಗಿ. ಹಲ್ಲು ಮತ್ತು ವಸಡುಗಳಿಗೆ ವ್ಯಾಯಾಮವಾಗಿ ಹಲ್ಲುಗಳು ಆರೋಗ್ಯವಾಗಿರುತ್ತವೆ. ಹಾಲು ಕುಡಿಯುವುದರಿಂದಲೂ ಹಲ್ಲುಗಳು ಗಟ್ಟಿಯಾಗಿರುತ್ತವೆ.
- ಹಲ್ಲಿನ ಯಾವುದೇ ತೊಂದರೆ ಕಾಣಿಸಿಕೊಂಡರೆ ದಂತವೈದ್ಯರ ಬಳಿಗೆ ಹೋಗು.
- ನಿಮ್ಮ ಊರಿನಲ್ಲಿ ದಂತವೈದ್ಯರಿದ್ದಲ್ಲಿ, ಅವರಿಂದ ಹಲ್ಲಿನ ಸ್ವಚ್ಛತೆಯ ಬಗ್ಗೆ ಮಾಹಿತಿ ಪಡೆದುಕೊ.

**ಚಟುವಟಿಕೆ :** ಗೆಳೆಯರೊಡನೆ ಸೇರಿ ಹಲ್ಲಿನ ಸ್ವಚ್ಛತೆಯ ಬಗ್ಗೆ ಪಟವನ್ನು ತಯಾರಿಸಿ ನಿನ್ನ ತರಗತಿಯಲ್ಲಿ ತೂಗು ಹಾಕು.

ನಿನ್ನ ತರಗತಿಯಲ್ಲಿರುವ 10 ಗೆಳೆಯರ ಹಲ್ಲಿನ ಸ್ವಚ್ಛತೆಯನ್ನು ಒಂದು ವಾರ ದಿನವೂ ಗಮನಿಸು. ಯಾರ ಹಲ್ಲು ಸ್ವಚ್ಛವಾಗಿಲ್ಲವೋ ಅವರಿಗೆ ಹಲ್ಲಿನ ಸ್ವಚ್ಛತೆಯ ಅವಶ್ಯಕತೆಯನ್ನು ತಿಳಿಸಿ ಹೇಳು.

## ಹಾಡಿ–ನಲಿ



ಹಲ್ಲೆ ಹಲ್ಲೆ ಬಾಚಿಹಲ್ಲೆ
ಹಣ್ಣು ತರಕಾರಿ ಕಚ್ಚಲು ಬಲ್ಲೆ



ಮೊನಚಾಗಿರುವ ಕೋರೆ ಹಲ್ಲೆ
ಸಿಗಿಯುವೆ ನೀನು ಕಬ್ಬಿನ ಜಲ್ಲೆ



ಇವುಗಳ ಹಿಂದೆ ದವಡೆ ಹಲ್ಲೆ
ಆಹಾರವನು ಅರೆಯುವ ಕಲ್ಲೆ

ನಿಮ್ಮೆಲ್ಲರ ಸಹಕಾರವ ನಾ ಬಲ್ಲೆ
ನೀವಿಲ್ಲದೆ ಆಹಾರವ ನಾ ಒಲ್ಲೆ.

©KTBS Not to be republished

## ಪಾಠ – 12

# ಅಪಾಯ–ಅಪಘಾತ

**ಈ ಪಾಠವನ್ನು ಕಲಿತ ನಂತರ ನೀನು,**

- ಮನೆ ಮತ್ತು ಹೊರಗಿನ ಅಪಘಾತದ ಸನ್ನಿವೇಶಗಳನ್ನು ಗುರುತಿಸುವೆ.

ಇಲ್ಲಿ ಕೊಟ್ಟಿರುವ ಚಿತ್ರಗಳನ್ನು ಗಮನಿಸು. ಪ್ರತಿಯೊಂದು ಚಿತ್ರದಲ್ಲಿ ಏನಾಗುತ್ತಿದೆ ಬರೆ. ಏಕೆ ಹೀಗಾಯಿತು? ಯೋಚಿಸು.









©KTBS Not to be republished













© TTBS Not to be republished





ಇವೆಲ್ಲವೂ ಅಪಘಾತದ ಸನ್ನಿವೇಶಗಳು. ಕೆಲವು ಮನೆಯ ಒಳಗೆ ಆಗುತ್ತವೆ. ಇನ್ನು ಕೆಲವು ಮನೆಯಿಂದ ಆಚೆ ಹೊರಗೆ ನಡೆಯುತ್ತವೆ. ಇವು ಅಪಾಯಕಾರಿ.

**ಚಟುವಟಿಕೆ :**

- ನೀನಾಗಲೀ, ನಿನ್ನ ಗೆಳೆಯರಾಗಲೀ ಇಂತಹ ಅಪಾಯಕಾರಿ ಸನ್ನಿವೇಶಗಳಲ್ಲಿ ಸಿಕ್ಕಿಹಾಕಿಕೊಂಡಿದ್ದೀರಾ? ನಿನ್ನ ಅನುಭವಗಳನ್ನು ಗೆಳೆಯರೊಂದಿಗೆ ಚರ್ಚಿಸು.
- ಪಟಾಕಿಯಿಂದ ಆದ ಅಪಘಾತಗಳನ್ನು ದಿನಪತ್ರಿಕೆಗಳಿಂದ ಸಂಗ್ರಹಿಸಿ ಶಾಲೆಯ ಸೂಚನಾ ಫಲಕದಲ್ಲಿ ಪ್ರದರ್ಶಿಸು.

**ಓದಿ–ತಿಳಿ**

- ಚಲಿಸುತ್ತಿರುವ ವಾಹನವನ್ನು ಹತ್ತಬೇಡ.
- ಸರತಿ ಸಾಲಿನಲ್ಲಿ ನಿಂತು ಬಸ್ಸು ಹತ್ತು.
- ಪ್ರಯಾಣ ಮಾಡುತ್ತಿರುವಾಗ ಕಿಟಕಿಯಿಂದ ತಲೆ, ಕೈಗಳನ್ನು ಹೊರ ಚಾಚಬೇಡ.
- ರಸ್ತೆಯಲ್ಲಿ ಆಡಬೇಡ.
- ಬಾವಿ, ಕೆರೆ, ಕೊಳ, ನದಿ ಸಮೀಪ ಹೋಗುವಾಗ ಹಿರಿಯರೊಂದಿಗಿರು.

ನಿನಗೆ ಮತ್ತು ನಿನ್ನ ಗೆಳೆಯರಿಗಾದ ಅನುಭವಗಳಿಂದ ಕಲಿತ ಎಚ್ಚರಿಕೆ ಕ್ರಮಗಳನ್ನು ಪಟ್ಟಿ ಮಾಡು.

ಎಚ್ಚರಿಕೆಯಿಂದಿದ್ದರೆ ಅಪಘಾತಗಳನ್ನು ತಪ್ಪಿಸಬಹುದು.

©KTBS Not to be republished


**ಚಟುವಟಿಕೆ :** ಈ ಕೆಳಗಿನ ಸನ್ನಿವೇಶಗಳಲ್ಲಿ ಸರಿಯಾಗಿರುವುದಕ್ಕೆ (✓) ಗುರುತು ಹಾಕು. ತಪ್ಪಾಗಿರುವುದಕ್ಕೆ (X) ಗುರುತು ಹಾಕು. ಈ ಸನ್ನಿವೇಶಗಳನ್ನು ಸ್ನೇಹಿತರೊಡನೆ ಚರ್ಚಿಸು.

















©KTBS Not to be republished

ಆಡುತ್ತಿರುವಳು ಜೋಕಾಲಿ
ತೂಗುತ್ತಿರುವಳು ವೈಶಾಲಿ
ನೂಕಿದಳಪ್ಪ ಜೋರಲ್ಲಿ
ಶಾಲಿನಿ ಬಿದ್ದಳು ನೆಲದಲ್ಲಿ.

ಹತ್ತುವ ಇಳಿಯುವ ಮರಕೋತಿ
ಆಡುತಲಿದ್ದರು ಅತಿಯಾಗಿ
ಜಾರುತ ಮರವ ಇಳಿದು ಹತ್ತಿ
ಉರುಳಿಯೇ ಬಿದ್ದರು ಜೊತೆಯಾಗಿ.

ಬಿದ್ದಿತು ಕಾಲಿಗೆ ಅತಿ ಪೆಟ್ಟು
ಹಾಕಿದರಲ್ಲಿ ಔಷಧಿ ಕಟ್ಟು
ಆಡುವ ಸಮಯದಿ ಎಚ್ಚರ ಇರಲಿ
ಆಟದ ಸಂತಸ ಮಾಸದೆ ಇರಲಿ

ಹಚ್ಚುತ ಗೆಳೆಯರು ಪಟಾಕಿ
ಹಾರಿಸಿ ಮಾತಿನ ಚಟಾಕಿ
ಡಬ್ಬವ ಮುಚ್ಚಿ ಬೆಂಕಿಯು ತಾಕಿ
ಸಿಡಿಯಿತು ಡಂ ಡಂ ಪಟಾಕಿ.

ಡಂ ಡಂ ಸ್ಯುಂ ಸ್ಯುಂ ಪಟಾಕಿ
ನುಗ್ಗಿತು ನೆಲದಲೆ ಸುತ್ತಾಕಿ
ಹಾರುತ ಬೀಳುತ ತಪ್ಪಿಸಿ ಓಡಲು
ಕಣ್ಣಿಗೆ ಬಡಿಯಿತು ಪಟಾಕಿ.



ಸಿಡಿಯಿತು ಅಯ್ಯೋ ಪಟಾಕಿ
ವೈದ್ಯರು ಕಣ್ಣಿಗೆ ಕಟ್ಟನು ಹಾಕಿ
ನೋಡಲು ಆಗದು, ಆಡಲು ಆಗದು
ಎಚ್ಚರವಿದ್ದರೆ ತೊಂದರೆ ಆಗದು.

©KTBS Not to be republished


# ಪಾಠ – 13

# ಸೌಲಭ್ಯಗಳು ನಮಗಾಗಿ

**ಈ ಪಾಠವನ್ನು ಕಲಿತ ನಂತರ ನೀನು,**

- ಸಾರ್ವಜನಿಕ ಸೌಲಭ್ಯಗಳ ಅಗತ್ಯವನ್ನು ಗುರುತಿಸುವೆ ಮತ್ತು ಅವುಗಳ ರಕ್ಷಣೆ ಮಾಡುವೆ.

ಅಂದು ಶಾಲಾ ಮಕ್ಕಳು ಊರಿನ ವಿವಿಧ ಸ್ಥಳಗಳಿಗೆ ಭೇಟಿ ನೀಡುವ ಕಾರ್ಯಕ್ರಮ. ಮಕ್ಕಳಿಗೆಲ್ಲಾ ಸಡಗರ. ಹೇಳಿದ ಸಮಯಕ್ಕಿಂತ ಮೊದಲೇ ಮಕ್ಕಳೆಲ್ಲ ಶಾಲೆಯಲ್ಲಿ ಸೇರಿದರು. ಸಮಯಕ್ಕೆ ಸರಿಯಾಗಿ ಬಸ್ಸು ಬಂತು. ಮಕ್ಕಳೆಲ್ಲಾ ಸರತಿ ಸಾಲಿನಲ್ಲಿ ಹೋಗಿ ಬಸ್ಸಿನಲ್ಲಿ ಕುಳಿತರು. ಬಸ್ಸು ಹೊರಟಿತು. ಮೊದಲು ಬಸ್ಸು ಗ್ರಂಥಾಲಯದ ಬಳಿ ನಿಂತಿತು.




ಮಕ್ಕಳೆಲ್ಲ ಅಲ್ಲಿ ಬರೆದ ಫಲಕಗಳನ್ನು ಗಮನವಿಟ್ಟು ಓದಿದರು. ಗ್ರಂಥಾಲಯವನ್ನು ಶಬ್ದ ಮಾಡದೇ ಸುತ್ತಿದರು. ತಮಗಿಷ್ಟವಾದ ಪುಸ್ತಕಗಳನ್ನು ಸ್ವಲ್ಪ ಸಮಯ ಓದಿದರು. ನಂತರ ಪುಸ್ತಕಗಳನ್ನು ಅವುಗಳ ಜಾಗದಲ್ಲಿಟ್ಟು ಹೊರಬಂದರು. ಬಸ್ಸಿನಲ್ಲಿ ಕುಳಿತರು.

ಚಿತ್ರದಲ್ಲಿರುವ ಗ್ರಂಥಾಲಯದ ಫಲಕಗಳನ್ನು ಓದು. ಹೀಗೇಕೆ ಬರೆದಿದ್ದಾರೆ?

©KTBS Not to be republished


ನೀನು ನಿನ್ನ ಊರಿನ ಗ್ರಂಥಾಲಯವನ್ನು ನೋಡಿದ್ದೀಯಾ?
ಅಲ್ಲಿ ನೀನು ಯಾವ ನಿಯಮಗಳನ್ನು ಪಾಲಿಸುವೆ? ಬರೆ.

________________________________________

________________________________________

**ಗ್ರಂಥಾಲಯಕ್ಕೆ ಭೇಟಿ ನೀಡುವುದನ್ನು ಅಭ್ಯಾಸ ಮಾಡಿಕೊ.**

ಬಸ್ಸು ಮುಂದೆ ನಿಲ್ದಾಣದಲ್ಲಿ ನಿಂತಿತು. ಮಕ್ಕಳೆಲ್ಲಾ ಇಳಿದರು. ನಿಲ್ದಾಣದಲ್ಲಿ ಸುತ್ತಾಡಿದರು.




ಮಕ್ಕಳು ನಿಲ್ದಾಣದ ಸ್ವಚ್ಛತೆಗೆ ಹೇಗೆ ಸಹಕರಿಸಿದರು ?

________________________________________

________________________________________


________________________________________

________________________________________

© KTBS Not to be republished

ನಿನ್ನ ಊರಿನ ಬಸ್ಸು ನಿಲ್ದಾಣ ಹೇಗಿದೆ?

ಮಕ್ಕಳೆಲ್ಲರೂ ಬಸ್ಸನ್ನು ಹತ್ತಿ ಆಸ್ಪತ್ರೆಯ ಬಳಿ ಇಳಿದರು.





ಮಕ್ಕಳು ಆಸ್ಪತ್ರೆಯ ವಿವಿಧ ಕೆಲಸಗಳನ್ನು ನೋಡಿದರು. ಎಷ್ಟು ಸ್ವಚ್ಛವಾಗಿದೆ ಎಂದುಕೊಳ್ಳುತ್ತಾ ಬಸ್ಸು ಹತ್ತಿದರು.

ನಿಮ್ಮ ಊರಿನ ಆಸ್ಪತ್ರೆಗೆ ಭೇಟಿಕೊಡು. ಅದು ಸ್ವಚ್ಛವಾಗಿದೆಯೆ? ಗಮನಿಸು. ನಿನ್ನ ಗಮನಕ್ಕೆ ಬಂದ ಅಂಶಗಳನ್ನು ಇಲ್ಲಿ ಬರೆ.

©KTBS Not to be republished

ಉದ್ಯಾನವನದ ಬಳಿ ಬಸ್ಸು ನಿಂತಿತು. ಮಕ್ಕಳಿಗೆಲ್ಲ ಖುಷಿಯಾಯಿತು.

ಇದು ನಿಮ್ಮ ಊರಿನ ಉದ್ಯಾನವನ ಸ್ವಚ್ಛವಾಗಿಡಿ.




ಸಂಜೆಯವರೆಗೆ ಆಟವಾಡಿ ಸುಸ್ತಾದ ಮಕ್ಕಳು ಬಸ್ಸಿನಲ್ಲಿ ಕುಳಿತು ಶಾಲೆಗೆ ಮರಳಿದರು. ನೀನು ನೋಡಿದ ಉದ್ಯಾನವನ ಹೇಗಿದೆ? ಎರಡು ಸಾಲುಗಳಲ್ಲಿ ಬರೆ.

________________________________________

________________________________________

ಮಾರನೆಯ ದಿನ ಶಿಕ್ಷಕರು ಮಕ್ಕಳಿಗೆ ಹೊರ ಸಂಚಾರ ಕುರಿತು ಕೆಲವೊಂದು ಪ್ರಶ್ನೆಗಳನ್ನು ಕೇಳಿದರು. ಅವರೊಂದಿಗೆ ನೀನೂ ಹೋಗಿದ್ದೆಯಲ್ಲವೆ? ಈ ಪ್ರಶ್ನೆಗಳಿಗೆ ಉತ್ತರಿಸು.

1. ನೀನು ನೋಡಿದ ಸ್ಥಳಗಳ ಹೆಸರುಗಳನ್ನು ಬರೆ.

________________________________________

________________________________________

© KTBS Not to be republished

2. ನಿನಗಿಷ್ಟವಾದ ಸ್ಥಳ ಯಾವುದು? ಏಕೆ?

________________________________________

________________________________________

3. ಗ್ರಂಥಾಲಯ, ಆಸ್ಪತ್ರೆ, ಬಸ್ಸು ನಿಲ್ದಾಣ, ಉದ್ಯಾನವನ ಇವೆಲ್ಲವೂ ಸೌಲಭ್ಯಗಳು. ಇವುಗಳನ್ನು ಯಾರು ಯಾರು ಉಪಯೋಗಿಸುತ್ತಾರೆ?

________________________________________

________________________________________

4. ನಾವೆಲ್ಲರೂ ಉಪಯೋಗಿಸುವ ಸೌಲಭ್ಯಗಳೇ ಸಾರ್ವಜನಿಕ ಸೌಲಭ್ಯಗಳು. ಸಾರ್ವಜನಿಕ ಸೌಲಭ್ಯಗಳು ಏಕೆ ಬೇಕು?

________________________________________


________________________________________

5. ಸಾರ್ವಜನಿಕ ಸ್ಥಳಗಳನ್ನು ಯಾರು ರಕ್ಷಿಸುತ್ತಾರೆ? ತಿಳಿದು ಬರೆ.

________________________________________

________________________________________


ಈ ಚಿತ್ರದಲ್ಲಿ ಕಾಣುವ ಸಾರ್ವಜನಿಕ ಸೌಲಭ್ಯಗಳ ಹೆಸರು ಮತ್ತು ಪ್ರತಿಯೊಂದು ಸೌಲಭ್ಯಗಳ ಅಗತ್ಯವನ್ನು ಅದರ ಪಕ್ಕದಲ್ಲಿ ಬರೆದು ತಿಳಿಸು.



______________________________

______________________________

______________________________




______________________________


______________________________


______________________________


©KTBS Not to be republished












Not to be republished ©KTBS














©KTBS Not to be republished

ಕೆಳಗಿನ ಚಿತ್ರಗಳನ್ನು ಗಮನಿಸು. ಈ ಸಂದರ್ಭಗಳಲ್ಲಿ ನೀನೇನು ಮಾಡುವೆ ಬರೆ.












©KTBS Not to be republished

ನಿನ್ನ ಊರಿನಲ್ಲಿರುವ ಸಾರ್ವಜನಿಕ ಸೌಲಭ್ಯಗಳನ್ನು ಪಟ್ಟಿಮಾಡು.

---

---

ಶಾಲೆ ಒಂದು ಸಾರ್ವಜನಿಕ ಸೌಲಭ್ಯ. ಏಕೆ? ಇಲ್ಲಿ ಬರೆ.

---

---

ನಿನ್ನ ಶಾಲೆಯನ್ನು ನೀನು ಮತ್ತು ನಿನ್ನ ಗೆಳೆಯರು ಹೇಗೆ ಸ್ವಚ್ಛವಾಗಿಟ್ಟುಕೊಳ್ಳುವಿರಿ?

---

---

**ಚಟುವಟಿಕೆ :**

- ಈ ಕೆಳಗಿನ ಪದಗಳಿರುವ ಚೌಕದಲ್ಲಿ(ಪದಬಂಧ) ಸಾರ್ವಜನಿಕ ಸೌಲಭ್ಯಗಳು ಅಡಗಿವೆ. ಅವುಗಳನ್ನು ಗುರುತಿಸಿ, ಗೆರೆಯನ್ನು ಸುತ್ತು. ಒಂದು ಉದಾಹರಣೆಯನ್ನು ಇಲ್ಲಿ ತೋರಿಸಿದೆ.

| | | | | | | | | |
|---|---|---|---|---|---|---|---|---|
| ಅಂ | ನೆ | ಅಂ | ದಾ | ಕಾ | ನಿ | ಲ್ದಾ | ಣ | ಶೌ |
| ಚೆ | ತೆ | ಗ | ರಿ | ರು | ಜ | ಬ | ಸ್ಸು | ಚಾ |
| ಕ | ಕ | ಡಿ | ದೀ | ಶಾ | ಲೆ | ರ | ಸ್ತೆ | ಲ |
| ಚೇ | ರ | ದೀ | ಪ | ಟ | ಗ್ರಂ | ಥಾ | ಲ | ಯ |
| ರಿ | ಲೆ | ಮಾ | ರು | ಕ | ಟ್ಟೆ | ಮ | ರ | ರಿ |
| ರ | ಉ | ದ್ಯಾ | ನ | ವ | ನ | ಆ | ಸ್ಪ | ತ್ರೆ |

- ಈ ಕೆಳಗಿನವುಗಳಲ್ಲಿ ಸಾರ್ವಜನಿಕ ಸೌಲಭ್ಯಗಳನ್ನು ಗುರುತಿಸಿ, ವೃತ್ತ ಹಾಕು. **ಶಾಲೆ, ಅಂಗಡಿ, ಮನೆ, ಗ್ರಂಥಾಲಯ, ಕಾರು, ಬಸ್ಸು, ಸಾಲುಮರ, ಮನೆದೀಪ, ದಾರಿದೀಪ, ಉದ್ಯಾನವನ, ರಸ್ತೆ, ಮನೆನಲ್ಲಿ, ಬೀದಿನಲ್ಲಿ, ಮನೆತೋಟ, ಅಂಚೆಕಚೇರಿ, ಮಾರುಕಟ್ಟೆ, ನ್ಯಾಯಬೆಲೆ ಅಂಗಡಿ.**

©KTBS Not to be republished

# ಪಾಠ – 14

# ಸಾರಿಗೆ ಸಂಚಾರ

**ಈ ಪಾಠವನ್ನು ಕಲಿತ ನಂತರ ನೀನು,**

- ಪ್ರಯಾಣದ ಅವಶ್ಯಕತೆಯನ್ನು ಗುರುತಿಸುವೆ.
- ಸನಿಹ, ದೂರ ಮತ್ತು ನೂತನ ಬಗೆಯ ಸಂಚಾರ ಸಾಧನಗಳನ್ನು ಅರಿಯುವೆ.
- ಬಸ್ಸು ನಿಲ್ದಾಣ/ರೈಲು ನಿಲ್ದಾಣದಲ್ಲಿ ಕಾರ್ಯ ನಿರ್ವಹಿಸುವ ವಿವಿಧ ಬಗೆಯ ಕೆಲಸಗಾರರ ಬಗ್ಗೆ ಅರಿಯುವೆ.

## ಹಾಡಿ–ನಲಿ

ನಾನು ಹೊರೆಟೆನು ಪ್ರವಾಸ
ಬಸ್ಸಲಿ ಗೆಳೆಯರ ಸಹವಾಸ

ದಾರಿಲಿ ಕಂಡವು ಬಹುತೇಕ
ಸಾಗಿವೆ ಸಾರಿಗೆ ಅನೇಕ

ಪುಟಿಯುತ ಹೊರಟಿದೆ ಕುದುರೆಗಾಡಿ
ಸಾಮಾನು ತುಂಬಿದ ಎತ್ತಿನಗಾಡಿ

ನಿಧಾನ ಗತಿಯಲಿ ಸೈಕಲ್ಲು
ಹಳಿಯಲಿ ಓಡಿದೆ ಆ ರೈಲು

ಮೋಟಾರು ಬೈಕದು ಸಾಗುವ ಗತ್ತು
ನೀರಲಿ ತೇಲುವ ದೋಣಿಯ ಸುತ್ತು

ಆಗಸದಲ್ಲಿಯೂ ಮಾಡುವ ಯಾನ
ವೇಗದಿ ಚಲಿಸುವ ವಿಮಾನ ಯಾನ

ಮೂರು ಚಕ್ರದ ಆಟೋರಿಕ್ಷಾ
ನಾಲ್ಕು ಚಕ್ರದ ಕಾರಿವೆ ಲಕ್ಷ

ವಿಧವಿಧ ವೇಗದ ಸಾರಿಗೆ ನೋಡು
ಪಯಣದ ಗೆಳೆಯರ ಬೀಡಿದು ನಾಡು





©KTBS Not to be republished

ಈ ಹಾಡಿನಲ್ಲಿ ಬಂದಿರುವ ವಾಹನಗಳ ಹೆಸರನ್ನು ಬರೆ.

| | | | |
|---|---|---|---|
| | | | |
| | | | |
| | | | |

ವಾಹನಗಳ ಚಿತ್ರಗಳನ್ನು ಸಂಗ್ರಹಿಸಿ ಅಂಟಿಸು.

| | | |
|---|---|---|
| | | |
| | | |
| | | |
| | | |

©KTBS Not to be republished

ನೀನು ಪ್ರಯಾಣಿಸಿರುವ ವಾಹನಗಳ ಹೆಸರನ್ನು ಪಟ್ಟಿಮಾಡು.

| | | |
|---|---|---|
| | | |
| | | |
| | | |
| | | |

ಪಟ್ಟಿ ಮಾಡಿದ ನಂತರ, ಅವುಗಳಲ್ಲಿ ವೇಗವಾಗಿ ಚಲಿಸುವ ಮತ್ತು ನಿಧಾನವಾಗಿ ಚಲಿಸುವ ವಾಹನಗಳು ಯಾವುವು ಎಂಬುದನ್ನು ಇಲ್ಲಿ ಬರೆ.

| **ವೇಗವಾಗಿ ಚಲಿಸುವ ವಾಹನ** | **ನಿಧಾನವಾಗಿ ಚಲಿಸುವ ವಾಹನ** |
|---|---|
| | |
| | |
| | |
| | |
| | |
| | |


ನಿಮ್ಮ ಊರಿನಲ್ಲಿ ಜನರು ವಸ್ತುಗಳನ್ನು ಸಾಗಿಸಲು ಯಾವ ಯಾವ ವಾಹನಗಳನ್ನು ಬಳಸುತ್ತಾರೆ? ಇಲ್ಲಿ ಬರೆ.

| | | |
|---|---|---|
| | | |
| | | |
| | | |

©KTBS Not to be republished

**ಚಟುವಟಿಕೆ :** ಖಾಲಿ ಬಿಟ್ಟ ಜಾಗ ತುಂಬಿ ಓದು.

ನಾವು ನಮ್ಮ ಅಗತ್ಯಗಳಿಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಪ್ರಯಾಣಿಸಲು ______ ಮತ್ತು ______ ನಂತಹ ವಾಹನಗಳನ್ನು ಬಳಸುತ್ತೇವೆ. ವಸ್ತುಗಳನ್ನು ಸಾಗಿಸಲು ______ ______ ಮತ್ತು ______ ಯಂತಹ ವಾಹನಗಳನ್ನು ಬಳಸುತ್ತೇವೆ. ದೂರದ ಪ್ರಯಾಣಕ್ಕೆ ______ ಸುಖಕರ. ವೇಗವಾಗಿ ಪ್ರಯಾಣಿಸಲು ______ ಉಪಯೋಗಕಾರಿ. ______ ಮರುಭೂಮಿಯಲ್ಲಿ ಪ್ರಯಾಣಿಸಲು ಬಳಸುತ್ತಾರೆ. ಇದನ್ನು ಮರುಭೂಮಿಯ ಹಡಗು ಎಂದೇ ಕರೆಯುತ್ತಾರೆ. ನದಿಗಳನ್ನು ದಾಟಬೇಕಾದರೆ ______ ಯನ್ನು ಬಳಸುತ್ತಾರೆ.





©KTBS Not to be republished

ನಿಮ್ಮ ಊರಿನ ಬಸ್ಸು ನಿಲ್ದಾಣದಲ್ಲಿ ನೀನು ಏನೇನು ನೋಡಿರುವೆ ಎಂಬುದನ್ನು ಬರೆ.

**ಚಟುವಟಿಕೆ :** ನೀನು ನೋಡಿದ 2 ವಾಹನಗಳ ಸರಳ ಚಿತ್ರ ಬಿಡಿಸಿ ಬಣ್ಣ ಹಾಕು.

©KTBS Not to be republished

## ರೈಲು ನಿಲ್ದಾಣ




ನಿಮ್ಮೂರಿನಲ್ಲಿ ರೈಲು ನಿಲ್ದಾಣವಿದೆಯೆ? [ ]

ನೀನು ರೈಲು ನಿಲ್ದಾಣ ನೋಡಿದ್ದೀಯಾ? [ ]

ನೀನು ರೈಲಿನಲ್ಲಿ ಪ್ರಯಾಣ ಮಾಡಿದ್ದೀಯಾ? [ ]

**ಮಾಡಿ–ನೋಡು**

ಬೆಂಕಿಪೆಟ್ಟಿಗೆ, ತಂಪುಪಾನೀಯ ಬಾಟಲಿಯ ಮುಚ್ಚಳ ಬಳಸಿ ರೈಲಿನ ಮಾದರಿಯನ್ನು ಹಿರಿಯರ ಸಹಾಯದಿಂದ ತಯಾರಿಸು.

**ಓದಿ–ತಿಳಿ**

ಬಸ್ಸು ಮತ್ತು ರೈಲು ನಿಲ್ದಾಣದಲ್ಲಿ ವಿವಿಧ ಕೆಲಸಗಳನ್ನು ಮಾಡಲು ಹಲವಾರು ಕೆಲಸಗಾರರ ಅಗತ್ಯವಿದೆ. ನಾವೆಲ್ಲರೂ ಸುರಕ್ಷಿತವಾಗಿ ಪ್ರಯಾಣ ಮಾಡಲು ಇವರೆಲ್ಲರ ಸಹಕಾರದ ಅಗತ್ಯವಿದೆ.

©KTBS Not to be republished

ಕೆಳಗಿನ ಚಿತ್ರದಲ್ಲಿ ಯಾರು ಯಾವ ಕೆಲಸ ಮಾಡುತ್ತಾರೆ? ಇಲ್ಲಿ ಬರೆ.



______________________



______________________



______________________



______________________



______________________


Not to be republished © KTBS

# ಪಾಠ – 15

# ಪತ್ರ ಸಂವಾದ

**ಈ ಪಾಠವನ್ನು ಕಲಿತ ನಂತರ ನೀನು,**

- ಸಂಜ್ಞೆ (ಸನ್ನೆ), ಅಭಿನಯ ಮುಂತಾದವುಗಳ ಮೂಲಕ ಭಾಷೆ ಬಳಸದೆ ಮಾತನಾಡುವೆ.
- ಪತ್ರದ ಮೂಲಕ ಸಂಪರ್ಕಿಸುವ ವಿಧಾನ ಹಾಗೂ ಅಂಚೆ ಕಚೇರಿಯ ಕಾರ್ಯ ಚಟುವಟಿಕೆಗಳನ್ನು ತಿಳಿಯುವೆ.



©KTBS Not to be republished

ಬೇಸಿಗೆ ರಜೆಯ ಒಂದು ದಿನ. ಸಂಜಯನ ಮನೆಯಲ್ಲಿ ಕೆಲವು ಮಕ್ಕಳು ಟಿ.ವಿ.ಯಲ್ಲಿ ಕ್ರಿಕೆಟ್ ನೋಡಲು ಸೇರಿದ್ದರು. ಆಟಕ್ಕೆ ಒಳ್ಳೆಯ ಕಳೆ ಕಟ್ಟಿತ್ತು. ರಾಹುಲ್ ದ್ರಾವಿಡ್ ಬ್ಯಾಟ್ ಮಾಡುತ್ತಿದ್ದರು. ಹರಭಜನ್ ಸಿಂಗ್ ಚೆಂಡೆಸೆದರು. ದ್ರಾವಿಡ್ ಬ್ಯಾಟನ್ನು ಬೀಸಿ ಚೆಂಡಿಗೆ ಹೊಡೆದರು. ಚೆಂಡು ಬೌಂಡರಿಯನ್ನು ದಾಟಿತು. ಟಿ.ವಿ. ನೋಡುತ್ತಿದ್ದ ಮಕ್ಕಳೆಲ್ಲಾ ಜೋರಾಗಿ ಚಪ್ಪಾಳೆ ತಟ್ಟಿ ಸಂತಸಪಟ್ಟರು. ಪುಟ್ಟ ಸಂಜಯ್ ಅಂಪೈರ್ ಮಾಡುತ್ತಿದ್ದ ಸನ್ನೆಯನ್ನು ನೋಡಿದ.

ಸಂಜಯ್ : ಸುನೀಲ್ ಅಣ್ಣಾ, ಅಂಪೈರ್ ಏಕೆ ತನ್ನ ಎರಡೂ ಕೈ ಮೇಲಕ್ಕೆ ಎತ್ತಿದರು.

ಸುನೀಲ್ : ಚೆಂಡು ಬೌಂಡರಿ ದಾಟಿ ಬಿದ್ದಿತ್ತಲ್ಲ, ಆರು ರನ್‌ಗಳಾದವು ಎಂದು ತೋರಿಸಲು ಅಂಪೈರ್ ಈ ಸನ್ನೆ ಮಾಡಿದರು.

ಸಂಜಯ್ : ಮಾತಿನಲ್ಲಿ ಹೇಳಬಹುದಿತ್ತಲ್ಲ !

ಉಮಾ : ಇಷ್ಟು ದೊಡ್ಡ ಮೈದಾನದಲ್ಲಿ, ಜನಗಳ ಗಲಾಟೆಯಲ್ಲಿ ಏನೂ ಕೇಳುವುದಿಲ್ಲ. ಸನ್ನೆಗಳಿಂದ ತೋರಿಸಲು ಸುಲಭ. ಎಲ್ಲರಿಗೂ ಅರ್ಥವಾಗುತ್ತದೆ.

ಲೂಸಿ : ನಾವೊಂದು ಹೊಟೇಲ್‌ಗೆ ಊಟ ಮಾಡಲು ಹೋಗಿದ್ದೆವು. ಅಲ್ಲಿಯೂ ಕೂಡ ಸನ್ನೆಗಳನ್ನು ಬಳಸಿ ಚಪಾತಿ, ಅನ್ನ ಮುಂತಾದವುಗಳನ್ನು ತರಲು ಹೇಳುತ್ತಿದ್ದರು. ಇವನ್ನು ನೋಡೋಕೆ ಚೆನ್ನ.

ಸಲ್ಮಾನ್ : ಹೌದು. ಕೆಲವೊಮ್ಮೆ ಭಾಷೆ ಗೊತ್ತಿಲ್ಲದ ಕಡೆ, ವ್ಯಕ್ತಿಗಳು ದೂರವಿದ್ದಾಗ, ಗಲಾಟೆ ಇರುವ ಕಡೆ ಸನ್ನೆಗಳು ಉಪಯೋಗಕ್ಕೆ ಬರುತ್ತವೆ.

**ಚಟುವಟಿಕೆ :**

- ನೀನು ಮಾತನಾಡದೆ ಸನ್ನೆಗಳ ಮೂಲಕ ಗೆಳೆಯರೊಂದಿಗೆ ಸಂಭಾಷಿಸು.
- ಸನ್ನೆಗಳನ್ನು ಬಳಸಿ ಕೆಳಗಿನ ಚಟುವಟಿಕೆಗಳನ್ನು ತಿಳಿಸಲು ಯತ್ನಿಸು. ಕರೆಯುವುದು, ಬರೆಯುವುದು, ಹಾಡು ಹೇಳುವುದು, ಊಟ ಮಾಡುವುದು, ವಸ್ತು ತರುವಂತೆ ತೋರುವುದು, ಬೇಡ–ಬೇಕು ಎಂದು ತೋರಿಸುವುದು, ಮೇಲೆ–ಕೆಳಗೆ, ಅಲ್ಲಿ–ಇಲ್ಲಿ ತೋರಿಸುವುದು, ನೀರು ಕುಡಿಯುವುದು ಇತ್ಯಾದಿ ಸನ್ನೆಗಳನ್ನು ನೀನು ಮಾಡು. ನಿನ್ನ ಗೆಳೆಯರು ನೀನು ಮಾಡುವ ಸನ್ನೆಗಳ ಅರ್ಥ ತಿಳಿಸಲಿ.
- ನೀನು ಕ್ರಿಕೆಟ್, ಫುಟ್‌ಬಾಲ್ ಆಟಗಳನ್ನು ನೋಡಿದ್ದೀಯಾ? ಅಲ್ಲಿ ಮಾಡುವ ಎರಡು ಸನ್ನೆಗಳನ್ನು ನಿನ್ನ ಸ್ನೇಹಿತರಿಗೆ ಪರಿಚಯಿಸು. ಈ ಸನ್ನೆಗಳು ಏನನ್ನು ಹೇಳುತ್ತವೆ? ಉದಾಹರಣೆ : ಒಂದು ಕೈ ಎತ್ತಿ ಒಂದು ಬೆರಳನ್ನು ಮೇಲೆ ಮಾಡಿದರೆ, ಕ್ರಿಕೆಟ್ ಆಟದಲ್ಲಿ **ಔಟ್** ಎಂದು ಅರ್ಥ.

©KTBS Not to be republished

**ಹಾಡಿ–ನಲಿ**

ಭಾಷೆ ಬೇಡ, ಊರು ಬೇಡ
ಸನ್ನೆಗಳನ್ನು ತಿಳಿದುಕೋ
ದೂರವಿರಲಿ, ಶಬ್ದವಿರಲಿ
ಸನ್ನೆಗಳನ್ನು ಬಳಸಿಕೋ

ರಮೇಶ : ಓಹೋ! ದ್ರಾವಿಡ್...... ಎಷ್ಟು ಚೆನ್ನಾಗಿ ಸೆಂಚುರಿ ಹೊಡೆದರಲ್ಲ.

ಕರುಣಾ : ನನಗಂತೂ ದ್ರಾವಿಡ್ ತುಂಬಾ ಇಷ್ಟ.

ಸುನೀಲ್ : ನನಗೂ ಅಷ್ಟೆ. ಸೆಂಚುರಿ ಬಾರಿಸಿದ್ದಕ್ಕೆ ಅವರಿಗೆ ಅಭಿನಂದನೆ ಹೇಳಿ ಪತ್ರ ಬರೆಯೋಣ?

ಎಲ್ಲರೂ : ಓಹೋ! ಹಾಗೆಯೇ ಆಗಲಿ.

ಕರುಣಾ : ನಾನು ಬರೆಯುತ್ತೇನೆ. ನೀವು ಏನು ಬರೆಯಬೇಕೆಂದು ಹೇಳಿ.

ಉಮಾ : ಸರಿ, ನಿನ್ನ ಕೈ ಬರಹ ಚೆನ್ನಾಗಿದೆ.

ಕರುಣಾ : ಯಾರ ಬಳಿ ಅಂಚೆ ಪತ್ರ ಇದೆ?

ರೀಟಾ : ನಮ್ಮ ಮನೆಯಲ್ಲಿದೆ. ಈಗಲೇ ತರುತ್ತೇನೆ. ಊಟದ ವಿರಾಮದಲ್ಲಿ ಬರೆಯೋಣ.
(ಊಟದ ಸಮಯವಾಯಿತು. ಕ್ರಿಕೆಟ್ ವಿರಾಮ)

ಸುನೀಲ್ : ಕರುಣಾ, ಸರಿ ಬರೆ. ನಾನು ಹೇಳುತ್ತೇನೆ.

ಸ್ಥಳ :
ದಿನಾಂಕ :

ಪ್ರೀತಿಯ ರಾಹುಲ್ ದ್ರಾವಿಡ್ ಅಣ್ಣನಿಗೆ ನಮಸ್ಕಾರಗಳು.

ನಾವೆಲ್ಲ ಮೂರನೆಯ ತರಗತಿಯ ಮಕ್ಕಳು. ನಮಗೆಲ್ಲ ನೀವಿಷ್ಟ. ನೀವು ಎಷ್ಟು ಚೆನ್ನಾಗಿ ಬ್ಯಾಟ್ ಮಾಡುತ್ತೀರಿ. ನೀವು ಸೆಂಚುರಿ ಹೊಡೆದದ್ದಕ್ಕೆ ನಮ್ಮೆಲ್ಲರ ಅಭಿನಂದನೆಗಳು.

ಇತಿ ನಿಮ್ಮ,

ಮೂರನೆಯ ತರಗತಿಯ ಮಕ್ಕಳು


________________
________________
________________

© KTBS Not to be republished

ಸಂಜಯ್ : ದ್ರಾವಿಡ್ ವಿಳಾಸ ಗೊತ್ತೆ?

ಸಲ್ಮಾನ್ : ಅಪ್ಪನ ಬಳಿ ಇದೆ. ಈಗ ತರುತ್ತೇನೆ.

ಕರುಣಾ : ವಿಳಾಸ ಬರೆಯಲೇನು?




ಉಮಾ : ನಮ್ಮ ವಿಳಾಸ ಬರೆ.

ರೀಟಾ : ಸರಿ, ಪತ್ರ ತಯಾರು. ಇದನ್ನು ದ್ರಾವಿಡ್‌ಗೆ ಕಳಿಸುವುದು ಹೇಗೆ?

ಸುನೀಲ್ : ಅಂಚೆ ಪೆಟ್ಟಿಗೆಗೆ ಹಾಕೋಣ.

ಕರುಣಾ : ಅಯ್ಯೋ! ಅದು ದ್ರಾವಿಡ್‌ಗೆ ತಲುಪುವುದು ಹೇಗೆ?

ಸಲ್ಮಾನ್ : ಇಲ್ಲೇ ಅಂಚೆ ಕಚೇರಿ ಇದೆ. ಪೆಟ್ಟಿಗೆಯೂ ಇದೆ. ಎಲ್ಲರೂ ಹೋಗೋಣ. ಅಲ್ಲಿ ಪತ್ರವನ್ನು ಅಂಚೆ ಪೆಟ್ಟಿಗೆಗೆ ಹಾಕೋಣ. ನಂತರ ಅದು ದ್ರಾವಿಡ್‌ಗೆ ಹೇಗೆ ತಲುಪುತ್ತದೆ ಎಂದು ಅಂಚೆಯವರನ್ನು ಕೇಳೋಣ.

(ಎಲ್ಲರೂ ಗಲಾಟೆ ಮಾಡುತ್ತ ಅಂಚೆ ಕಚೇರಿಯತ್ತ ಸಾಗಿದರು)

ಉಮಾ : ಕರುಣಾ, ಆ ಪತ್ರವನ್ನು ಇಲ್ಲಿರುವ ಅಂಚೆ ಪೆಟ್ಟಿಗೆಗೆ ಹಾಕು.


ಕರುಣಾ : ಹಾಕಿದೆ.


©KTBS Not to be republished

ಸುನೀಲ್ : (ಅರೆ, ಯಾರೋ ಪೆಟ್ಟಿಗೆಯಲ್ಲಿನ ಪತ್ರಗಳನ್ನೆಲ್ಲ ತೆಗೆಯುತ್ತಿದ್ದಾರೆ.) ನೀವೇಕೆ ಪತ್ರಗಳನ್ನೆಲ್ಲ ತೆಗೆದುಕೊಳ್ಳುತ್ತಿದ್ದೀರಿ? ನಾವು ದ್ರಾವಿಡ್‌ಗೆ ಪತ್ರ ಬರೆದಿದ್ದೇವೆ. ನೀವು ತೆಗೆದುಕೊಂಡರೆ ದ್ರಾವಿಡ್‌ಗೆ ಪತ್ರ ತಲುಪುವುದಿಲ್ಲ.

ಅಂಚೆಯಣ್ಣ : ಯೋಚಿಸಬೇಡ. ನಾನೇ ಅಂಚೆಯಣ್ಣ. ಜನರು ತಾವು ಬರೆದಿರುವ ಪತ್ರಗಳನ್ನು ಅಂಚೆ ಪೆಟ್ಟಿಗೆಗೆ ಹಾಕುತ್ತಾರೆ. ನಾನು ದಿನವೂ ಅವುಗಳನ್ನು ತೆಗೆದು ಅಂಚೆ ಕಚೇರಿಗೆ ಒಯ್ಯುತ್ತೇನೆ. ಅಂಚೆ ಕಚೇರಿಯ ಒಳಗೆ ಬಂದು ಅಲ್ಲಿನ ಕೆಲಸಗಳನ್ನು ನೀವೆಲ್ಲಾ ನೋಡಿ.





ನೋಡಿ, ಇದು ನಿಮ್ಮ ದ್ರಾವಿಡ್‌ನ ಪತ್ರ. ಇದರ ಮೇಲೆ ಮೊಹರನ್ನು ಹಾಕುತ್ತಾರೆ. ಇವೆಲ್ಲ ಪತ್ರಗಳು ಬೆಂಗಳೂರಿಗೆ ಹೋಗಬೇಕಾದವು. ಇವುಗಳನ್ನು ರೈಲಿನಲ್ಲಿ ಕಳುಹಿಸುತ್ತೇವೆ. ಬೆಂಗಳೂರಿನಲ್ಲಿ ಅಂಚೆಯವರು ಈ ಪತ್ರಗಳನ್ನೆಲ್ಲಾ ಅಂಚೆ ಕಚೇರಿಗೆ ಒಯ್ಯುತ್ತಾರೆ. ಅಲ್ಲಿ ವಿಳಾಸದ ಆಧಾರದ ಮೇಲೆ ಪತ್ರಗಳನ್ನು ವಿಂಗಡಿಸುತ್ತಾರೆ. ಆಯಾ ಬಡಾವಣೆಗಳಿಗೆ ಸಂಬಂಧಿಸಿದ ಪತ್ರಗಳನ್ನು ಅಂಚೆಯವರು ಪಡೆದು ಮನೆ ಮನೆಗಳಿಗೆ ತಲುಪಿಸುತ್ತಾರೆ.

© KTBS Not to be republished

ಸುನೀಲ್ : ದ್ರಾವಿಡ್‌ಗೆ ಪತ್ರ ಯಾವಾಗ ತಲುಪುತ್ತದೆ?

ಅಂಚೆಯಣ್ಣ : ಮೂರು ದಿನಗಳು ಬೇಕಾಗುತ್ತದೆ.

ಸಂಜಯ್ : ಅಯ್ಯೋ ನಾಳೆಯೇ ತಲುಪುವುದಿಲ್ಲವೆ?

ಅಂಚೆಯಣ್ಣ : ಅಲ್ಲಿ ನೋಡಿ, ತ್ವರಿತ ಅಂಚೆ ಸೌಲಭ್ಯ. ಇದೇ **ಸ್ಪೀಡ್ ಪೋಸ್ಟ್**. ಅಲ್ಲಿ ಕೊಟ್ಟರೆ, ಆ ಪತ್ರ ವಿಮಾನದ ಮೂಲಕ ವೇಗವಾಗಿ ತಲುಪುತ್ತದೆ. ಆದರೆ ಅದಕ್ಕೆ ಹೆಚ್ಚು ಬೆಲೆ ಕೊಡಬೇಕು. ಅಂಚೆ ಕಚೇರಿಯಲ್ಲದೆ ಕೆಲವು ಸಂಸ್ಥೆಗಳು ತ್ವರಿತ ಅಂಚೆ ಸೌಲಭ್ಯವನ್ನು ಹೊಂದಿವೆ. **ಕೊರಿಯರ್** ಅಂಚೆಯ ಬಗ್ಗೆ ಕೇಳಿದ್ದೀರಲ್ಲ.

ರೀಟಾ : ಓಹೋ..... ಮೊನ್ನೆ ನನ್ನ ಹುಟ್ಟಿದ ಹಬ್ಬಕ್ಕೆ ನನ್ನ ಅಜ್ಜಿ ಹಣವನ್ನು ಕೂಡ ಅಂಚೆಯಲ್ಲಿಯೇ ಕಳುಹಿಸಿದ್ದರು. ಅಂಚೆಯಣ್ಣ ಅದನ್ನು ಮನೆಗೆ ತಲುಪಿಸಿದ್ದರು.

ಅಂಚೆಯಣ್ಣ : ಅದು ಮನಿ ಆರ್ಡರ್. ಪತ್ರದಂತೆಯೇ ಹಣವನ್ನು ಕೂಡಾ ಅಂಚೆಯ ಮೂಲಕ ಬೇರೆ ಊರುಗಳಿಗೆ ತಲುಪಿಸಬಹುದು. ಹಾಗೆಯೇ ಪುಸ್ತಕ, ಮತ್ತಿತರ ವಸ್ತುಗಳನ್ನು ಕಳುಹಿಸಬಹುದು. ಇದಕ್ಕೆ ಪಾರ್ಸಲ್ ಅನ್ನುತ್ತಾರೆ.

ಸುನೀಲ್ : ಅಂಚೆಯಣ್ಣ. ಮೂರು ದಿನಗಳೊಳಗೆ ನಮ್ಮ ಪತ್ರ ದ್ರಾವಿಡ್‌ಗೆ ತಲುಪುತ್ತದೆಯಲ್ಲವೆ?

ಅಂಚೆಯಣ್ಣ : ಹೌದು ಪುಟಾಣಿಗಳೇ, ಯೋಚನೆ ಮಾಡಬೇಡಿ.

ಕರುಣಾ : ಈಗ ಊಟದ ವಿರಾಮ ಮುಗಿದಿರುತ್ತದೆ. ಕ್ರಿಕೆಟ್ ಮ್ಯಾಚ್ ನೋಡಬೇಕು. ಬನ್ನಿ ಹೋಗೋಣ.

(ಮಕ್ಕಳೆಲ್ಲಾ ಗಲಾಟೆ ಮಾಡುತ್ತಾ ಅಂಚೆ ಕಚೇರಿಯಿಂದ ಓಡಿಬಂದು ಟಿ.ವಿ. ಮುಂದೆ ಮತ್ತೆ ಕುಳಿತರು)

ಪತ್ರಗಳನ್ನು ಏಕೆ ಬರೆಯುತ್ತಾರೆ?

______________________________

©KTBS Not to be republished

ನೀನು ಯಾರಿಗಾದರು ಪತ್ರ ಬರೆದಿದ್ದೀಯಾ? ಹೌದಾದರೆ ಯಾರಿಗೆ, ಏಕೆ?

**ಚಟುವಟಿಕೆ :** ನಿನ್ನ ಗೆಳೆಯರಿಗೆ/ಅಜ್ಜ, ಅಜ್ಜಿಗೆ/ಮೆಚ್ಚಿನ ವ್ಯಕ್ತಿಗೆ ಒಂದು ಪತ್ರ ಬರೆ.

**ಮಾಡಿ–ನೋಡು**

ನಿಮ್ಮ ಊರಿನ ಅಂಚೆ ಕಚೇರಿಗೆ ಹೋಗಿ ನೀನು ಬರೆದ ಪತ್ರವನ್ನು ಅಂಚೆ ಪೆಟ್ಟಿಗೆಯಲ್ಲಿ ಹಾಕು. ನಂತರ ಅಂಚೆ ಕಚೇರಿಯ ಒಳಗೆ ಹೋಗಿ ಅಲ್ಲಿ ಮಾಡುವ ಕೆಲಸಗಳನ್ನು ನೋಡು.


ನೀನು ಭೇಟಿ ನೀಡಿದ ಅಂಚೆ ಕಚೇರಿಯ ಬಗ್ಗೆ ಬರೆ.

©KTBS Not to be republished


ಪತ್ರಗಳು ರವಾನೆಯಾಗುವ ಕೆಳಗಿನ ಚಿತ್ರಗಳನ್ನು ಗಮನಿಸು. ಈ ಚಿತ್ರಗಳಿಗೆ ಸರಿಯಾದ ಕ್ರಮಸಂಖ್ಯೆ ಹಾಕು. ಕೊಟ್ಟಿರುವ ಉದಾಹರಣೆಯನ್ನು ಗಮನಿಸು.







1








©KTBS Not to be republished

**ಮಾಡಿ–ನೋಡು**

ಬಿಳಿ ಹಾಳೆಯಿಂದ ಅಂಚೆ ಲಕೋಟೆ ಮಾಡು.



ತಯಾರಿಸಿದ ಲಕೋಟೆಯಲ್ಲಿ ನೀನು ಕಳುಹಿಸಬೇಕಾದವರ ಹೆಸರು ಮತ್ತು ವಿಳಾಸವನ್ನು ಬರೆ. ನೀನು ಬರೆದ ಪತ್ರವನ್ನು ಅದರಲ್ಲಿ ಇಡು. ಲಕೋಟೆಯನ್ನು ಮುಚ್ಚಿ ಅಂಟಿಸು. ಈಗ ಅದರ ಮೇಲೆ 5.00 ರೂಪಾಯಿ ಬೆಲೆಯ ಅಂಚೆ ಚೀಟಿಯನ್ನು ಅಂಟಿಸು. ನಂತರ ಅಂಚೆ ಪೆಟ್ಟಿಗೆಯಲ್ಲಿ ಹಾಕು.

ಅಂಚೆ ಚೀಟಿ ಅಂಟಿಸದಿದ್ದಲ್ಲಿ ಏನಾಗುತ್ತದೆ? ಶಿಕ್ಷಕರಿಂದ ಹಿರಿಯರಿಂದ ತಿಳಿದುಕೊ.

**ಚಟುವಟಿಕೆ :** ಪ್ರಸಿದ್ಧ ವ್ಯಕ್ತಿಗಳ, ಪ್ರಾಣಿಗಳ, ಸಸ್ಯಗಳ ಚಿತ್ರಗಳಿರುವ ವಿಶೇಷ ಅಂಚೆ ಚೀಟಿಗಳನ್ನು ನೀನು ನೋಡಿರಬಹುದು. ಅನೇಕ ವಿಧದ ಅಂಚೆ ಚೀಟಿಗಳಿರುತ್ತವೆ. ಇಂತಹ ವಿಶೇಷ ಅಂಚೆ ಚೀಟಿಗಳನ್ನು ಸಂಗ್ರಹಿಸುವ ಹವ್ಯಾಸವನ್ನು ಬೆಳೆಸಿಕೊ. ಸಂಗ್ರಹಿಸಿದ ಚೀಟಿಗಳನ್ನು ಒಂದು ದೊಡ್ಡ ಹಾಳೆಯಲ್ಲಿ ಅಂಟಿಸಿ ಅದರ ಬಗ್ಗೆ ಒಂದೆರಡು ಸಾಲು ಬರೆ.

©KTBS Not to be republished

## ಪಾಠ – 16

# ದೀಪಾಳ ತಲೆಮಾರು

**ಈ ಪಾಠವನ್ನು ಕಲಿತ ನಂತರ ನೀನು,**

- ಮೂರು ತಲೆಮಾರುಗಳ ಸದಸ್ಯರ ಸಂಬಂಧಗಳನ್ನು ಅರಿಯುವೆ. ಸರಳ ವಂಶವೃಕ್ಷವನ್ನು ರಚಿಸುವೆ.
- ಕುಟುಂಬದ ಸದಸ್ಯರ ಭೌತಿಕ ಹಾಗೂ ಅನುವಂಶೀಯ ಲಕ್ಷಣಗಳಲ್ಲಿರುವ ಸಾಮ್ಯತೆಯನ್ನು ಗುರುತಿಸುವೆ.
- ತಾಯಿ–ಮಗುವಿನ ಸಂಬಂಧವನ್ನು ಅರಿಯುವೆ.

ರಾಜು, ದೀಪಾ ಬೇಸಿಗೆ ರಜೆಯಲ್ಲಿ ತಮ್ಮ ಅಜ್ಜನ ಊರಿಗೆ ಬಂದರು. ದೀಪಾ, ರಾಜು, ಅಮ್ಮ, ಅಜ್ಜಿ ಪಕ್ಕದ ಊರಿನಲ್ಲಿ ನಡೆಯುತ್ತಿದ್ದ ನಾಮಕರಣ ಸಮಾರಂಭಕ್ಕೆ ಹೋದರು. ಅಲ್ಲಿ ತುಂಬಾ ಜನರು ಸೇರಿದ್ದರು. ದೀಪಾ ತೊಟ್ಟಿಲಲ್ಲಿ ಇದ್ದ ಪುಟ್ಟ ಮಗುವನ್ನು ನೋಡಿದಳು.

ದೀಪಾ : ಅಮ್ಮ, ಆ ಪಾಪು ಯಾರದು?

ಅಮ್ಮ : ದೀಪಾ, ಅದು ರಾಧಾ ಮತ್ತು ರಾಜೀವರ ಮಗು. ನೀನು ಚಿಕ್ಕವಳಿದ್ದಾಗ ನೀನೂ ಹೀಗೆ ತೊಟ್ಟಿಲಲ್ಲಿ ಮಲಗಿರುತ್ತಿದ್ದೆ.



©KTBS Not to be republished

ತೊಟ್ಟಿಲಲ್ಲಿದ್ದ ಮಗು ಅಳಲು ಪ್ರಾರಂಭಿಸಿತು. ಅಳುವ ಮಗುವನ್ನು ರಾಧಾ ಎತ್ತಿಕೊಂಡು ಹಾಡಿದಳು.

ಅಳುವ ಕಂದನ ತುಟಿಯು ಹವಳದ ಕುಡಿಹಂಗ
ಕುಡಿ ಹುಬ್ಬು ಬೇವಿನೆಸಳ್ಹಾಂಗ। ಕಣ್ಣೋಟ
ಶಿವನ ಕೈಯಲಗು ಹೊಳೆದ್ಹಾಂಗ॥

ಹಾಡನ್ನು ಕೇಳಿ ಮಗು ಅಳುವನ್ನು ನಿಲ್ಲಿಸಿತು.

**ಚಟುವಟಿಕೆ :** ರಾಧಾ ಮಗುವನ್ನು ಹೇಗೆ ಸಮಾಧಾನ ಮಾಡಿದಳು ಎಂಬುದನ್ನು ಮೂಕಾಭಿನಯ ಮಾಡಿ ತೋರಿಸು.

ಇಂತಹ ಹಾಡುಗಳು ನಿನಗೆ ಗೊತ್ತೆ? ಹಾಡಿ ತೋರಿಸು. ಹಿರಿಯರಿಂದ ಅಥವಾ ಶಿಕ್ಷಕರಿಂದ ಇಂತಹ ಇನ್ನೂ ಕೆಲವು ಹಾಡುಗಳನ್ನು ಕಲಿತುಕೊ.

ಈ ಚಿತ್ರಗಳನ್ನು ಗಮನಿಸು. ತಾಯಿ ತನ್ನ ಮಗುವಿಗೆ ಹೇಗೆ ನೆರವಾಗುತ್ತಾಳೆ? ಹೇಳು.









ಮೇಲಿನ ಎಲ್ಲಾ ಸನ್ನಿವೇಶಗಳಲ್ಲಿ ತಾಯಿ ತನ್ನ ಮರಿಗೆ ಅಥವಾ ಮಗುವಿಗೆ ಪ್ರೀತಿ, ಆರೈಕೆ, ರಕ್ಷಣೆ, ಆಹಾರ ಮುಂತಾದ ಅವಶ್ಯಕತೆಗಳನ್ನು ಪೂರೈಸುತ್ತಾಳೆ.

©KTBS Not to be republished

ನಾಮಕರಣ ಮುಗಿಸಿಕೊಂಡು ಬರುವಾಗ ದಾರಿಯಲ್ಲಿ ಅಜ್ಜಿಯ ಗೆಳತಿಯರು ಸಿಕ್ಕಿದರು. ಅಜ್ಜಿಯನ್ನು ಮಾತನಾಡಿಸಿದರು. ರಾಜುವನ್ನು ನೋಡಿ, “ಇವನು ತನ್ನ ಅಜ್ಜನ ಹಾಗೆಯೇ ಇದ್ದಾನೆ, ಕಣ್ಣು, ಅಗಲವಾದ ಹಣೆ, ಉದ್ದದ ಮೂಗು ಎಲ್ಲವೂ ಅಜ್ಜನನ್ನು ಹೋಲುತ್ತದೆ” ಎಂದರು. ಆಗ ದೀಪಾ, “ನಾನು ಅಮ್ಮನ ಹಾಗೆ ಇರುವೆ ಎಂದು ಎಲ್ಲರೂ ಹೇಳುತ್ತಾರೆ. ನೋಡಿ, ನನಗೂ ಗುಂಗುರು ಕೂದಲು ಅಮ್ಮನಿಗೂ ಗುಂಗುರು ಕೂದಲು” ಎಂದಳು.

- ನೀನು ನಿನ್ನ ಕುಟುಂಬದ ಯಾರನ್ನು ಹೋಲುವೆ? ಚೆನ್ನಾಗಿ ಗಮನಿಸಿ, ಅವರ ಹೆಸರನ್ನು ಬರೆ. ಅವರು ನಿನಗೇನಾಗಬೇಕು ಹೇಳು.

______________________________

______________________________

- ನಿನ್ನ ಕುಟುಂಬದವರಲ್ಲಿ ಕಾಣುವ ಒಂದೇ ರೀತಿಯ ಲಕ್ಷಣಗಳನ್ನು (ಹೋಲಿಕೆಗಳನ್ನು) ಗುರುತಿಸಿ ಪಟ್ಟಿ ಮಾಡು.

ಉದಾಹರಣೆ : ನನ್ನ ಬಣ್ಣ ಅಪ್ಪನ ಬಣ್ಣ ಒಂದೇ

______________________________

______________________________

______________________________


______________________________

______________________________

______________________________

©KTBS Not to be republished

- ಕೆಳಗೆ ಒಂದು ಕುಟುಂಬದ ಚಿತ್ರ ಇದೆ. ಈ ಚಿತ್ರದಲ್ಲಿರುವ ಸದಸ್ಯರಲ್ಲಿ ಕಂಡುಬರುವ ಹೋಲಿಕೆಗಳನ್ನು ಗುರುತಿಸಿ ಬರೆ.




________________________________________

________________________________________

________________________________________

________________________________________

________________________________________

________________________________________

**ಓದಿ–ತಿಳಿ**

ಅಜ್ಜ, ಅಜ್ಜಿ, ತಂದೆ, ತಾಯಿ ಹಾಗೂ ಕುಟುಂಬದ ಇತರ ಸದಸ್ಯರನ್ನು ಮಕ್ಕಳು ಹೋಲುತ್ತಾರೆ. ಸಾಮಾನ್ಯವಾಗಿ ಒಂದೇ ಕುಟುಂಬದ ಸದಸ್ಯರಲ್ಲಿ ಕೂದಲು, ದೇಹದ ಬಣ್ಣ, ಕಣ್ಣು, ಕಿವಿ, ಮೂಗು, ನಡಿಗೆ, ನಗುವ ರೀತಿ ಮುಂತಾದವುಗಳಲ್ಲಿ ಹೋಲಿಕೆಯನ್ನು ಕಾಣಬಹುದು.

ಅಲ್ಲಿಗೆ ಪೇಟೆಯಿಂದ ಬರುತ್ತಿದ್ದ ಅಜ್ಜ ರಾಮಪ್ಪ ಸಿಕ್ಕಿದರು. ಅಜ್ಜ ಮಕ್ಕಳನ್ನು ಕರೆದುಕೊಂಡು ತೋಟಕ್ಕೆ ಹೋದರು.

©KTBS Not to be republished

ದೀಪಾ : "ಅಜ್ಜಾ ನಿನಗೆ ಎಷ್ಟು ಮಕ್ಕಳು?" ಎಂದು ಕೇಳಿದಳು.

(ಅಜ್ಜ ಮಕ್ಕಳಿಗೆ ತನ್ನ ಕುಟುಂಬದ ಬಗ್ಗೆ ಹೇಳಿದರು.)

ಅಜ್ಜ : ದೀಪಾ, ನಿನ್ನ ಅಜ್ಜಿ ಪುಟ್ಟಮ್ಮ. ನಮಗೆ ಇಬ್ಬರು ಮಕ್ಕಳು. ಅವರೇ ನಿಮ್ಮ ತಂದೆ ಸುಬ್ಬಣ್ಣ ಹಾಗೂ ನಿಮ್ಮ ಅತ್ತೆ ಲೀಲಾ. ನಿಮ್ಮ ಅಪ್ಪನಿಗೆ ನೀವಿಬ್ಬರು ಮಕ್ಕಳು. ನಾನು ನಿನ್ನ ಅಜ್ಜಿ, ನಿನ್ನ ತಂದೆ ತಾಯಿ, ನೀನು ಮತ್ತು ರಾಜು, ಹೀಗೆ ನಮ್ಮಿಂದ ನಿಮ್ಮವರೆಗೆ ಮೂರು ತಲೆಮಾರು ಆಯಿತು.


ದೀಪಾ : ಅಜ್ಜ, ನೀನು ಏನು ಹೇಳಿದೆ ಎಂದು ಅರ್ಥವೇ ಆಗಲಿಲ್ಲ.

ರಾಜು : ದೀಪಾ, ನನಗೆ ಶಾಲೆಯಲ್ಲಿ ತಲೆಮಾರುಗಳ ಬಗ್ಗೆ ಹೇಳಿದ್ದಾರೆ. ಇದನ್ನು ಸರಳವಾದ ವಂಶವೃಕ್ಷ ಬರೆದು ತೋರಿಸಬಹುದು. ಮನೆಗೆ ಹೋದ ಮೇಲೆ ಅಜ್ಜ ಹೇಳಿದ ವಿಷಯವನ್ನು ಬರೆದು ತೋರಿಸುವೆ. ಆಗ ನಿನಗೆ ಅರ್ಥವಾಗುತ್ತದೆ.

(ಮಕ್ಕಳು ಮನೆಗೆ ಬಂದರು.)

ದೀಪಾ : ರಾಜು, ವಂಶವೃಕ್ಷ ಎಂದು ಹೇಳಿದೆಯಲ್ಲ ಅದನ್ನು ಬರೆದು ತೋರಿಸು. ತಗೋ, ಈ ಪೆನ್ಸಿಲ್ ಮತ್ತು ಹಾಳೆ.

ರಾಜು : ಸರಿ, ಇಲ್ಲಿ ನೋಡು.




ದೀಪಾ : ಅರೆ, ಇದೊಂದು ಮರದ ತರ ಇದೆ.

ರಾಜು : ಅದಕ್ಕೆ ಇದನ್ನು ವಂಶವೃಕ್ಷ ಎನ್ನುತ್ತಾರೆ. ವಂಶ ಎಂದರೆ ಕುಟುಂಬ, ವೃಕ್ಷ ಎಂದರೆ ಮರ.

ಇದು ರಾಜುವಿನ ಕುಟುಂಬದ ಸರಳವಾದ ವಂಶವೃಕ್ಷ.

©KTBS Not to be republished

ನಿನ್ನ ಮನೆಯಲ್ಲಿ ಯಾರು ಯಾರು ಇದ್ದೀರಿ?

________________ ________________ ________________

________________ ________________ ________________

ನಿನ್ನ ಮನೆಯ ಹಿರಿಯರಿಂದ ಅಜ್ಜ ಅಜ್ಜಿಯ ಬಗ್ಗೆ ಕೇಳಿ ತಿಳಿದುಕೊ. ರಾಜು ತೋರಿಸಿದಂತೆ ಅಜ್ಜ ಅಜ್ಜಿಯಿಂದ ನಿನ್ನವರೆಗಿನ ನಿನ್ನ ಕುಟುಂಬದ ಸರಳವಾದ ವಂಶವೃಕ್ಷ ಬರೆ.

©KTBS Not to be republished

**ಚಟುವಟಿಕೆ :** ನಿನ್ನ ಗೆಳೆಯರು ಬರೆದ ಅವರ ಕುಟುಂಬದ ವಂಶವೃಕ್ಷ ಗಮನಿಸು. ತರಗತಿಯಲ್ಲಿ ನಿನ್ನ ಗೆಳೆಯರೊಡನೆ ಚರ್ಚಿಸು.

ದೀಪಾ : ಅಜ್ಜಾ, ನೀನು ತೋಟದಲ್ಲಿ ಒಂದು ದೊಡ್ಡ ಮರವನ್ನು ತೋರಿಸಿದೆಯಲ್ಲವೆ?

ಅಜ್ಜ : ಹಾಂ! ಅದು ನಾನು ಸಣ್ಣವನಿದ್ದಾಗ ನೆಟ್ಟಿದ್ದು. ಎಷ್ಟು ದೊಡ್ಡದಾಗಿದೆ.

ರಾಜು : ಅದರ ಪಕ್ಕ ಇನ್ನೊಂದು ಮರವೂ ಇದೆ ಅಜ್ಜ.

ಅಜ್ಜ : ಅದು ನಿನ್ನ ಅಪ್ಪ ಚಿಕ್ಕವನಿದ್ದಾಗ ನೆಟ್ಟಿದ್ದು. ಅದು ಸ್ವಲ್ಪ ಸಣ್ಣಮರ. ಚೆನ್ನಾಗಿ ಬೆಳೆದಿದೆ.

ರಾಜು : ಅಜ್ಜ, ನಾನು, ದೀಪಾ ನಾಳೆ ಈ ಮರಗಳ ಹತ್ತಿರವೇ ಇನ್ನೊಂದು ಸಸಿ ನೆಡುತ್ತೇವೆ.

ಅಜ್ಜ : ಒಳ್ಳೆಯದು ರಾಜು. ಅದು ಮುಂದೆ ನಿಮ್ಮಂತೆಯೇ ಬೆಳೆಯಲಿ.


# ಪಾಠ – 17

# ನನ್ನ ಹವ್ಯಾಸ

**ಈ ಪಾಠವನ್ನು ಕಲಿತ ನಂತರ ನೀನು,**

- ಮೌಲ್ಯಗಳು ಮತ್ತು ಹವ್ಯಾಸಗಳ ಮೇಲೆ ಕುಟುಂಬ ಮತ್ತು ಗೆಳೆಯರ ಪ್ರಭಾವವನ್ನು ಗಮನಿಸುವೆ.

ಈ ಚಿತ್ರಗಳನ್ನು ಗಮನಿಸು.



ಇವರು ಏನು ಮಾಡುತ್ತಿದ್ದಾರೆ?

______________________ ______________________

______________________ ______________________

______________________ ______________________

______________________ ______________________

**ಓದಿ–ತಿಳಿ**

- ಬಿಡುವಿನ ವೇಳೆಯಲ್ಲಿ ತಮಗೆ ಇಷ್ಟವಾದ ಮತ್ತು ಆಸಕ್ತಿಯಿರುವ ಅಭ್ಯಾಸಗಳನ್ನು ಹಲವರು ರೂಢಿಸಿಕೊಳ್ಳುತ್ತಾರೆ. ಇವೇ ಹವ್ಯಾಸಗಳು.

**ಉದಾಹರಣೆಗೆ,** ಪುಸ್ತಕ ಮತ್ತು ಪತ್ರಿಕೆಗಳನ್ನು ಓದುವುದು, ಅಂಚೆ ಚೀಟಿಗಳ ಸಂಗ್ರಹ ಮಾಡುವುದು, ಹಾಡುವುದು, ಕೈತೋಟ ಮಾಡುವುದು ಇತ್ಯಾದಿ.

©KTBS Not to be republished

1. ನೀನು ಬಿಡುವಿನ ವೇಳೆಯಲ್ಲಿ ಏನು ಮಾಡುವೆ? ನಿನ್ನ ಹವ್ಯಾಸಗಳೇನು?

______________________ ______________________

2. ನಿನ್ನ ಕುಟುಂಬದವರ ಹವ್ಯಾಸಗಳನ್ನು ಗಮನಿಸು. ಅವುಗಳನ್ನು ಇಲ್ಲಿ ಬರೆ.

______________________________________________

______________________________________________

3. ನಿನ್ನ ಗೆಳೆಯರ ಹವ್ಯಾಸಗಳನ್ನು ಗಮನಿಸಿ ಬರೆ.

______________________ ______________________

______________________ ______________________

4. ನಿನ್ನ ಹವ್ಯಾಸಗಳೂ ನಿನ್ನ ಕುಟುಂಬದವರ ಹಾಗೂ ಗೆಳೆಯರ ಹವ್ಯಾಸಗಳೂ ಒಂದೇ ಆಗಿವೆಯೆ ಅಥವಾ ಬೇರೆಯೇ ಇವೆಯೆ? ಒಂದೇ ಆಗಿರುವ ಮತ್ತು ಬೇರೆಯಾಗಿರುವ ಹವ್ಯಾಸಗಳನ್ನು ಈ ಕೆಳಗಿನ ಚೌಕಗಳಲ್ಲಿ ಬರೆ.

| ಒಂದೇ ಹವ್ಯಾಸ | ಬೇರೆ ಹವ್ಯಾಸ |
|---|---|
| ____________ | ____________ |
| ____________ | ____________ |
| ____________ | ____________ |
| ____________ | ____________ |


5. ನೀನೇಕೆ ಈ ಹವ್ಯಾಸಗಳನ್ನು ಆರಿಸಿಕೊಂಡೆ?

ಚೌಕಗಳಲ್ಲಿ ಕೊಟ್ಟಿರುವ ಕಾರಣಗಳಲ್ಲಿ ನಿನ್ನ ಉತ್ತರಕ್ಕೆ (✓) ಗುರುತು ಹಾಕು.

| | | |
|---|---|---|
| ತುಂಬಾ ಇಷ್ಟ | ಅನುಕೂಲತೆ ಮತ್ತು ಅವಕಾಶ | ಸಂತೋಷ/ ಮನರಂಜನೆ |
| ಕುಟುಂಬದವರ ಹವ್ಯಾಸಗಳ ಪ್ರಭಾವ | ಗೆಳೆಯರ ಹವ್ಯಾಸಗಳ ಪ್ರಭಾವ | ಶಿಕ್ಷಕರ/ಹಿರಿಯರ ಮಾರ್ಗದರ್ಶನ |

©KTBS Not to be republished

## ಓದಿ–ತಿಳಿ



ಹತ್ತು ವರ್ಷದ ಬಾಲಕ ಸಲೀಂ ಕೆಳಗೆ ಬಿದ್ದಿದ್ದ ಹಕ್ಕಿ ಮರಿಯನ್ನು **ಗುಬ್ಬಚ್ಚಿ** ಎಂದು ತಿಳಿದ. ಮರಿಯನ್ನು ತನ್ನ ಕೈಗಳಿಂದ ಎತ್ತಿ ಸವರಿದ. ಆಗ ಅದರ ಎದೆಯ ಮೇಲಿನ ಹಳದಿ ಬಣ್ಣ ನೋಡಿದ. ಆ ಹಕ್ಕಿ ಗುಬ್ಬಚ್ಚಿ ಅಲ್ಲ ಎಂದು ತಿಳಿದ. ಅದು ಯಾವ ಹಕ್ಕಿ ಎಂದು ತಿಳಿಯುವ ಕುತೂಹಲ ಅವನಿಗೆ ಉಂಟಾಯಿತು. ಚಿಕ್ಕಪ್ಪ ಅಮಿರುದ್ದೀನ್ ಅವನನ್ನು ಮುಂಬೈನಲ್ಲಿರುವ ಹಕ್ಕಿ ಮತ್ತು ಪ್ರಾಣಿಗಳನ್ನು ಅಧ್ಯಯನ ಮಾಡುವ **ನ್ಯಾಚುರಲ್ ಹಿಸ್ಟರಿ ಸೊಸೈಟಿ** ಎಂಬಲ್ಲಿಗೆ ಕರೆದೊಯ್ದರು. ಬಾಲಕ ಅಲ್ಲಿನ ಕೆಲಸಗಳಿಂದ ಪ್ರಭಾವಿತನಾದ. ಹಕ್ಕಿಗಳನ್ನು ನೋಡುವ ಹವ್ಯಾಸವನ್ನು ಬೆಳೆಸಿಕೊಂಡ. ಇದೇ ಹವ್ಯಾಸ ದೊಡ್ಡವನಾದಂತೆ ಅಭ್ಯಾಸವಾಯಿತು. ಈ ಬಾಲಕ ಮುಂದೆ ಪಕ್ಷಿ ಅಧ್ಯಯನಕಾರರಾಗಿ ರೂಪುಗೊಂಡು ಹಕ್ಕಿಗಳ ಬಗ್ಗೆ ಹಲವು ಅಧ್ಯಯನಗಳನ್ನು ಮಾಡಿ ಪುಸ್ತಕಗಳನ್ನು ಬರೆದರು. ಇವರೇ ಹೆಸರಾಂತ ಪಕ್ಷಿಪ್ರೇಮಿ ಪದ್ಮಶ್ರೀ **ಸಲೀಂ ಅಲಿ**.



ಬಾಲಕ ಜಗದೀಶನಿಗೆ ತಾನು ನೋಡಿದ ಸಸ್ಯಗಳ ಮತ್ತು ಪ್ರಾಣಿಗಳ ಜೀವನಕ್ರಮವನ್ನು ತಿಳಿಯುವುದರಲ್ಲಿ ತುಂಬಾ ಆಸಕ್ತಿ. ತಾನೇ ಅನೇಕ ಗಿಡಗಳನ್ನು ಬೆಳೆಸಿದ. ಇವನ ತಂದೆ ತಾಯಿ ಜಗದೀಶನ ಈ ಹವ್ಯಾಸವನ್ನು ಪ್ರೋತ್ಸಾಹಿಸಿದರು. ಮುಂದೆ ಈ ಬಾಲಕ ಬೆಳೆಯುತ್ತಾ ಗಿಡಮರಗಳನ್ನು ಚೆನ್ನಾಗಿ ಅಭ್ಯಾಸ ಮಾಡಿ ಗಿಡಮರಗಳೂ ನೋವು ನಲಿವನ್ನು ಅನುಭವಿಸುತ್ತವೆ ಎಂಬುದನ್ನು ಜಗತ್ತಿಗೆ ತೋರಿಸಿದ. ಇವರೇ ಪ್ರಖ್ಯಾತ ಸಸ್ಯವಿಜ್ಞಾನಿ **ಡಾ|| ಜಗದೀಶ ಚಂದ್ರಬೋಸ್**.

ಹವ್ಯಾಸಗಳನ್ನೇ ಮುಂದೆ ವೃತ್ತಿಯನ್ನಾಗಿ ಮಾಡಿಕೊಂಡು ಹೆಸರು ಗಳಿಸಿದವರು ಇವರು. ಆಸಕ್ತಿ, ಪರಿಶ್ರಮ ಹಾಗೂ ಕುಟುಂಬದವರ ಸಹಕಾರ ಹಾಗೂ ಮಾರ್ಗದರ್ಶನದಿಂದ ಇದು ಇವರಿಗೆ ಸಾಧ್ಯವಾಯಿತು.

**ಚಟುವಟಿಕೆ :** ನಿನ್ನ ಹಿರಿಯರು ಮತ್ತು ಶಿಕ್ಷಕರಿಂದ ಇಂತಹ ಉದಾಹರಣೆಗಳನ್ನು ಕೇಳಿ ತಿಳಿದುಕೊ. ನೀನು ತಿಳಿದ ಇಂತಹ ಕಥೆಗಳನ್ನು ತರಗತಿಯಲ್ಲಿ ಹೇಳು.

©KTBS Not to be republished

ನೀನು ನಿನ್ನ ಕುಟುಂಬದ ಯಾರ ಹಾಗಿರಲು ಇಷ್ಟಪಡುವೆ? ಏಕೆ?

___________________________________________

___________________________________________

ನಿನಗೆ ಇಷ್ಟವಾದ ಹವ್ಯಾಸಗಳನ್ನು ಇಲ್ಲಿ ಬರೆ.

___________________________________________

___________________________________________

ನಿನಗೆ ಇಷ್ಟವಾದ ಹವ್ಯಾಸಗಳನ್ನು ಮುಂದುವರೆಸಲು ಕುಟುಂಬದವರ, ಹಿರಿಯರ, ಶಿಕ್ಷಕರ ಮಾರ್ಗದರ್ಶನ ಪಡೆ. ಇದರೊಂದಿಗೆ ಒಳ್ಳೆಯ ಅಭ್ಯಾಸಗಳನ್ನು ರೂಢಿಸಿಕೊ.

ಕೊಟ್ಟಿರುವ ಚಿತ್ರಗಳನ್ನು ನೋಡು. ಇದರಲ್ಲಿ ಯಾವುದನ್ನು ನೀನು ಮಾಡುವೆ? ಅದಕ್ಕೆ (✓) ಗುರುತು ಹಾಕು. ಏಕೆ ಮಾಡುವೆ ಎಂಬುದನ್ನು ಹೇಳು.

 ☐

 ☐

 ☐

 ☐

©KTBS Not to be republished

















©KTBS Not to be republished

- ನೀನು ಮಾಡಿರುವ ಯಾವುದಾದರೂ ಐದು ಒಳ್ಳೆಯ ಕೆಲಸಗಳನ್ನು ಬರೆ. ಇದು ಹೇಗೆ ಒಳ್ಳೆಯದು ಎಂದು ಹೇಳು.

______________________________

______________________________

______________________________

______________________________

______________________________



**ಓದಿ–ತಿಳಿ**

**ನನ್ನನ್ನು ಅಪ್ಪಿಕೋ!**

ನಮ್ಮ ರಾಜ್ಯದ ಶಿರಸಿ ತಾಲ್ಲೂಕಿನ ಸಾಲ್ಕಣಿ ಒಂದು ಸಣ್ಣ ಗ್ರಾಮ. ಈ ಗ್ರಾಮದ ಸುತ್ತ ಮುತ್ತ ದೊಡ್ಡ ಕಾಡು ಇದೆ. ಒಂದು ದಿನ ಕಾಡಿನ ಮರಗಳನ್ನು ಕಡಿಯಲು ಪಟ್ಟಣದ ಜನ ಬಂದರು. ಸುದ್ದಿ ತಿಳಿದ ಗ್ರಾಮದವರು ಕಾಡಿನ ಕಡೆಗೆ ಓಡಿದರು. ಆ ಕಾಡಿನ ಒಂದೊಂದು ಮರವನ್ನು ಒಬ್ಬೊಬ್ಬರು ಅಪ್ಪಿಕೊಂಡು ನಿಂತರು. ಮರ ಕಡಿಯಲು ಬಂದವರು ಇದನ್ನು ನೋಡಿ ಬೆರಗಾದರು. ಮರ ಕಡಿಯಲಾರದೆ ಮರಳಿ ಹೋದರು.ಮರವನ್ನು ಅಪ್ಪಿಕೊಂಡು ಗ್ರಾಮದ ಜನ ಕಾಡನ್ನು ಉಳಿಸಿದರು.


**ಕಾಡನ್ನು ಉಳಿಸು, ಕಾಡನ್ನು ಬೆಳೆಸು, ಕಾಡನ್ನು ಮಿತವಾಗಿ ಬಳಸು.**

©KTBS Not to be republished

**ಬಿಟ್ಟ ಸ್ಥಳವನ್ನು ಸರಿಯಾದ ಪದಗಳಿಂದ ತುಂಬಿಸು.**

1. ಸಾಲ್ಕಣಿ ಗ್ರಾಮದ ಸುತ್ತ ______________ ಇದೆ.
2. ಪಟ್ಟಣದ ಜನ ಕಾಡಿನ ಮರಗಳನ್ನು ______________ ಬಂದರು.
3. ಗ್ರಾಮದ ಜನ ಮರಗಳನ್ನು ______________
4. ಗ್ರಾಮದ ಜನ ಮರಗಳನ್ನು ಅಪ್ಪಿಕೊಂಡು ______________ ಉಳಿಸಿದರು.
5. ಕಾಡನ್ನು ______________, ______________ ಬೆಳೆಸು.

ನೀನು ಒಳ್ಳೆಯ ಹುಡುಗ/ಹುಡುಗಿ ಆಗಬೇಕೇ? ಹೇಗೆ? ಆಡಿ ತಿಳಿ.




ದಾಳ ಮತ್ತು ಕಾಯಿಗಳಿಂದ ಆಟ ಆಡು. ದಾಳ ಹಾಕಿದಾಗ ಬಂದ ಸಂಖ್ಯೆಯಷ್ಟು ಮನೆಗಳನ್ನು ಎಣಿಸಿ ನಿನ್ನ ಕಾಯಿ ಇಡು. ಏಣಿ ಇರುವ ಮನೆಗೆ ನಿನ್ನ ಕಾಯಿ ಬಂದಾಗ ಅಲ್ಲಿ ಏನು ಬರೆದಿದೆ ಎಂದು ಓದಿ ಮೇಲಕ್ಕೆ ಏರು. ಹಗ್ಗದ ಮೇಲಿನ ತುದಿಗೆ ಇರುವ ಮನೆಗೆ ನಿನ್ನ ಕಾಯಿ ಬಂದಾಗ ಕೆಳಗೆ ಇಳಿ. ಏಕೆ ಎಂದು ಓದಿ ತಿಳಿ. ಓದಿದ ಒಳ್ಳೆಯ ಅಂಶಗಳನ್ನು ನೀನು ಅಳವಡಿಸಿಕೊಂಡರೆ ನೀನು ಒಳ್ಳೆಯ ಹುಡುಗ/ಹುಡುಗಿ ಆಗುವೆ. ಆಟ ಆಡು. ಒಳ್ಳೆಯದನ್ನೇ ಮಾಡು.

© KTBS Not to be republished

## ಪಾಠ – 18

# ಇವರೂ ನಮ್ಮಂತೆ

**ಈ ಪಾಠವನ್ನು ಕಲಿತ ನಂತರ ನೀನು,**

- ವಿಶೇಷ ಅವಶ್ಯಕತೆಯುಳ್ಳವರ ಬಗ್ಗೆ ಸಂವೇದನಾಶೀಲತೆಯನ್ನು ಹೊಂದಿ ಸಹಾಯ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳುವೆ.





ಇಲ್ಲಿ ಮೂರು ಸಂದರ್ಭಗಳನ್ನು ತೋರಿಸಿದೆ. ಈ ಸಂದರ್ಭಗಳಲ್ಲಿ ನೀನು ಇದ್ದರೆ ಏನು ಮಾಡುವೆ?

______________________________________________

______________________________________________

______________________________________________

ಆಶಾ ಮತ್ತು ಲತಾ ಗೆಳತಿಯರು. ಇವರು ಮೂರನೇ ತರಗತಿಯಲ್ಲಿ ಕಲಿಯುತ್ತಿದ್ದಾರೆ. ಲತಾಗೆ ಕಣ್ಣು ಕಾಣುವುದಿಲ್ಲ. ಬ್ರೈಲ್ ಲಿಪಿಯಿರುವ ಪುಸ್ತಕವನ್ನು ಓದುತ್ತಾಳೆ ಮತ್ತು ಬ್ರೈಲ್ ಅಕ್ಷರಗಳಲ್ಲಿ ಬರೆಯುತ್ತಾಳೆ. ಹಾಡನ್ನು ತುಂಬಾ ಚೆನ್ನಾಗಿ ಹಾಡುತ್ತಾಳೆ. ಇವಳ ಕೆಲಸಗಳಿಗೆ ಆಶಾ ಹಾಗೂ ತರಗತಿಯ ಎಲ್ಲರೂ ನೆರವಾಗುತ್ತಾರೆ. ಇವಳು ತುಂಬಾ ಖುಷಿಯಿಂದ ಶಾಲೆಗೆ ಬರುತ್ತಾಳೆ.

- ನೀನು ಲತಾಳ ಗೆಳೆಯ/ಗೆಳತಿಯಾಗಿದ್ದರೆ ಅವಳ ಯಾವ ಯಾವ ಕೆಲಸಗಳಿಗೆ ಸಹಾಯ ಮಾಡುವೆ?

__________________ __________________

__________________ __________________

©KTBS Not to be republished

## ಓದಿ–ತಿಳಿ



**ಬ್ರೈಲ್ :** ಮೂರು ವರ್ಷದ ಪುಟ್ಟ ಬಾಲಕನೊಬ್ಬ ತನ್ನ ಅಪ್ಪನ ಚೂಪಾದ ವಸ್ತುವಿನೊಂದಿಗೆ ಆಟವಾಡುತ್ತಿದ್ದ. ಅದರ ಚೂಪಾದ ತುದಿಗಳು ಅವನ ಕಣ್ಣುಗಳಿಗೆ ಚುಚ್ಚಿತು. ಇದರಿಂದ ಅವನು ತನ್ನ ದೃಷ್ಟಿ ಕಳೆದುಕೊಂಡ. ಓದಬೇಕು ಎಂಬ ಆಸೆ ಇದ್ದ ಬಾಲಕನಿಗೆ ಇದರಿಂದ ಓದಲು ಸಾಧ್ಯವಾಗಲಿಲ್ಲ. ಇವನು ಬೆಳೆದಂತೆಲ್ಲಾ ಓದುವುದರ ಬಗ್ಗೆಯೇ ಯೋಚಿಸುತ್ತಿದ್ದ. ಓದಲು ಮತ್ತು ಬರೆಯಲು ಬೇರೆ ಬೇರೆ ವಿಧಾನಗಳನ್ನು ಯತ್ನಿಸಿದ. ಕೊನೆಗೆ ಅಕ್ಷರಗಳನ್ನು ಮುಟ್ಟಿ ತಿಳಿಯುವ ವಿಧಾನದಿಂದ ಓದಲು ಮತ್ತು ಬರೆಯಲು ಸಾಧ್ಯ ಎಂಬುದನ್ನು ಕಂಡುಕೊಂಡ. ಇದನ್ನೇ ಅಭಿವೃದ್ಧಿಗೊಳಿಸಿ ದೃಷ್ಟಿಯ ಸಮಸ್ಯೆ ಇರುವವರು ಕಲಿಯಲು ಅನುಕೂಲ ಮಾಡಿಕೊಟ್ಟ. ಇವರೇ **ಲೂಯಿಸ್ ಬ್ರೈಲ್**. ಇವರು ಬಳಸಿದ ಅಕ್ಷರಗಳೇ **ಬ್ರೈಲ್ ಲಿಪಿ**.

ದಪ್ಪ ಹಾಳೆಯ ಮೇಲೆ ಚುಚ್ಚುವ ವಸ್ತುವಿನಿಂದ ಚುಕ್ಕೆಗಳನ್ನು ಹಾಕುತ್ತಾರೆ. ಆನಂತರ ಇದನ್ನು ತಿರುವಿದಾಗ ಚುಕ್ಕೆಗಳು ಉಬ್ಬಾಗಿ ಮೂಡಿರುತ್ತವೆ. ಇದೇ ಬ್ರೈಲ್. ಇದನ್ನು ಮುಟ್ಟಿ ಚುಕ್ಕೆಗಳ ಸಂಖ್ಯೆ ಹಾಗೂ ಅವುಗಳನ್ನು ಜೋಡಿಸಿರುವ ರೀತಿಯಿಂದ ಕಣ್ಣಿನ ಸಹಾಯವಿಲ್ಲದೆಯೂ ಅಕ್ಷರಗಳನ್ನು ಗುರುತಿಸಬಹುದು.

ಬ್ರೈಲ್‌ನಲ್ಲಿ ಅಕ್ಷರ ಗುರುತಿಸುವ ವಿಧಾನಕ್ಕೆ ಉದಾಹರಣೆ ಇಲ್ಲಿದೆ.

| | | | | | |
|---|---|---|---|---|---|
| | . | • | | . | • |
| ಅ | . | . | ಆ | . | • |
| | . | . | | • | . |

ಆರು ಚುಕ್ಕೆಗಳಲ್ಲಿ 'ಅ' ಮತ್ತು 'ಆ' ಗುರುತಿಸಿದೆ. 'ಅ' ನಲ್ಲಿ 6 ಚುಕ್ಕೆಗಳಲ್ಲಿ ಒಂದು ಹೆಚ್ಚು ಉಬ್ಬಿರುತ್ತದೆ. 'ಆ' ನಲ್ಲಿ ಮೂರು ಚುಕ್ಕೆಗಳು ಉಬ್ಬಿರುತ್ತವೆ. ಈ ರೀತಿ 6 ಚುಕ್ಕೆಗಳಲ್ಲಿ ಅಕ್ಷರಗಳನ್ನು ಗುರುತಿಸುತ್ತಾರೆ.

© KTBS Not to be republished

ಗೀತಾ ಜಾಣ ಹುಡುಗಿ. ಶಾಲೆಯಲ್ಲಿ ಇವಳು ಎಲ್ಲರೊಂದಿಗೂ ಸೇರಿ ಆಟ ಆಡುತ್ತಾಳೆ. ಇವಳಿಗೆ ಕಿವಿ ಕೇಳುವುದಿಲ್ಲ ಮತ್ತು ಮಾತನಾಡಲೂ ಆಗುವುದಿಲ್ಲ. ಇವಳ ಗೆಳೆಯರಿಗೆ ಗೀತಾಳ ಸನ್ನೆಗಳು ತಿಳಿದಿವೆ.

ನಿನಗೆ ಏನು ಬೇಕು ಎಂದು ನಿನ್ನ ಸ್ನೇಹಿತರಿಗೆ ಸನ್ನೆಗಳ ಮೂಲಕ ತಿಳಿಸಲು ಪ್ರಯತ್ನಿಸು.

ಇಲ್ಲಿ ಕೊಟ್ಟಿರುವ ಸನ್ನೆಗಳು ಏನನ್ನು ತಿಳಿಸುತ್ತವೆ? ಊಹಿಸಿ ಬರೆ.

















©KTBS Not to be republished

______________________ ______________________

**ಚಟುವಟಿಕೆ :**

- ನಾವು ಕೆಲವು ಸಂದರ್ಭಗಳಲ್ಲಿ ಮಾತನಾಡದೆ ಸನ್ನೆ ಮೂಲಕ ವಿಚಾರಗಳನ್ನು ತಿಳಿಸುತ್ತೇವೆ. ಆ ಸಂದರ್ಭಗಳನ್ನೂ, ಸನ್ನೆಗಳನ್ನೂ ಬರೆ.

  ಉದಾಹರಣೆ : ಶಿಕ್ಷಕರು ಪಾಠ ಮಾಡುವಾಗ ನಿನ್ನ ಗೆಳೆಯ/ಗೆಳತಿ ಮಾತನಾಡಿದರೆ ಸುಮ್ಮನಿರಲು ಮಾಡುವ ಸನ್ನೆ–ಬಾಯಿ ಮೇಲೆ ಒಂದು ಬೆರಳು.

______________________________________________

______________________________________________

______________________________________________

______________________________________________

______________________________________________

- ಈ ಕೆಳಗಿನ ಹೇಳಿಕೆಗಳನ್ನು ಓದಿ ಸೂಕ್ತ ಸನ್ನೆಗಳ ಮೂಲಕ ತಿಳಿಸು.

| | | |
|---|---|---|
| ನೀರು ಬೇಕು | ಊಟ ಬೇಕು | ನಿದ್ರೆ ಬರುತ್ತಿದೆ |
| ಗಂಟೆ ಬಾರಿಸಿತು | ಅಪ್ಪ ಬರುತ್ತಾರೆ | ಕೈ ನೋಯುತ್ತಿದೆ |
| ಚೆಂಡಾಟ ಆಡು | ಹಗ್ಗದಾಟ ಆಡು | ನಾನು ನರ್ತಿಸುವೆ |

©KTBS Not to be republished

ರವಿಗೆ ನಡೆಯಲು ಕಾಲಿನ ತೊಂದರೆ ಇದೆ. ಅವನು ಈಗಷ್ಟೆ ಶಾಲೆಗೆ ಸೇರಿದ್ದಾನೆ. ರವಿ ನಿನ್ನ ಶಾಲೆಗೆ ಸೇರಿದರೆ ನೀನು ಅವನಿಗೆ ಹೇಗೆ ನೆರವಾಗುವೆ?

____________________

____________________

____________________

____________________

ನಿನ್ನ ಸುತ್ತ ಮುತ್ತ ಗಮನಿಸು. ನಮ್ಮಂತೆಯೇ ಇರುವ ಹಲವರಿಗೆ ದೈಹಿಕ ತೊಂದರೆಗಳು ಇರುವುದನ್ನು ನೋಡುವೆ. ಇವರಿಗೆ ವಿಶೇಷ ಸೌಲಭ್ಯಗಳು, ಅಗತ್ಯಗಳು ಬೇಕು. ಅವರ ಕೆಲಸಗಳಿಗೆ ನೆರವು ಬೇಕು. ಅದಕ್ಕೆ ಸ್ನೇಹಿತರ ಸಹಕಾರ ಮುಖ್ಯ.

ವಿಶೇಷ ಅಗತ್ಯ ಇರುವ ಹಲವು ಜನರು ತಮ್ಮ ಶ್ರಮ ಹಾಗೂ ಆಸಕ್ತಿಯಿಂದ ಹಲವು ಸಾಧನೆಗಳನ್ನು ಮಾಡಿದ್ದಾರೆ. ಹೆಸರು ಗಳಿಸಿದ್ದಾರೆ. ಅಂತಹ ವ್ಯಕ್ತಿಗಳ ಬಗ್ಗೆ ಹಿರಿಯರಿಂದ ಕೇಳಿ ತಿಳಿದುಕೊ. ಅಂತಹ ಒಬ್ಬ ವ್ಯಕ್ತಿಯ ಬಗ್ಗೆ 4 ಸಾಲುಗಳನ್ನು ಹೇಳು.



**ಓದಿ–ತಿಳಿ**

### ಡಾ॥ ಪುಟ್ಟರಾಜ ಗವಾಯಿ

ಕಲೆ, ಸಾಹಿತ್ಯ, ಸಂಗೀತ, ನಾಟಕಗಳ ಮೂಲಕ ಹೆಸರು ಗಳಿಸಿದ ವ್ಯಕ್ತಿ **ಡಾ॥ ಪುಟ್ಟರಾಜ ಗವಾಯಿ.**



ಬಾಲ್ಯದಲ್ಲಿಯೇ ತಮ್ಮ ಎರಡು ಕಣ್ಣುಗಳನ್ನೂ ಕಳೆದುಕೊಂಡ ಗವಾಯಿಯವರು, ಪಂಚಾಕ್ಷರಿ ಗವಾಯಿಯವರ ಶಿಷ್ಯರಾದರು. ಶ್ರೇಷ್ಠ ಗಾಯಕರಾದ ಇವರು ಎಲ್ಲಾ ಸಂಗೀತ ವಾದ್ಯಗಳನ್ನು ನುಡಿಸುತ್ತಿದ್ದರು. ಬ್ರೈಲ್ ಲಿಪಿಯನ್ನು ಕಲಿತ ಇವರು 64ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರ ಬಳಿ 15 ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಕಲಿತಿದ್ದಾರೆ. ಇವರು ಸಮಾಜಕ್ಕೆ ನೀಡಿದ ಕೊಡುಗೆ ಅಪಾರ. ಇವರು 2010ರಲ್ಲಿ ನಿಧನರಾದರು.

©KTBS Not to be republished

## ಪಾಠ – 19

# ಜಾತ್ರೆ ಬಂತು ಜಾತ್ರೆ

**ಈ ಪಾಠವನ್ನು ಕಲಿತ ನಂತರ ನೀನು,**

- ಸಮುದಾಯದಲ್ಲಿ ನಡೆಯುವ ಹಬ್ಬ, ಸಮಾರಂಭ ಮತ್ತು ಜಾತ್ರೆಗಳಲ್ಲಿ ಭಾಗವಹಿಸುವೆ ಮತ್ತು ಇಲ್ಲಿ ಕಂಡುಬರುವ ಪರಸ್ಪರ ಸಹಕಾರವನ್ನು ಗುರುತಿಸುವೆ.



ನಾನು ರಮೇಶ. ನಮಗೆ ದೀಪಾವಳಿ ದೊಡ್ಡಹಬ್ಬ. ಈ ಹಬ್ಬವನ್ನು ಮೂರು ದಿನಗಳ ಕಾಲ ಆಚರಿಸುತ್ತೇವೆ. ಮೊದಲನೆಯ ದಿನ ನರಕ ಚತುರ್ದಶಿ. ಎರಡನೇ ದಿನ ಗೋಪೂಜೆ ಮತ್ತು ಲಕ್ಷ್ಮೀಪೂಜೆ, ಮೂರನೇ ದಿನ ಬಲಿಪಾಡ್ಯಮಿ. ಮೂರೂ ದಿನಗಳು ಮನೆಯ ಮುಂದೆ ದೀಪಹಚ್ಚಿ, ಸಿಹಿತಿಂದು, ನೆರೆ–ಹೊರೆಯವರಿಗೂ ಹಂಚಿ ಸಂತೋಷಪಡುತ್ತೇವೆ ಮತ್ತು ಪಟಾಕಿ ಹೊಡೆಯುತ್ತೇವೆ. ಈ ಹಬ್ಬ ಬಂದರೆ ನಮಗೆ ತುಂಬಾ ಖುಷಿ.





ನಾನು ನಗೀನಾ. ನಮಗೆ ರಂಜಾನ್ ಮುಖ್ಯ ಹಬ್ಬ. ರಂಜಾನ್ ತಿಂಗಳು ಹಗಲಿನಲ್ಲಿ ಉಪವಾಸವಿದ್ದು, ಕೊನೆಯ ದಿನ ಹಬ್ಬವನ್ನು ಆಚರಿಸುತ್ತೇವೆ. ಅಂದು ನಮ್ಮ ಮನೆಯಲ್ಲಿ ಹಲವು ಬಗೆಯ ತಿನಿಸುಗಳು ಮತ್ತು ಸಿಹಿಯನ್ನು ಮಾಡುತ್ತಾರೆ. ಸ್ನೇಹಿತರು, ಅಕ್ಕಪಕ್ಕದ ಮನೆಯವರು ಶುಭ ಕೋರುತ್ತಾರೆ. ನಾವು ಸಿಹಿಯನ್ನು ತಿಂದು, ನೆರೆ–ಹೊರೆಯವರಿಗೂ ಹಂಚಿ ಸಂತೋಷಪಡುತ್ತೇವೆ.



©KTBS Not to be republished



ನಾನು ರಾಬಿನ್. ನಮಗೆ ಕ್ರಿಸ್‌ಮಸ್ ದೊಡ್ಡ ಹಬ್ಬ. ಈ ಹಬ್ಬದಂದು ಕ್ರಿಸ್‌ಮಸ್ ಮರವನ್ನು (ಕೊಂಬೆಗಳು ಹರಡದ ಒಂದು ಬಗೆಯ ಸಣ್ಣ ಮರ) ಅಲಂಕರಿಸಿ, ಅದಕ್ಕೆ ಉಡುಗೊರೆಗಳನ್ನು ತೂಗು ಹಾಕುತ್ತೇವೆ. ಸ್ನೇಹಿತರು, ಬಂಧುಗಳು ಈ ಹಬ್ಬದಲ್ಲಿ ನಮ್ಮ ಮನೆಗೆ ಬರುತ್ತಾರೆ. ಶುಭಾಶಯ ಪತ್ರಗಳನ್ನು, ಸಿಹಿಯನ್ನು ಹಂಚಿ ಸಂತೋಷಪಡುತ್ತೇವೆ.



ರಮೇಶ, ನಗೀನಾ, ರಾಬಿನ್ ತಮ್ಮ ಮನೆಯಲ್ಲಿ ಆಚರಿಸುವ ಹಬ್ಬಗಳ ಬಗ್ಗೆ ಹೇಳಿದ್ದಾರೆ. ನಿನ್ನ ಮನೆಯಲ್ಲಿ ಯಾವ ಯಾವ ಹಬ್ಬಗಳನ್ನು ಆಚರಿಸುವೆ?

ಹಬ್ಬದ ದಿನ ನೀನು ಮನೆಯನ್ನು ಹೇಗೆ ಅಲಂಕರಿಸುವೆ? ಯಾವ ಯಾವ ಕೆಲಸಗಳನ್ನು ಮಾಡುವೆ?

ಮನೆಯಲ್ಲಿ ಆಚರಿಸುವ ಒಂದು ದೊಡ್ಡ ಹಬ್ಬದ ಬಗ್ಗೆ 4 ಸಾಲುಗಳನ್ನು ಬರೆ.

©KTBS Not to be republished

ಹಬ್ಬದ ದಿನ ನಡೆಯುವ ವಿಶೇಷ ಮನರಂಜನೆ ಕಾರ್ಯಕ್ರಮಗಳನ್ನು ಪಟ್ಟಿ ಮಾಡು. ಅವುಗಳನ್ನು ಯಾರು, ಎಲ್ಲಿ ಮಾಡುತ್ತಾರೆ ಎಂಬುದನ್ನು ಬರೆ.

| ಕಾರ್ಯಕ್ರಮ | ಯಾರು? | ಎಲ್ಲಿ? |
|---|---|---|
| | | |
| | | |
| | | |
| | | |
| | | |

ಹಬ್ಬದ ದಿನ ನಿನ್ನ ಮನೆಗೆ ಯಾರು ಯಾರು ಬರುತ್ತಾರೆ?

_______________________________________________

ಯಾವ ಯಾವ ತಿನಿಸುಗಳನ್ನು ನಿನ್ನ ಮನೆಯಲ್ಲಿ ಮಾಡುತ್ತಾರೆ?

_______________________________________________

_______________________________________________

ನಿನಗೆ ಯಾವ ತಿನಿಸು ಇಷ್ಟ? ಏಕೆ? ನಿನ್ನ ಸ್ನೇಹಿತರಿಗೆ ಹೇಳು.

_______________________________________________



**ಓದಿ–ತಿಳಿ**

- ಕುಟುಂಬದವರು, ಬಂಧುಗಳು, ಸ್ನೇಹಿತರು ಮತ್ತು ನೆರೆಹೊರೆಯವರನ್ನು ಹಬ್ಬಗಳು ಒಂದುಗೂಡಿಸುತ್ತವೆ.

ನಿಮ್ಮ ಮನೆಯಲ್ಲಿ ಆಚರಿಸುವ ಹಬ್ಬಗಳ ಬಗ್ಗೆ ಹೇಳಿದೆ. ನಿಮ್ಮ ಊರಿನವರೆಲ್ಲಾ ಸೇರಿ ಆಚರಿಸುವ ಹಬ್ಬಗಳು ಯಾವುವು? ಇಲ್ಲಿ ಬರೆ.

__________, __________, __________, __________,

__________, __________, __________, __________ .

©KTBS
Not to be republished

## ಆಟ–ಆಡು

**ಆಟ ಆಡು, ಜಾತ್ರೆ ನೋಡು.** ಈ ಪಟದಲ್ಲಿ 25 ಮನೆಗಳಿವೆ. ದಾಳವನ್ನು ಹಾಕು. ನಿನ್ನ ಕಾಯಿ ನಡೆಸು. ನಿನ್ನ ಕಾಯಿ ಇಡುವ ಚೌಕದಲ್ಲಿರುವ ಚಿತ್ರ ನೋಡು. ಅದು ಏನೆಂದು ನಿನ್ನ ನೋಟ್ ಪುಸ್ತಕದಲ್ಲಿ ಬರೆ. ಯಾವ ಚೌಕಗಳಿಗೆ ನಿನ್ನ ಕಾಯಿ ಹೋಗಿಲ್ಲ ಎನ್ನುವುದನ್ನು ಕೊನೆಯಲ್ಲಿ ಬರೆ. ಸ್ನೇಹಿತರೊಂದಿಗೂ ಈ ಆಟ ಆಡು.




ನಿಮ್ಮ ಊರಿನಲ್ಲಿ ಯಾವ ಜಾತ್ರೆ ನಡೆಯುತ್ತದೆ?

ನೀನು ನೋಡಿರುವ ಜಾತ್ರೆಯನ್ನು ಕುರಿತು ಹೇಳು.

© KTBS Not to be republished

ಇಲ್ಲಿ ಒಂದು ಜಾತ್ರೆಯ ಸನ್ನಿವೇಶ ಇದೆ. ಇಲ್ಲಿ ನಡೆಯುತ್ತಿರುವ ಕೆಲಸಗಳನ್ನು ನೋಡಿ ಅವು ಯಾವುವು ಎಂಬುದನ್ನು ಗುರುತಿಸು. ಅಲ್ಲಿ ಕೊಟ್ಟಿರುವ ಜಾಗದಲ್ಲಿ ಬರೆ. ಯಾರು ಯಾವ ಕೆಲಸಗಳನ್ನು ಮಾಡುತ್ತಿದ್ದಾರೆ? ಹೇಳು.



**ಓದಿ–ತಿಳಿ**

ಊರಿನಲ್ಲಿರುವ ಎಲ್ಲರೂ ಸೇರಿ ಕೆಲವು ಹಬ್ಬಗಳನ್ನು ಆಚರಿಸುತ್ತಾರೆ. ಜಾತ್ರೆಗಳು ಸಹ ಊರ ಹಬ್ಬಗಳೇ. ಜಾತ್ರೆಗೆ ಉತ್ಸವ, ಉರುಸ್ ಎಂದೂ ಕರೆಯುತ್ತಾರೆ. ಊರಹಬ್ಬಗಳಲ್ಲಿ ಊರಿನ ಎಲ್ಲ ಜನರೂ ಪಾಲ್ಗೊಂಡು ಕೆಲಸ ಮಾಡುತ್ತಾರೆ, ಆನಂದಿಸುತ್ತಾರೆ.

**ಹಾಡಿ–ನಲಿ**

ನಾನು ಹೋದೆ ಜಾತ್ರೆಗೆ
ನಮ್ಮ ಊರ ಜಾತ್ರೆಗೆ
ಗೆಳೆಯರೆಲ್ಲ ಅಲ್ಲಿಗೆ
ಸೇರಿದೆವು ಒಟ್ಟಿಗೆ
ಝುಗಝುಗಿಸುವ ಬೆಳಕಿಗೆ
ಬೆರಗಾದೆವು ಆ ರಂಗಿಗೆ
ಸಿಹಿ ಸಿಹಿ ಮಿಠಾಯಿಗೆ
ಹಾಕಿದೆವು ಮುತ್ತಿಗೆ.

©KTBS Not to be republished

**ಹಾಡಿ-ನಲಿ**

ಅಭಿನಯದೊಂದಿಗೆ ಈ ಹಾಡನ್ನು ಹೇಳು

ಜಾತ್ರೆಗೋಗಿದ್ದೆ, ಜಾತ್ರೆಗೋಗಿದ್ದೆ
ಏನ್ ತಂದೆ? ಏನ್ ತಂದೆ?
ಕತ್ತರಿ ತಂದೆ, ಕತ್ತರಿ ತಂದೆ
ಜಾತ್ರೆಗೋಗಿದ್ದೆ, ಜಾತ್ರೆಗೋಗಿದ್ದೆ
ಏನ್ ತಂದೆ? ಏನ್ ತಂದೆ?
ಗಂಟೆ ತಂದೆ, ಗಂಟೆ ತಂದೆ
ಜಾತ್ರೆಗೋಗಿದ್ದೆ, ಜಾತ್ರೆಗೋಗಿದ್ದೆ
ಏನ್ ತಂದೆ? ಏನ್ ತಂದೆ?
ಸೈಕಲ್ ತಂದೆ, ಸೈಕಲ್ ತಂದೆ
ಜಾತ್ರೆಗೋಗಿದ್ದೆ, ಜಾತ್ರೆಗೋಗಿದ್ದೆ
ಏನ್ ತಂದೆ? ಏನ್ ತಂದೆ?
ಸರ ತಂದೆ, ಸರ ತಂದೆ
ಜಾತ್ರೆಗೋಗಿದ್ದೆ, ಜಾತ್ರೆಗೋಗಿದ್ದೆ
ಏನ್ ತಂದೆ? ಏನ್ ತಂದೆ?
ಡಾಬ್ ತಂದೆ, ಡಾಬ್ ತಂದೆ.

(ಈ ಹಾಡನ್ನು ಒಂದು ಸಾಲಿನ ಅಭಿನಯದೊಂದಿಗೆ ಮತ್ತೊಂದು ಸಾಲಿನ ಅಭಿನಯ ಸೇರಿಸುತ್ತಾ ಹಾಡಬೇಕು)

ಈ ರೀತಿಯ ಜಾತ್ರೆಯ ಕುರಿತಾದ ಕವನಗಳನ್ನು ಸಂಗ್ರಹಿಸು.

©KTBS Not to be republished

# ಪಾಠ – 20

# ನನ್ನ ಒಂದು ದಿನ

**ಈ ಪಾಠವನ್ನು ಕಲಿತ ನಂತರ ನೀನು,**

- ನಿನ್ನ ದಿನನಿತ್ಯದ ಕೆಲಸದ ಪಟ್ಟಿ ತಯಾರಿಸುವೆ.
- ಕೆಲವು ಮಕ್ಕಳು ದುಡಿಮೆಯಲ್ಲಿ ತೊಡಗಿರಬೇಕಾದ ಅನಿವಾರ್ಯ ಪರಿಸ್ಥಿತಿಯನ್ನು ಅರಿಯುವೆ.

ರಾಮು ಮೂರನೇ ತರಗತಿ ಹುಡುಗ. ಇವನು ದಿನನಿತ್ಯ ಮಾಡುವ ಕೆಲಸಗಳನ್ನು ತೋರಿಸಿದೆ. ಈ ಚಿತ್ರಗಳನ್ನು ನೋಡಿ ಕೆಲಸಗಳನ್ನು ಬರೆ.









©KTBS Not to be republished













© KTBS Not to be republished





________________ ________________

ರಾಮು ಮಾಡುವ ಕೆಲಸಗಳನ್ನು ತಿಳಿದಿರುವೆ. ನೀನು ಬೆಳಿಗ್ಗೆಯಿಂದ ರಾತ್ರಿಯವರೆಗೂ ಮಾಡುವ ಕೆಲಸಗಳನ್ನು ಕ್ರಮವಾಗಿ ಬರೆದು ಪಟ್ಟಿ ತಯಾರಿಸು.

1 ____________________________

2 ____________________________

3 ____________________________

4 ____________________________

5 ____________________________

6 ____________________________

7 ____________________________

8 ____________________________

9 ____________________________

10 ____________________________

ನಿನ್ನ ಗೆಳೆಯರ ಪಟ್ಟಿಯೊಂದಿಗೆ ನಿನ್ನ ಪಟ್ಟಿಯನ್ನು ಹೋಲಿಸಿ ನೋಡು. ಏನಾದರೂ ಬದಲಾವಣೆ ಇದೆಯೆ ಗಮನಿಸು.

©KTBS Not to be republished


ಇಲ್ಲಿ ಹಲವಾರು ಕೆಲಸಗಳನ್ನು ಕೊಟ್ಟಿದೆ. ಅವುಗಳನ್ನು ಅನುಕ್ರಮವಾಗಿ ಬರೆ.


| | | |
|---|---|---|
| 1. ರಾತ್ರಿ ಊಟ ಮಾಡಿ ಮಲಗುವೆ. | 1) | ________________ |
| 2. ಶಾಲೆಗೆ ಹೋಗುವೆ. | 2) | ________________ |
| 3. ಗಿಡಗಳಿಗೆ ನೀರು ಹಾಕುವೆ. | 3) | ________________ |
| 4. ಸ್ನಾನ ಮಾಡಿ ತಿಂಡಿ ತಿನ್ನುವೆ. | 4) | ________________ |
| 5. ಬೆಳಿಗ್ಗೆ ಬೇಗನೆ ಏಳುವೆ. | 5) | ________________ |
| 6. ಶಾಲೆಯಲ್ಲಿ ಹೇಳಿಕೊಟ್ಟ ಪಾಠ ಮತ್ತೊಮ್ಮೆ ಓದುವೆ. | 6) | ________________ |
| 7. ಸಂಜೆ ಸ್ನೇಹಿತರೊಂದಿಗೆ ಆಡುವೆ. | 7) | ________________ |

**ಚಟುವಟಿಕೆ :** ಇಲ್ಲಿ ಸುಮಾಳ ಚಿತ್ರಕಥೆ ಕೊಟ್ಟಿದೆ. ಇದನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು.




©KTBS Not to be republished







©KTBS Not to be republished

ಸುಮಾಳನ್ನು ಶಾಲೆಗೆ ಕರೆಯಲು ಯಾರು ಬಂದರು?

ಸುಮ ಶಾಲೆಗೆ ಹೋಗದೆ ಕೆಲಸಕ್ಕೆ ಹೋದಳು. ಏಕೆ?

ಸುಮ ಮತ್ತೆ ಶಾಲೆಗೆ ಯಾವಾಗ ಹೋದಳು?

ಈ ಚಿತ್ರಗಳನ್ನು ಗಮನಿಸು.

ಚಿತ್ರಗಳಲ್ಲಿರುವ ಮಕ್ಕಳು ಯಾವ ಕೆಲಸಗಳನ್ನು ಮಾಡುತ್ತಿದ್ದಾರೆ?

ಈ ಕೆಲಸಗಳನ್ನು ಮಾಡುವಾಗ ಮಕ್ಕಳಿಗೆ ತೊಂದರೆಯಾಗುತ್ತದೆಯೆ? ಯಾವ ರೀತಿಯ ತೊಂದರೆಗಳು ಉಂಟಾಗಬಹುದು? ಹಿರಿಯರನ್ನು ಕೇಳಿ ಬರೆ.

©KTBS Not to be republished

ಇವರು ಏಕೆ ಕೆಲಸ ಮಾಡುತ್ತಿದ್ದಾರೆ? ಕಾರಣಗಳನ್ನು ಊಹಿಸಿ ಬರೆ.

**ಓದಿ-ತಿಳಿ**

ಚಿಕ್ಕ ವಯಸ್ಸಿನಲ್ಲಿ ಕೆಲಸಗಳಲ್ಲಿ ತೊಡಗುವ ಮಕ್ಕಳು

- ಶಾಲೆ, ಕಲಿಕೆ, ಆಟಗಳಿಂದ ದೂರವಾಗುತ್ತಾರೆ. ಅವರಿಗೆ ಸರಿಯಾದ ಶಿಕ್ಷಣ ಸಿಗುವುದಿಲ್ಲ.
- ಹಲವು ಕೆಲಸಗಳು ಮಕ್ಕಳಿಗೆ ಅಪಾಯಕಾರಿ. ಹೀಗಾಗಿ ಅವರ ಆರೋಗ್ಯಕ್ಕೆ ಹಾನಿ ಆಗಬಹುದಾದ ಅವಕಾಶಗಳು ಹೆಚ್ಚಾಗಿರುತ್ತವೆ. ಇವರು ತೊಂದರೆಗಳಿಗೆ ಬೇಗನೆ ತುತ್ತಾಗುತ್ತಾರೆ.
- ಮಾಲಿಕರಿಂದ ದಂಡನೆಗಳಿಗೆ ಒಳಗಾಗುತ್ತಾರೆ.
- ಕೆಟ್ಟ ಚಟಗಳಿಗೆ ಬಲಿಯಾಗುವ ಅವಕಾಶಗಳು ಹೆಚ್ಚಾಗಿರುತ್ತವೆ.

ಹೀಗಾಗಿ ಸರ್ಕಾರವು ಬಾಲಕಾರ್ಮಿಕ ನಿಷೇಧ ಕಾಯಿದೆಯನ್ನು ಜಾರಿಗೆ ತಂದಿದೆ. ಕೆಲಸಗಳಲ್ಲಿ ತೊಡಗಿರುವ ಶಾಲಾ ವಯಸ್ಸಿನ ಮಕ್ಕಳನ್ನು ಗುರುತಿಸಿ, ಅವರನ್ನು ಕರೆತಂದು ಶಾಲೆಯಲ್ಲಿ ಶಿಕ್ಷಣ ನೀಡುವ ಕಾರ್ಯವನ್ನು ಮಾಡಲಾಗುತ್ತಿದೆ.

ಶಿಕ್ಷಣ ಮಕ್ಕಳ ಮೂಲಭೂತ ಹಕ್ಕು.
ಶಿಕ್ಷಣ ಎಲ್ಲ ಮಕ್ಕಳಿಗೂ ಅತಿ ಆವಶ್ಯಕ.


©KTBS Not to be republished

## ಪಾಠ – 21

# ಕಣ್ಣಾ ಮುಚ್ಚೆ ಕಾಡೆ ಗೂಡೆ

**ಈ ಪಾಠವನ್ನು ಕಲಿತ ನಂತರ ನೀನು,**

- ಆಟಗಳನ್ನು ಒಳಾಂಗಣ ಮತ್ತು ಹೊರಾಂಗಣ ಆಟಗಳಾಗಿ ವರ್ಗೀಕರಿಸುವೆ.
- ಸ್ಥಳೀಯ ಮತ್ತು ಸಾಂಪ್ರದಾಯಿಕ ಆಟಗಳ ಬಗ್ಗೆ ಹಿರಿಯರಿಂದ ತಿಳಿಯುವೆ.
- ಆಟಗಳಿಂದಾಗುವ ಪ್ರಯೋಜನಗಳನ್ನು ತಿಳಿಯುವೆ.
- ಕಥೆ ಪುಸ್ತಕಗಳು, ಆಟಗಳು, ರೇಡಿಯೋ, ದೂರದರ್ಶನದಿಂದ ದೊರೆಯುವ ವಿವಿಧ ಮನರಂಜನೆಯ ಬಗ್ಗೆ ತಿಳಿಯುವೆ.



ಕಣ್ಣಾಮುಚ್ಚೆ ಕಾಡೆಗೂಡೆ
ಉದ್ದಿನ ಮೂಟೆ ಉರುಳೇ ಹೋಯ್ತು
ನಮ್ಮ ಹಕ್ಕಿ ಬಿಟ್ಟೇ ಬಿಟ್ಟೆ
ನಿಮ್ಮ ಹಕ್ಕಿ ಮುಚ್ಚಿಕೊಳ್ಳಿ

ಎಂದು ರಾಣಿ ಜೋರಾಗಿ ಕೂಗಿ ರಂಗನ ಮುಚ್ಚಿದ್ದ ಕಣ್ಣನ್ನು ಬಿಟ್ಟಳು. ಸುಮ, ವಿನಯ್, ಜಾನ್, ಹಸೀನಾ ಮರದ ಹಿಂದೆ ಅಡಗಿದರು. ರಂಗ ಹುಡುಕುತ್ತಾ ಮುಂದೆ ಹೋದಾಗ

© KTBS Not to be republished

ಸುಮ, ಜಾನ್, ಹಸೀನಾ ಓಡಿ ಬಂದು ರಾಣಿಯನ್ನು ಮುಟ್ಟಿ "ಓಹೋ, ನಾವು ರಾಣಿಯನ್ನು ಮುಟ್ಟಿದೆವು" ಎಂದು ಕೂಗಿದರು. ರಾಣಿಯನ್ನು ಮುಟ್ಟಲು ಓಡಿ ಬರುತ್ತಿದ್ದ ವಿನಯ್‌ನನ್ನು ರಂಗ ಮುಟ್ಟಿ 'ಔಟ್' ಎಂದ. ಅಷ್ಟರಲ್ಲಿ ಮಳೆ ಬರಲು ಪ್ರಾರಂಭವಾಯಿತು. ಮಕ್ಕಳೆಲ್ಲರೂ ರಂಗನ ಮನೆಯ ಒಳಗೆ ಓಡಿದರು.

ರಂಗ : ನನ್ನ ಬಳಿ ಮಾವ ತಂದಿರುವ ಕಥೆ ಪುಸ್ತಕಗಳಿವೆ. ನೋಡುವಿರಾ?

ವಿನಯ್ : ಇಂದು ಭಾನುವಾರ. ದೂರದರ್ಶನದಲ್ಲಿ ಮಕ್ಕಳ ಕಾರ್ಯಕ್ರಮ ಇರುತ್ತದೆ. ಅದನ್ನು ನೋಡೋಣ.

ರಾಣಿ : ಟಿ.ವಿ. ಬೇಡ. ರೇಡಿಯೋದಲ್ಲಿ ಒಳ್ಳೆಯ ಹಾಡುಗಳು ಬರುತ್ತಿವೆ. ಕೇಳೋಣ.

ಎಲ್ಲರೂ : ಬೇಡ, ಬೇಡ, ಆಟ ಆಡೋಣ.

ಸರಿ, ಯಾವ ಆಟ ಆಡೋಣ? ಮತ್ತೆ ಚರ್ಚೆ ಶುರುವಾಯಿತು.

ರಾಣಿ : ಚೌಕಾಬಾರ (ಚಕ್ಕಾಬಾರ) ಆಡೋಣ.

ರಂಗ : ಬೇಡ, ನಾವು ಆರು ಜನ ಇದ್ದೇವೆ. ನಾಲ್ವರು ಮಾತ್ರ ಈ ಆಟ ಆಡಬಹುದು.

ಸುಮ : ಹಾಗಾದರೆ ಹಳಗುಣಿ ಮನೆ (ಅಳ್ಟಗುಣಿ ಮಣೆ) ಆಟ ಆಡೋಣ.

ಜಾನ್ : ಬೇಡ, ಅದನ್ನು ಇಬ್ಬರು ಮಾತ್ರ ಆಡಬಹುದು.

ಹಸೀನಾ : ಕೇರಂ ಆಡೋಣವೆ?

ರಂಗ : ನಮ್ಮ ಮನೆಯಲ್ಲಿ ಕೇರಂಬೋರ್ಡ್ ಇಲ್ಲವಲ್ಲ.

ವಿನಯ್ : ನಾವೆಲ್ಲರೂ ಸೇರಿ ಅಚ್ಚೆಕಲ್ಲು (ಅಣ್ಣೆಕಲ್ಲಿನಾಟ) ಆಡೋಣ.

ಜಾನ್ ಹೊರಗಡೆ ನೋಡಿ "ಮಳೆ ನಿಂತಿದೆ. ಎಲ್ಲರೂ ಹೊರಹೋಗೋಣ ಬನ್ನಿ" ಎಂದ. ಮಕ್ಕಳೆಲ್ಲರೂ **ಹೋ** ಎಂದು ಜೋರಾಗಿ ಕೂಗುತ್ತಾ ಮತ್ತೆ ಬಯಲಿಗೆ ಓಡಿದರು. ಯಾವ ಆಟ ಆಡೋಣ ಎಂದು ಮತ್ತೆ ಚರ್ಚೆ ಶುರುವಾಯಿತು. ಎಲ್ಲರೂ ತಮಗೆ ಗೊತ್ತಿರುವ ಆಟಗಳ ಹೆಸರನ್ನು ಹೇಳಿದರು. ಲಗೋರಿ, ಮರಕೋತಿ, ಚಿನ್ನಿದಾಂಡು, ಗೋಲಿ, ಬುಗುರಿ, ಕ್ರಿಕೆಟ್, ಕುಂಟು ಮುಟ್ಟಾಟ, ಹಗ್ಗದಾಟ, ಚೆಂಡಾಟ ಯಾವುದು ಆಡೋಣ ಎನ್ನುತ್ತಾ ಕೊನೆಗೆ ಎಲ್ಲರೂ ಸೇರಿ ಕುಂಟು ಮುಟ್ಟಾಟ ಆಡಲು ತಯಾರಾದರು.

©KTBS Not to be republished

ಇಲ್ಲಿ ಕೊಟ್ಟಿರುವ ಆಟಗಳ ಹೆಸರನ್ನು ಬರೆ.

ಇವುಗಳಲ್ಲಿ ಮನೆಯ ಒಳಗೆ ಆಡುವ ಆಟಗಳು ಯಾವುವು? ವೃತ್ತದೊಳಗೆ ಬರೆ. ಮನೆಯ ಹೊರಗೆ, ಬಯಲಿನಲ್ಲಿ ಯಾವ ಆಟಗಳನ್ನು ಆಡಬಹುದು? ಎಂದು ಚೌಕದಲ್ಲಿ ಬರೆ. ಈ ಆಟಗಳಲ್ಲಿ ನೀನು ಆಡುವ ಅಥವಾ ನಿನಗೆ ಗೊತ್ತಿರುವ ಆಟಗಳಿಗೆ ಗುರುತು ಮಾಡು. ಗೊತ್ತಿಲ್ಲದ ಆಟಗಳ ಬಗ್ಗೆ ತಿಳಿದುಕೊ.

**ಓದಿ–ತಿಳಿ**

- ಮನೆಯ ಹೊರಗೆ, ಬಯಲಿನಲ್ಲಿ, ಮೈದಾನದಲ್ಲಿ ಆಡುವ ಆಟಗಳನ್ನು ಹೊರಾಂಗಣ ಆಟಗಳೆನ್ನುತ್ತಾರೆ.
- ಮನೆ ಮತ್ತು ಶಾಲೆಯ ಒಳಗೆ ಆಡುವ ಆಟಗಳನ್ನು ಒಳಾಂಗಣ ಆಟಗಳೆನ್ನುತ್ತಾರೆ.


ನೀನು ಆಡುವ ಹೊರಾಂಗಣ ಮತ್ತು ಒಳಾಂಗಣ ಆಟಗಳನ್ನು ಬರೆ.


| ಹೊರಾಂಗಣ | ಒಳಾಂಗಣ |
|---|---|
| | |
| | |
| | |
| | |
| | |

©KTBS Not to be republished

ಶಾಲೆಯಲ್ಲಿ ಶಿಕ್ಷಕರು ಆಡಿಸುವ ಆಟಗಳ ಹೆಸರುಗಳನ್ನು ಬರೆ.











©KTBS Not to be republished

**ಚಟುವಟಿಕೆ :**

- ಹಿಂದಿನ ಪುಟದಲ್ಲಿ ಕೊಟ್ಟಿರುವ ಚಿತ್ರದಲ್ಲಿ ಮಕ್ಕಳು ಆಡುತ್ತಿರುವ ಆಟಗಳ ಹೆಸರುಗಳನ್ನು ಇಲ್ಲಿ ಬರೆ. ಈ ಆಟಗಳನ್ನು ಆಡಲು ಬೇಕಾದ ಸಾಮಗ್ರಿಗಳು ಯಾವುವು ಎಂಬುದನ್ನೂ ಬರೆ. ನಿನಗೆ ತಿಳಿಯದಿದ್ದರೆ ಹಿರಿಯರನ್ನು ಕೇಳಿ ಬರೆ.

| ಆಟಗಳ ಹೆಸರು | ಬೇಕಾದ ಸಾಮಗ್ರಿಗಳು |
|---|---|
| ______________ | ______________________ |
| ______________ | ______________________ |
| ______________ | ______________________ |
| ______________ | ______________________ |
| ______________ | ______________________ |
| ______________ | ______________________ |
| ______________ | ______________________ |
| ______________ | ______________________ |
| ______________ | ______________________ |
| ______________ | ______________________ |
| ______________ | ______________________ |
| ______________ | ______________________ |

- ಹಗ್ಗ, ಕಲ್ಲು, ಹುಣಸೆ ಬೀಜಗಳಿಂದ ಯಾವ ಆಟಗಳನ್ನು ಆಡಬಹುದು. ಇಲ್ಲಿ ಬರೆ.

______________ ______________ ______________


______________ ______________ ______________

______________ ______________ ______________


ಈ ಆಟಗಳ ಬಗ್ಗೆ ತಿಳಿದುಕೊ.

©KTBS Not to be republished


ನಿನ್ನ ಹತ್ತಿರ ಒಂದು ಚೆಂಡು ಇದೆ. ಇದರಿಂದ ನೀನು ಯಾವ ಯಾವ ಆಟಗಳನ್ನು ಆಡಬಹುದು ಎಂಬುದನ್ನು ಈ ಚೆಂಡಿನ ಸುತ್ತ ಇರುವ ಚೌಕಗಳಲ್ಲಿ ಬರೆ.











ಮೇಲಿನ ಚಿತ್ರಗಳಲ್ಲಿ ನಿನಗೆ ಯಾವುದು ತುಂಬಾ ಇಷ್ಟ? ಏಕೆ?

______________________________

______________________________

______________________________

©KTBS Not to be republished

**ಓದಿ–ತಿಳಿ**

- ದೂರದರ್ಶನ, ರೇಡಿಯೋ, ಪುಸ್ತಕಗಳಿಂದ ನಮಗೆ ಮನರಂಜನೆ ದೊರೆಯುತ್ತದೆ ಮತ್ತು ಹೆಚ್ಚಿನ ವಿಷಯಗಳೂ ತಿಳಿಯುತ್ತವೆ.
- ಆಟಗಳಿಂದ ನಮಗೆ ಮನರಂಜನೆ ಸಿಗುತ್ತದೆ. ದೇಹ ಮತ್ತು ಮನಸ್ಸಿಗೆ ಉಲ್ಲಾಸ ದೊರೆಯುತ್ತದೆ.
- ಆಟಗಳಿಂದ ದೇಹ ಗಟ್ಟಿಯಾಗಿ, ಆರೋಗ್ಯವು ಉತ್ತಮವಾಗುತ್ತದೆ.

ನೀನು ಸಾಮಾನ್ಯವಾಗಿ ಆಡುವ ಆಟಗಳನ್ನು ಹೆಸರಿಸು.

ನಿನಗೆ ಇಷ್ಟವಾದ ಒಂದು ಒಳಾಂಗಣ ಆಟವನ್ನು ಮತ್ತು ಒಂದು ಹೊರಾಂಗಣ ಆಟವನ್ನು ಹೆಸರಿಸು.

ನಿನಗೆ ಇಷ್ಟವಾದ ಆಟವನ್ನು ಕುರಿತು ನಾಲ್ಕು ಸಾಲುಗಳನ್ನು ಬರೆ.

**ಒಳಾಂಗಣ ಆಟ :**

____________________

____________________

____________________

____________________

**ಹೊರಾಂಗಣ ಆಟ :**

____________________

____________________

____________________

____________________

ನಿನ್ನ ಗೆಳೆಯರೊಡನೆ ಸೇರಿ ನಿನಗಿಷ್ಟವಾದ ಆಟ ಆಡು.

©KTBS Not to be republished

**ಆಟ–ಆಡು**

ಸ್ನೇಹಿತರೊಂದಿಗೆ ಈ ಆಟ ಆಡು. ನೀನು ಮತ್ತು ನಿನ್ನ ಸ್ನೇಹಿತರು ಕೈಗಳನ್ನು ಬಟ್ಟೆಯಲ್ಲಿ ಅಡಗಿಸಿಕೊಳ್ಳಿ. ಒಬ್ಬರು ಪ್ರಶ್ನೆ ಕೇಳಲಿ, ಉಳಿದವರು ಉತ್ತರ ನೀಡಲಿ.

| ಪ್ರಶ್ನೆ | ಉತ್ತರ |
|---|---|
| ಕೈಯೆಲ್ಲಾ ಎಲ್ಲಿಗೋದ್ವು? | ಸಂತೆಗ್ಹೋದ್ವು |
| ಸಂತೆ ಏನ್ ಕೊಡ್ತು? | ಕಬ್ ಕೊಡ್ತು |
| ಕಬ್ ಏನ್ ಮಾಡ್ದೆ? | ಕಬ್ಬಿನ ರಸ ಸವಿದೆ |
| ಸಿಪ್ಪೇನಾ ಏನ್ ಮಾಡ್ದೆ? | ತಿಪ್ಪೆಗೆ ಹಾಕ್ದೆ |
| ತಿಪ್ಪೆ ಏನ್ ಕೊಡ್ತು? | ಗೊಬ್ಬರ ಕೊಡ್ತು |
| ಗೊಬ್ಬರ ಏನ್ ಮಾಡ್ದೆ? | ಹೊಲಕ್ಕೆ ಹಾಕ್ದೆ |
| ಹೊಲ ಏನ್ ಕೊಡ್ತು? | ಹುಲ್ಲು ಕೊಡ್ತು |
| ಹುಲ್ಲನ್ನು ಏನ್ ಮಾಡ್ದೆ? | ಹಸುವಿಗೆ ಹಾಕ್ದೆ |
| ಹಸು ಏನ್ ಕೊಡ್ತು? | ಹಾಲು ಕೊಡ್ತು |
| ಹಾಲನ್ನು ಏನ್ ಮಾಡ್ದೆ? | ಹಾಲು ಕುಡಿದು ಗಟ್ಟಿಯಾದೆ. |

(ಇದನ್ನು ಸ್ಥಳೀಯ ಬಳಕೆಗೆ ಅನುಗುಣವಾಗಿ ಹಾಡಬಹುದು.)

©KTBS Not to be republished

## ಪಾಠ – 22

# ಮಡಕೆಯ ಕಥೆ

**ಈ ಪಾಠವನ್ನು ಕಲಿತ ನಂತರ ನೀನು,**

- ಮಾನವರು ತಮ್ಮ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲು ವಿವಿಧ ವಸ್ತುಗಳನ್ನು ತಯಾರಿಸಲು ಪ್ರಾರಂಭಿಸಿದರು ಎಂಬುದನ್ನು ಮಡಕೆ ಮತ್ತು ಚಕ್ರದ ಉದಾಹರಣೆಯೊಂದಿಗೆ ವಿವರಿಸುವೆ.
- ಮಡಕೆಯ ಬಳಕೆಯಲ್ಲಿ ಕಾಲಕ್ರಮೇಣ ಆದ ಬದಲಾವಣೆಗಳ ಬಗ್ಗೆ ಚರ್ಚಿಸುವೆ.
- ಜೇಡಿಮಣ್ಣಿನಿಂದ ಮಡಕೆಯ ಮಾದರಿಗಳನ್ನು ತಯಾರಿಸುವೆ.

©KTBS Not to be republished


ನಿನಗೆ ದಿನನಿತ್ಯವೂ ಯಾವ ವಸ್ತುಗಳ ಅಗತ್ಯವಿದೆ ಎಂಬುದನ್ನು ಈಗಾಗಲೇ ತಿಳಿದಿರುವೆ. ಇವುಗಳಲ್ಲಿ 5 ವಸ್ತುಗಳನ್ನು ಇಲ್ಲಿ ಬರೆ.

ಆಹಾರ ನಿನಗೆ ದಿನವೂ ಬೇಕು. ನಿನ್ನ ಮನೆಯಲ್ಲಿ ಅಹಾರವನ್ನು ಹೇಗೆ ತಯಾರಿಸುತ್ತಾರೆ? ಗಮನಿಸು.

ಆಹಾರ ತಯಾರಿಸಲು ಏನೇನು ಬೇಕು? ಇಲ್ಲಿ ಬರೆ.

ಆಹಾರವನ್ನು ತಯಾರಿಸಲು, ನೀರನ್ನು ಹಿಡಿದಿಡಲು ಎಂತಹ ಪಾತ್ರೆಗಳನ್ನು ಬಳಸುತ್ತಾರೆ ಎಂಬುದನ್ನು ನೀನು ಈಗಾಗಲೆ ತಿಳಿದಿದ್ದೀಯೆ. ನೀನು ನೋಡಿರುವ ಪಾತ್ರೆಗಳನ್ನು ಸಾಮಾನ್ಯವಾಗಿ ಯಾವ ವಸ್ತುಗಳಿಂದ ಮಾಡಿದ್ದಾರೆ? 5 ವಸ್ತುಗಳನ್ನು ಇಲ್ಲಿ ಬರೆ.

ಪಾತ್ರೆಗಳನ್ನು ಮಾಡಲು ಮೊಟ್ಟ ಮೊದಲು ಉಪಯೋಗಿಸಿದ ವಸ್ತುಗಳು ಯಾವುವು? ನಿನಗೆ ಗೊತ್ತೆ?



ಮೇಲಿನ ಚಿತ್ರಗಳನ್ನು ನೋಡು.

Not ©KTBS to be republished

ಮಡಕೆಯನ್ನು ತಯಾರಿಸಲು ಯಾವ ವಸ್ತುಗಳನ್ನು ಬಳಸುತ್ತಾರೆ? ಇಲ್ಲಿ ಬರೆ.

ಯಾವ ಕೆಲಸಗಳಿಗೆ ಮಡಕೆಯನ್ನು ಬಳಸುತ್ತಾರೆ? ನಿನಗೆ ಗೊತ್ತೆ? ಇಲ್ಲಿ ಬರೆ.

ಮಡಕೆ ಮಾಡುವಲ್ಲಿಗೆ ಹೋಗು. ಮಡಕೆ ತಯಾರಿಸುವ ರೀತಿಯನ್ನು ನೋಡು. ಅದರ ಬಗ್ಗೆ 2 ಸಾಲುಗಳನ್ನು ಬರೆ.

______________________________






______________________________

ತಿಗರಿ ತಿರುಗುವೆ ಗರಾಗರಾ
ಮಡಕೆ ಮಾಡುವೆ ಭರಾ ಭರಾ
ನಾನು ಯಾರು?

ನಿನ್ನ ಮನೆಯಲ್ಲಿ ಮಡಕೆಯನ್ನು ಬಳಸುತ್ತಾರೆಯೇ? ಯಾವ ಕೆಲಸಗಳಿಗೆ ಬಳಸುತ್ತಾರೆ? ಇಲ್ಲಿ ಬರೆ.

©KTBS Not to be republished

ಇಲ್ಲಿ ಕೊಟ್ಟಿರುವ ಚಿತ್ರಗಳನ್ನು ಗಮನವಿಟ್ಟು ನೋಡು. ಬದಲಾವಣೆ ಕಂಡುಬರುತ್ತದೆಯೆ? ಬದಲಾವಣೆ ಕಂಡುಬಂದಲ್ಲಿ ಅವು ಯಾವುವು ಎಂದು ಹೇಳು.

| ಅಂದು | ಇಂದು |
| --- | --- |
|  |  |
|  |  |
|  |  |
|  |  |
|  |  |

©KTBS Not to be republished

**ಚಟುವಟಿಕೆ :**

- ನಿನ್ನ ಮನೆಯ ಮತ್ತು ಊರಿನಲ್ಲಿರುವ ಹಿರಿಯರು ಹಿಂದೆ ಉಪಯೋಗಿಸುತ್ತಿದ್ದ ವಸ್ತುಗಳು ಯಾವುವೆಂದು ಕೇಳಿ ತಿಳಿದುಕೊ. ನಿನ್ನ ಮನೆಯಲ್ಲಿ ಇಂದು ಉಪಯೋಗಿಸುತ್ತಿರುವ ವಸ್ತುಗಳನ್ನು ಗಮನಿಸು.

  ಈ ವಸ್ತುಗಳ ಪಟ್ಟಿಯನ್ನು ತಯಾರಿಸು.

| ಅಂದು | ಇಂದು |
|---|---|
| | |
| | |
| | |
| | |
| | |

  ಅಂದಿಗೂ ಇಂದಿಗೂ ಏನಾದರೂ ಬದಲಾವಣೆಗಳಾದ್ದರೆ ತಿಳಿಸು.

  ಈ ಬದಲಾವಣೆಗಳು ಏಕೆ ಬಂದವು?

  ಗೆಳೆಯರೊಡನೆ, ಶಿಕ್ಷಕರೊಡನೆ, ಹಿರಿಯರೊಡನೆ ಚರ್ಚಿಸು/ಯೋಚಿಸು.

- ನಿಮ್ಮ ಊರಿನಲ್ಲಿ ಕುಂಬಾರರಿದ್ದರೆ, ಅಲ್ಲಿಗೆ ಹೋಗಿ ಮಡಕೆ ಮಾಡುವ ವಿಧಾನವನ್ನು ನೋಡು. ಅವರು ಮಾಡುವ ಮಡಕೆಗಳ ಬಣ್ಣ, ಆಕಾರ, ಗಾತ್ರವನ್ನು ಗಮನಿಸು. ಮಡಕೆಗಳನ್ನು ಜನರು ಇಂದು ಯಾವ ಕೆಲಸಗಳಿಗಾಗಿ ಬಳಸುತ್ತಾರೆ ಎಂಬುದನ್ನು ಕುಂಬಾರರೊಂದಿಗೆ ಚರ್ಚಿಸು.

**ಮಾಡಿ–ನೋಡು**

- ಮಣ್ಣಿನಿಂದ ಸಣ್ಣ ಸಣ್ಣ ಮಡಕೆ ಕುಡಿಕೆಗಳನ್ನು ತಯಾರಿಸು. ಅದರಲ್ಲಿ ನೀರು ಅಥವಾ ಕಾಳುಗಳನ್ನು ಹಾಕಿ ಹಕ್ಕಿಗಳಿಗೆ ಇಡು.
- ಮಣ್ಣಿನಿಂದ ಮೀನು, ಹಣ್ಣು, ಕುಂಡ, ಹಣ ಸಂಗ್ರಹಣಾ ಕುಡಿಕೆಗಳಂತಹ ವಸ್ತುಗಳನ್ನು ಮಾಡಲು ಕಲಿ. ಅವುಗಳಿಗೆ ಬಣ್ಣ ಹಾಕು.

©KTBS Not to be republished


## ಪಾಠ – 23

# ನಮ್ಮೆಲ್ಲರ ಮನೆ

**ಈ ಪಾಠವನ್ನು ಕಲಿತ ನಂತರ ನೀನು,**

- ಭೂಮಿಯ ಆಕಾರವನ್ನು ತಿಳಿಯುವೆ.
- ದಿನದಲ್ಲಿ ಆಗುವ ಬದಲಾವಣೆಗಳನ್ನು – ಮೋಡಕವಿದ, ಮಳೆಯ, ಬಿಸಿಲಿನಿಂದ ಕೂಡಿದ ಎನ್ನುವ ಪದಗಳನ್ನು ಬಳಸಿ ವಿವರಿಸುವೆ.
- ಸೂರ್ಯೋದಯವನ್ನು ಗಮನಿಸಿ ದಿಕ್ಕುಗಳನ್ನು ಗುರುತಿಸುವುದನ್ನು ನೆನಪಿಸಿಕೊಳ್ಳುವೆ.

ಪುಟಾಣಿ, ಹಿಂದಿನ ತರಗತಿಯಲ್ಲಿ ಬಾನಂಗಳದ ಗೆಳೆಯರ ಪರಿಚಯ ಮಾಡಿಕೊಂಡಿದ್ದೀಯ. ಈ ಗೆಳೆಯರ ಹೆಸರನ್ನು ಕೊಟ್ಟಿರುವ ಚೌಕದಲ್ಲಿ ಬರೆ. ಸುಳಿವು ಚಿತ್ರಗಳ ನೆರವು ಪಡೆ.







©KTBS Not to be republished

**ಮಾಡಿ–ನೋಡು**

- ಹಗಲಿನಲ್ಲಿ ಬಣ್ಣದ ನೀರು ತುಂಬಿರುವ ತಟ್ಟೆಯನ್ನು ಸೂರ್ಯನ ಬಿಂಬ ಕಾಣುವಂತೆ ಹೊಂದಿಸು. ಸೂರ್ಯನ ಆಕಾರವನ್ನು ಗಮನಿಸು.
- ಹುಣ್ಣಿಮೆ ದಿನ ಚಂದ್ರನನ್ನು ನೀನು ನೋಡಿರುವೆಯಲ್ಲವೆ? ಅದರ ಆಕಾರವನ್ನು 2 ಸಾಲುಗಳಲ್ಲಿ ಬಣ್ಣಿಸು.

ಕೆಳಗಿನ ಚಿತ್ರ ನೋಡು. ಇದು ಯಾವುದರ ಚಿತ್ರ ಗೊತ್ತೆ? ಶಿಕ್ಷಕರ ಅಥವಾ ಹಿರಿಯರ ನೆರವಿನಿಂದ, ಕೊಟ್ಟಿರುವ ಚೌಕದಲ್ಲಿ ಇದರ ಹೆಸರನ್ನು ಬರೆ.







ಭೂಮಿಯ ಆಕಾರವನ್ನು ಗಮನಿಸು. ಸೂರ್ಯ ಚಂದ್ರರ ಆಕಾರವನ್ನು ಭೂಮಿಯ ಆಕಾರದೊಂದಿಗೆ ಹೋಲಿಸು. ಏನಾದರು ವ್ಯತ್ಯಾಸವಿದೆಯೆ? ತಿಳಿಸು. ಸೂರ್ಯ, ಚಂದ್ರ, ಭೂಮಿಗಳ ಆಕಾರವನ್ನು ಕೊಟ್ಟಿರುವ ಚೌಕದಲ್ಲಿ ಬರೆ.

| | | |
|---|---|---|
| 1. | ಸೂರ್ಯ | |
| 2. | ಚಂದ್ರ | |
| 3. | ಭೂಮಿ | |

© KTBS Not to be Republished

ಕೆಳಗೆ ಕೊಟ್ಟಿರುವ ಈ ಚಿತ್ರಗಳಲ್ಲಿ ಯಾವುದು ಭೂಮಿಯ ಆಕಾರವನ್ನು ಬಹುಮಟ್ಟಿಗೆ ಹೋಲುತ್ತದೆ? ತಿಳಿಸು.

ಭೂಮಿಯು ಬಹುಮಟ್ಟಿಗೆ ಕಿತ್ತಳೆ ಹಣ್ಣಿನ ಆಕಾರವನ್ನು ಹೋಲುತ್ತದೆ ಎಂಬುದನ್ನು ಗಮನಿಸು.

**ಚಟುವಟಿಕೆ :** ಕಿತ್ತಳೆ ಹಣ್ಣನ್ನು ತೆಗೆದುಕೊ. ಅದರ ಎರಡು ತುದಿಗಳನ್ನು ಮುಟ್ಟಿ ನೋಡು. ಅವು ಹೇಗಿವೆ?





**ಓದಿ-ತಿಳಿ**

- ನಾವು ವಾಸಿಸುವ ಭೂಮಿಗೂ ಎರಡು ತುದಿಗಳಿವೆ. ಉತ್ತರ ತುದಿ ಹಾಗೂ ದಕ್ಷಿಣ ತುದಿ.
- ಕಿತ್ತಳೆ ಹಣ್ಣಿನ ತುದಿಗಳು ಚಪ್ಪಟೆಯಾಗಿರುವಂತೆ ಭೂಮಿಯ ಉತ್ತರ ಹಾಗೂ ದಕ್ಷಿಣ ತುದಿಗಳು ಚಪ್ಪಟೆಯಾಗಿವೆ. ಭೂಮಿಗೆ ತನ್ನದೇ ಆದ ನಿರ್ದಿಷ್ಟ ಆಕಾರವಿದೆ. ಭೂಮಿಯ ವಿಶೇಷವಾದ ಈ ಆಕಾರವೇ ಭೂಮ್ಯಾಕಾರ.
- ನೀಲಿ, ಹಸಿರು ಮತ್ತು ಕಂದು ಬಣ್ಣಗಳಿಂದ ಕೂಡಿದ ಭೂಮಿಯ ಛಾಯಾಚಿತ್ರವು ಬಹು ಅಕರ್ಷಕವಾಗಿ ಕಾಣುತ್ತದೆ.

©KTBS Not to be republished



ಚಿತ್ರ ಗಮನಿಸು. ಭೂಮಿಯ ಕಿರು ಮಾದರಿ ಇದು. ಇದನ್ನು **ಗೋಳ** ಅಥವಾ **ಗ್ಲೋಬ್** ಎನ್ನುವರು. ಇದನ್ನು ಉಪಯೋಗಿಸಿ ಭೂಮಿಯ ಬಗ್ಗೆ ತಿಳಿದುಕೊಳ್ಳಬಹುದು. ಗೋಳವು ಭೂಮಿಯ ಆಕಾರ, ಉದ್ದ ಮತ್ತು ಅಗಲಗಳನ್ನು ಅತ್ಯಂತ ನಿಖರವಾಗಿ ತೋರಿಸುತ್ತದೆ.


ಗೋಳದಿಂದಾಗುವ ಉಪಯೋಗಗಳನ್ನು ಯೋಚಿಸಿ ಪಟ್ಟಿಮಾಡು.

1. ____________________

2. ____________________

ನಿನ್ನ ತರಗತಿಯಲ್ಲಿರುವ ಗೋಳವನ್ನು ಗಮನಿಸು. ಅದರಲ್ಲಿನ ನೆಲಭಾಗಗಳು ಹಾಗೂ ಜಲಭಾಗಗಳನ್ನು ಯಾವ ಬಣ್ಣಗಳಿಂದ ಗುರುತಿಸಿದ್ದಾರೆ ಹೇಳು.


ಚಿತ್ರದಲ್ಲಿರುವ ಗೋಳದಲ್ಲಿ ನೆಲ ಮತ್ತು ಜಲ ಭಾಗಗಳನ್ನು ಗುರುತಿಸು. ಈ ಭಾಗಗಳಿಗೆ ಬಣ್ಣ ತುಂಬು.



©KTBS Not to be republished

**ಹಾಡಿ-ನಲಿ**

ಗೋಳವ ನೋಡು ಗೋಳವ ನೋಡು
ಅದುವೆ ಭೂಮಿಯ ಮಾದರಿ ನೋಡು
ಭೂಮಿಯು ತಿರುಗುವ ಪರಿಯನು ನೋಡು
ಹಗಲು ರಾತ್ರಿಯ ಆಟವ ನೋಡು
ನೆಲದ, ಜಲದ ರಾಶಿಯ ನೋಡು
ಜೀವಿಗಳಿಗಿದು ಆಸರೆ ನೋಡು ||ಗೋಳವ||





ಗೋಳವು ಭೂಮಿಯ ಮಾದರಿ ಎಂದು ನಿನಗೆ ಈಗಾಗಲೇ ತಿಳಿದಿದೆ. ಗೋಳದ ಸಹಾಯದಿಂದ ಭೂಮಿಯ ಬಗ್ಗೆ ತಿಳಿಯುವುದು ಸುಲಭ.

ಗೋಳವನ್ನು ತೆಗೆದುಕೋ. ಚಪ್ಪಟೆಯಾಗಿರುವ ಅದರ ತುದಿಗಳನ್ನು ಗಮನಿಸು. ಮೇಲು ತುದಿಗೆ **ಉತ್ತರ ಧ್ರುವ** ಕೆಳತುದಿಗೆ **ದಕ್ಷಿಣ ಧ್ರುವ** ಎನ್ನುವರು.


ಗೋಳದ ಮೇಲೆ ಹಲವು ರೇಖೆಗಳನ್ನು ಉದ್ದವಾಗಿ ಮತ್ತು ಅಡ್ಡವಾಗಿ ಎಳೆದಿರುವುದನ್ನು ಗಮನಿಸು. ಇವು ಕೇವಲ ಗೋಳದ ಮೇಲೆ ಮಾತ್ರ ಎಳೆಯಲಾದ ಊಹಾರೇಖೆಗಳು. ಭೂಮಿಯ ಮೇಲೆ ಇಂತಹ ರೇಖೆಗಳು ನಿಜವಾಗಿಯೂ ಕಂಡುಬರುವುದಿಲ್ಲ. ಒಂದು ಪ್ರದೇಶದ ಕಾಲವನ್ನು, ಪ್ರದೇಶಗಳ ನಡುವಿನ ಅಂತರವನ್ನು ತಿಳಿಯುವುದಕ್ಕಾಗಿಯೇ ಈ ರೇಖೆಗಳನ್ನು ಎಳೆಯಲಾಗಿದೆ.


©KTBS Not to be republished




ಚಿತ್ರವನ್ನು ಗಮನಿಸು. ಈ ಚಿತ್ರದಲ್ಲಿ ಗೋಳದ ಮೇಲೆ ಅಡ್ಡವಾಗಿ ಗೆರೆಗಳನ್ನು ಎಳೆಯಲಾಗಿದೆ. ಇವೇ ಅಕ್ಷಾಂಶಗಳು. ಮುಖ್ಯ ಅಕ್ಷಾಂಶಗಳಿಗೆ ಹೆಸರುಗಳಿವೆ. ಚಿತ್ರದ ನೆರವಿನಿಂದ ಅವುಗಳನ್ನು ಓದು.

ಚಿತ್ರ ಗಮನಿಸು. ಗೋಳದ ಮೇಲೆ ಅಡ್ಡರೇಖೆಗಳಂತೆಯೇ ಉದ್ದವಾಗಿ ರೇಖೆಗಳನ್ನು ಎಳೆಯಲಾಗಿದೆ. ಇವೇ ರೇಖಾಂಶಗಳು. ಚಿತ್ರದಲ್ಲಿರುವ ಮುಖ್ಯ ರೇಖಾಂಶದ ಹೆಸರನ್ನು ಓದು.








ಗೋಳದಲ್ಲಿ ಭೂಭಾಗಕ್ಕೆ ನೆಲಗೋಳವೆಂದು, ಜಲಭಾಗಕ್ಕೆ ಜಲಗೋಳವೆಂದು ಕರೆಯುತ್ತಾರೆ. ಮೇಲಿನ ಚಿತ್ರಗಳನ್ನು ವೀಕ್ಷಿಸು. ಭೂಭಾಗಗಳು ಅಲ್ಲಲ್ಲಿ ಹರಡಿಕೊಂಡಿವೆ. ಗೋಳದಲ್ಲಿ ಕಂಡುಬರುವ ಭೂಭಾಗಗಳೇ ಭೂಖಂಡಗಳು. ಭೂಖಂಡಗಳನ್ನು


©KTBS Not to be republished

ಸುತ್ತುವರೆದಿರುವ ಜಲಭಾಗವು ವಿಶಾಲವಾದ ಸಾಗರಗಳಿಂದ ಕೂಡಿದೆ. ಗೋಳದಲ್ಲಿ ಜಲಭಾಗವನ್ನು ನೀಲಿ ಬಣ್ಣದಿಂದ ಗುರುತಿಸಲಾಗಿದೆ.

## ಓದಿ–ತಿಳಿ




©KTBS Not to be republished




ಪುಟಾಣಿ, ಚಿಟ್ಟಿ ಮತ್ತು ಚಿನ್ನಿಯರ ಕಥೆ ಹೇಗಿತ್ತು?

©KTBS Not to be republished

**ಚಟುವಟಿಕೆ :** ವಾರದ ಬೇರೆ ಬೇರೆ ದಿನಗಳಲ್ಲಿ ಬೇರೆ ಬೇರೆ ಸಮಯದಲ್ಲಿ ನಿನ್ನೂರಿನ ವಾತಾವರಣದಲ್ಲಿ ಆಗುವ ಬದಲಾವಣೆಗಳನ್ನು ನೀನು ವೀಕ್ಷಿಸು. ಕೆಳಗಿನ ಚೌಕದಲ್ಲಿ (✓) ಗುರುತು ಹಾಕು.

| ಕ್ರ. ಸಂ. | ವಾರ | ಸಮಯ | ಬಿಸಿಲು | ಮಳೆ | ಮೋಡ | ಕಾಮನ ಬಿಲ್ಲು | ಚಳಿ |
|---|---|---|---|---|---|---|---|
| 1 | ಸೋಮವಾರ | ಬೆಳಿಗ್ಗೆ<br>ಮಧ್ಯಾಹ್ನ<br>ಸಂಜೆ | | | | | |
| 2 | ಮಂಗಳವಾರ | ಬೆಳಿಗ್ಗೆ<br>ಮಧ್ಯಾಹ್ನ<br>ಸಂಜೆ | | | | | |
| 3 | ಬುಧವಾರ | ಬೆಳಿಗ್ಗೆ<br>ಮಧ್ಯಾಹ್ನ<br>ಸಂಜೆ | | | | | |
| 4 | ಗುರುವಾರ | ಬೆಳಿಗ್ಗೆ<br>ಮಧ್ಯಾಹ್ನ<br>ಸಂಜೆ | | | | | |
| 5 | ಶುಕ್ರವಾರ | ಬೆಳಿಗ್ಗೆ<br>ಮಧ್ಯಾಹ್ನ<br>ಸಂಜೆ | | | | | |
| 6 | ಶನಿವಾರ | ಬೆಳಿಗ್ಗೆ<br>ಮಧ್ಯಾಹ್ನ<br>ಸಂಜೆ | | | | | |
| 7 | ಭಾನುವಾರ | ಬೆಳಿಗ್ಗೆ<br>ಮಧ್ಯಾಹ್ನ<br>ಸಂಜೆ | | | | | |

©KTBS Not to be republished

### ಓದಿ–ತಿಳಿ

ಬಿಸಿಲು, ಮೋಡ, ಗಾಳಿ, ಚಳಿ, ಮಳೆ ಇವೆಲ್ಲ ಹವೆಯ ಅಂಶಗಳು. ಇವು ದಿನವೂ ಬದಲಾಗುವಂತಹ ಅಂಶಗಳು. ಒಂದು ದಿನದಲ್ಲಿಯೂ ಇವೆಲ್ಲ ಬದಲಾಗಬಹುದು. ದಿನದಿಂದ ದಿನಕ್ಕೆ, ಗಂಟೆಯಿಂದ ಗಂಟೆಗೆ ಬದಲಾಗುವ ಹವೆಯ ಸ್ಥಿತಿಗತಿಯೇ ಹವಾಮಾನ. ಬೆಳಗ್ಗೆ ಹಾಗೂ ಸಂಜೆಯ ವೇಳೆ ಸೂರ್ಯನ ಬಿಸಿಲು ಕಡಿಮೆ ಇದ್ದು, ಮಧ್ಯಾಹ್ನದ ವೇಳೆ ಬಿಸಿಲು ಪ್ರಖರವಾಗಿರಬಹುದು. ಇಲ್ಲವೇ ಸಂಜೆ ಮೋಡ ಕವಿದು ಮಳೆಯಾಗಬಹುದು. ಗುಡುಗು ಮಿಂಚುಗಳುಂಟಾಗಬಹುದು.

### ಚಟುವಟಿಕೆ :

- ಬಿಸಿಲು ಬೀಳುವುದರಿಂದ ನಮಗಾಗುವ ಅನುಕೂಲಗಳನ್ನು ಪಟ್ಟಿಮಾಡು.


1. ಬಟ್ಟೆಗಳು ಬೇಗ ಒಣಗುತ್ತವೆ.
2. ______________________
3. ______________________
4. ______________________
5. ______________________

- ಮಳೆಯಿಂದ ಆಗುವ ಅನುಕೂಲಗಳನ್ನು ಕೆಳಗಿನ ಸಾಲುಗಳಲ್ಲಿ ಬರೆ.


1. ಸಸ್ಯಗಳು ಚೆನ್ನಾಗಿ ಬೆಳೆಯುತ್ತವೆ.
2. ______________________
3. ______________________
4. ______________________
5. ______________________

©KTBS Not to be republished

**ಚಟುವಟಿಕೆ :** ಚಿತ್ರ ನೋಡಿ ಕಾಮನ ಬಿಲ್ಲಿಗೆ ಬಣ್ಣ ತುಂಬು. ಆಕಾಶದಲ್ಲಿ ಮೂಡುವ ಕಾಮನಬಿಲ್ಲಿನ ಬಣ್ಣಗಳನ್ನು ಗಮನಿಸು.




ದಿಕ್ಕುಗಳ ಬಗ್ಗೆ ಹಿಂದಿನ ತರಗತಿಯಲ್ಲಿ ತಿಳಿದಿರುವೆ, ನೆನಪಿಸಿಕೊ. ಕೆಳಗಿನ ಚಿತ್ರ ನೋಡು. ಸಂಜೆ ಸಿಂಚನಾ ಸೂರ್ಯ ಮುಳುಗುವ ದಿಕ್ಕಿಗೆ ಮುಖ ಮಾಡಿ ನಿಂತಿದ್ದಾಳೆ. ದಿಕ್ಕುಗಳ ಹೆಸರನ್ನು ಚೌಕದಲ್ಲಿ ನೀನು ಬರೆ.




©KTBS Not to be republished

ಸೂರ್ಯ ಉದಯಿಸುವ ದಿಕ್ಕಿಗೆ ಮುಖ ಮಾಡಿ ನಿಂತು, ಪೂರ್ವ, ಪಶ್ಚಿಮ, ಉತ್ತರ ಹಾಗೂ ದಕ್ಷಿಣ ದಿಕ್ಕುಗಳನ್ನು ಸುಲಭವಾಗಿ ಗುರುತಿಸುವ ಕ್ರಮವನ್ನು ಈಗಾಗಲೇ ನೀನು ತಿಳಿದಿರುವೆ. ಕೆಳಗಿನ ಚಿತ್ರವನ್ನು ವೀಕ್ಷಿಸು.

ತರಗತಿ ಕೋಣೆಯಲ್ಲಿ ವಿದ್ಯಾರ್ಥಿಗಳು ಆಟ ಆಡುತ್ತಿದ್ದಾರೆ. ಅವರು ನಿಂತಿರುವ ದಿಕ್ಕುಗಳನ್ನು ಗುರುತಿಸು. ಅಲ್ಲಿ ಕೊಟ್ಟಿರುವ ಜಾಗದಲ್ಲಿ ಬರೆ.




ಅಭಿಷೇಕ್, ಕೀರ್ತಿ, ರೀಟಾ ಹಾಗೂ ಶೃತಿ ಇವರು ನಿಂತಿರುವ ದಿಕ್ಕುಗಳನ್ನು ಸುಲಭವಾಗಿ ಗುರುತಿಸಿರುವಿರಿ ಅಲ್ಲವೇ? ಕುರೇಶಾ, ಸುಚಿತ್ರಾ, ರಫೀಕ್ ಮತ್ತು ರಾಕೇಶ್ ಇವರು ನಿಂತಿರುವ ದಿಕ್ಕುಗಳನ್ನು ಕೆಳಗಿನ ಚಿತ್ರದ ಸಹಾಯದಿಂದ ಗುರುತಿಸು. ಚೌಕದಲ್ಲಿ ಬರೆ.




©KTBS Not to be republished

ಪೂರ್ವ ಮತ್ತು ದಕ್ಷಿಣ ದಿಕ್ಕುಗಳ ಮಧ್ಯೆ ಇರುವುದೇ ಆಗ್ನೇಯ. ಈ ವಾಕ್ಯಗಳನ್ನು ಪೂರ್ಣಗೊಳಿಸು.

ನೈರುತ್ಯವು ______ ಮತ್ತು _________ ದಿಕ್ಕುಗಳ ನಡುವೆ ಇದೆ.

ಪಶ್ಚಿಮ ಮತ್ತು ಉತ್ತರ ದಿಕ್ಕುಗಳ ಮಧ್ಯೆ ಇರುವುದೇ _________.

ಈಶಾನ್ಯವು ಉತ್ತರ ಮತ್ತು ___________ ದಿಕ್ಕುಗಳ ನಡುವೆ ಇದೆ.

**ಮಾಡಿ-ನೋಡು**

ದಿಕ್ಕುಗಳನ್ನು ಕ್ರಮವಾಗಿ ನೆನಪಿಡಲು ಕೆಲವು ಸುಳಿವು ಪದಗಳನ್ನು ಇಲ್ಲಿ ಕೊಡಲಾಗಿದೆ. ಅವುಗಳನ್ನು ಬಳಸಿ ದಿಕ್ಕುಗಳನ್ನು ನೆನಪಿಸಿಕೊ.

**ಸುಳಿವು-1**

ಆ ನೈ ವಾ ಈ

(ಆಗ್ನೇಯ, ನೈರುತ್ಯ, ವಾಯವ್ಯ, ಈಶಾನ್ಯ)

**ಸುಳಿವು-2**

ಉ ಈ ಪೂ ಆ ದ ನೈ ಪ ವಾ

(ಎಂಟು ದಿಕ್ಕುಗಳ ಮೊದಲ ಅಕ್ಷರಗಳ ಸುಳಿವು)

ದಿಕ್ಕುಗಳನ್ನು ನೆನಪಿಡಲು ಅಥವಾ ನಿಖರವಾಗಿ ಗುರುತಿಸಲು ಹಲವು ಸುಳಿವು ಪದಗಳನ್ನು ಬಳಕೆ ಮಾಡಲಾಗುತ್ತದೆ. ಶಿಕ್ಷಕರ/ಹಿರಿಯರ ನೆರವಿನಿಂದ ಈ ರೀತಿಯ ಇನ್ನಿತರ ಸುಳಿವು ಪದಗಳನ್ನು ಕೇಳಿ ತಿಳಿ.

©KTBS Not to be republished


# ಪಾಠ – 24


# ನಕ್ಷೆ

**ಈ ಪಾಠವನ್ನು ಕಲಿತ ನಂತರ ನೀನು,**

- ನೆರೆ–ಹೊರೆಯ ಸರಳ ನಕ್ಷೆಯನ್ನು ಗುರುತಿಸುವೆ.

ಕೆಳಗಿನ ಚಿತ್ರ ಗಮನಿಸು. ರಮೇಶ ತನ್ನ ತರಗತಿಯ ಚಿತ್ರವನ್ನು ಬರೆದಿದ್ದಾನೆ ವೀಕ್ಷಿಸು.






**ವಿಷಯ ಸೂಚಿ**

| ಸಂಕೇತ | ವಿವರ |
|---|---|
| | ಕಪ್ಪುಹಲಗೆ |
| | ಶಿಕ್ಷಕರ ಕುರ್ಚಿ |
| | ಮೇಜು |
| | ರಮೇಶ |
| | ರಿಯಾಜ್ |
| | ಶೀಲಾ |
| | ಕೆವಿನ್ |
| | ದಿಶಾ |
| | ಬಾಗಿಲು |
| | ಕಿಟಕಿ |
| | ಕಸದ ಡಬ್ಬಿ |

©KTBS Not to be republished

ರಮೇಶನು ಬಲಭಾಗದ ಎರಡನೇ ಬೆಂಚಿನಲ್ಲಿ ತಾನು ಕುಳಿತುಕೊಳ್ಳುವ ಸ್ಥಳವನ್ನು ಗುರುತಿಸಿದ್ದಾನೆ. ಈ ಚಿತ್ರವನ್ನು ನೋಡಿ ಕೆಳಗಿನವುಗಳಿಗೆ ಉತ್ತರ ಬರೆ. ಸಹಾಯಕ್ಕಾಗಿ ವಿಷಯ ಸೂಚಿಯನ್ನು ಗಮನಿಸು.

ರಮೇಶನ ತರಗತಿಯ ಬಾಗಿಲು ____________ ದಿಕ್ಕಿಗಿದೆ.

ರಮೇಶನ ಬಲಭಾಗದ ಮೊದಲ ಸಾಲಿನಲ್ಲಿ ಕುಳಿತಿರುವ ಹುಡುಗಿ ______________

ಕಪ್ಪುಹಲಗೆ ಹಾಗೂ ಮೇಜಿನ ನಡುವೆ ____________ ಇದೆ.

ಈಶಾನ್ಯ ದಿಕ್ಕಿನಲ್ಲಿರುವ ವಸ್ತು ____________

ದಿಶಾಳು ರಿಯಾಜ್‌ನ ಬಲಭಾಗದ ____________ ಬೆಂಚಿನಲ್ಲಿ ಕುಳಿತಿದ್ದಾಳೆ.

ರಮೇಶನಂತೆ ನೀನೂ ನಿನ್ನ ತರಗತಿಯ ಚಿತ್ರವನ್ನು ಹಾಳೆಯಲ್ಲಿ ಮೂಡಿಸು. ನಿನ್ನ ತರಗತಿ ಕೋಣೆಯಲ್ಲಿ ಯಾವ ವಸ್ತುಗಳು ಎಲ್ಲೆಲ್ಲಿ ಇವೆ ಎಂಬುದನ್ನು ಅಂದಾಜು ಮಾಡಿ ಸರಳ ಚಿತ್ರವನ್ನು ಮೂಡಿಸು. ವಸ್ತುಗಳಿಗೆ ಸಂಕೇತವನ್ನು ಬಳಸು.



**ಓದಿ-ತಿಳಿ**


- ಯಾವುದೇ ಸ್ಥಳದ ಆಕಾರ, ಅಂಚು, ಅಲ್ಲಿರುವ ನದಿ, ಬೆಟ್ಟ, ರಸ್ತೆ, ಕಟ್ಟಡಗಳಂತಹ ಲಕ್ಷಣಗಳು, ಅಲ್ಲಿ ಕಂಡುಬರುವ ವಿವಿಧ ವಸ್ತುಗಳ ಸ್ಥಾನ, ಅಂತರಗಳ ಕಿರುಚಿತ್ರವನ್ನು **ನಕ್ಷೆ** ಎನ್ನುವರು. ನಕ್ಷೆಯಲ್ಲಿ ವಿಶಾಲವಾದ ಸ್ಥಳವನ್ನು ಕಿರಿದಾದ ಹಾಳೆಯಲ್ಲಿ ಮೂಡಿಸಬಹುದು.
- ಗೋಳ ನೋಡಿರುವೆಯಲ್ಲವೆ? ಅದನ್ನು ಹಾಳೆಯ ಮೇಲೆ ಚಪ್ಪಟೆಯಾಗಿ ಮೂಡಿಸುತ್ತಾರೆ. ಇದು ಕೂಡ ನಕ್ಷೆಯೆ. ಇದನ್ನು **ಭೂಪಟ** ಎನ್ನುವರು. ಇದರಲ್ಲಿ ಭೂಮಿಯ ಇಡೀ ಚಿತ್ರವು ಒಂದೇ ನೋಟಕ್ಕೆ ಕಾಣಿಸುತ್ತದೆ.

ನಕ್ಷೆ/ಭೂಪಟದ ಉಪಯೋಗವನ್ನು ಶಿಕ್ಷಕರು/ಹಿರಿಯರ ನೆರವಿನಿಂದ ಕೇಳಿ ತಿಳಿ.

©KTBS Not to be republished

**ಚಟುವಟಿಕೆ :** ಇಲ್ಲಿ ಒಂದು ಹಳ್ಳಿಯ ಮಾದರಿ ನಕ್ಷೆಯನ್ನು ಕೊಡಲಾಗಿದೆ. ಇದಕ್ಕೆ ಸಂಬಂಧಿಸಿದ ಚಿಹ್ನೆ ಮತ್ತು ವಿವರಗಳನ್ನು ಕೊಟ್ಟಿರುವ ವಿಷಯಸೂಚಿಯಲ್ಲಿ ಶಿಕ್ಷಕರ/ಹಿರಿಯರ ನೆರವಿನಿಂದ ಬರೆ.





| ವಿಷಯ ಸೂಚಿ | |
|---|---|
| **ಚಿಹ್ನೆಗಳು** | **ವಿವರಗಳು** |
| | |
| | |
| | |
| | |
| | |
| | |
| | |
| | |
| | |
| | |
| | |
| | |

©KTBS Not to be republished

ಹೊಂದಿಸಿ ಬರೆ.

| ಚಿಹ್ನೆಗಳು | ವಿವರಗಳು |
|---|---|
|  | ನದಿ |
|  | ಮನೆ |
|  | ಮರ |
|  | ಸೂರ್ಯ |
|  | ಬೆಟ್ಟ |
|  | ಚಂದ್ರ |
|  | ಮನುಷ್ಯ |

©KTBS Not to be republished

## ಪಾಠ – 25

# ನನ್ನ ಜಿಲ್ಲೆ – ನಿನ್ನ ಜಿಲ್ಲೆ

**ಈ ಪಾಠವನ್ನು ಕಲಿತ ನಂತರ ನೀನು,**

- ಜಿಲ್ಲೆಯ ಪರಿಚಯ ಮಾಡಿಕೊಳ್ಳುವೆ.




ಚಿತ್ರ ಗಮನಿಸು. ಇದು ಮಲ್ಲೇಪುರ ಗ್ರಾಮ. ಇಲ್ಲಿ ಹಲವು ಮನೆಗಳಿವೆ.



ಮಲ್ಲೇಪುರ ಚನ್ನರಾಯಪಟ್ಟಣ ಹೋಬಳಿಗೆ ಸೇರಿದೆ. ಈ ಹೋಬಳಿಯಲ್ಲಿ ಮಲ್ಲೇಪುರದಂತಹ ಹಲವಾರು ಗ್ರಾಮಗಳಿವೆ.

ಇಲ್ಲಿ ಹಲವು ಹೋಬಳಿಗಳ ಚಿತ್ರವಿದೆ. ಹಲವು ಹೋಬಳಿಗಳು ಸೇರಿ ಒಂದು ತಾಲ್ಲೂಕು ಆಗುತ್ತದೆ.





© KTBS Not to be republished

ನಿನ್ನ ಊರು ಒಂದು ಹಳ್ಳಿಯಾಗಿದ್ದರೆ, ಅದು ಇರುವ ಹೋಬಳಿ ಹಾಗೂ ತಾಲ್ಲೂಕುಗಳ ಹೆಸರುಗಳನ್ನು ತಿಳಿದುಕೊ. ಇಲ್ಲವಾದಲ್ಲಿ ನಿನಗೆ ಪರಿಚಯವಿರುವ ಒಂದು ಹಳ್ಳಿಯ ಹೆಸರು ಬರೆದು, ಆ ಹಳ್ಳಿ ಇರುವ ಹೋಬಳಿ ಹಾಗೂ ತಾಲ್ಲೂಕಿನ ಹೆಸರನ್ನು ಬರೆ.

| ಹಳ್ಳಿಯ ಹೆಸರು | ಹೋಬಳಿ | ತಾಲ್ಲೂಕು |
|---|---|---|
| | | |

ನಿನ್ನ ತಾಲ್ಲೂಕಿನಲ್ಲಿರುವ ಹೋಬಳಿಗಳ ಹೆಸರು ಬರೆದು ತರಗತಿ ಕೋಣೆಯಲ್ಲಿ ಪ್ರದರ್ಶಿಸು.


ಹಲವು ಹೋಬಳಿಗಳು ಸೇರಿ ತಾಲ್ಲೂಕು ಆಗಿದೆ ಎಂಬುದನ್ನು ತಿಳಿದಿರುವೆ. ಕೆಳಗಿನ ನಕ್ಷೆ ಗಮನಿಸು.




ಹಲವು ತಾಲ್ಲೂಕುಗಳ ಗುಂಪಿಗೆ ಜಿಲ್ಲೆ ಎನ್ನುವರು. ಚಿತ್ರದಲ್ಲಿರುವ ಕೊಟ್ಟಿರುವ ನಕ್ಷೆ ಯಾವ ಜಿಲ್ಲೆಯದು ಎಂದು ಹೇಳು.

©KTBS Not to be republished

ಹಲವು ಜಿಲ್ಲೆಗಳು ಸೇರಿ ಒಂದು ರಾಜ್ಯವಾಗುತ್ತದೆ. ನಮ್ಮ ರಾಜ್ಯ ಕರ್ನಾಟಕ. ನಮ್ಮ ರಾಜ್ಯದಲ್ಲಿರುವ ಒಟ್ಟು ಜಿಲ್ಲೆಗಳೆಷ್ಟು? ನಿನಗೆ ತಿಳಿದಿದೆಯೇ? ಕರ್ನಾಟಕದ ನಕ್ಷೆಯನ್ನು ಗಮನಿಸು. ಅಲ್ಲಿರುವ ಜಿಲ್ಲೆಗಳ ಹೆಸರನ್ನು ಪಟ್ಟಿಮಾಡು. ಒಟ್ಟು ಜಿಲ್ಲೆಗಳೆಷ್ಟು ಎಂಬುದನ್ನು ಹೇಳು.




© KTBS Not to be republished

| ಕ್ರ.ಸಂ. | ಜಿಲ್ಲೆಗಳ ಹೆಸರು |
|---|---|
| | |
| | |
| | |
| | |
| | |
| | |
| | |
| | |
| | |
| | |
| | |
| | |
| | |
| | |
| | |

| ಕ್ರ.ಸಂ. | ಜಿಲ್ಲೆಗಳ ಹೆಸರು |
|---|---|
| | |
| | |
| | |
| | |
| | |
| | |
| | |
| | |
| | |
| | |
| | |
| | |
| | |
| | |
| | |

©KTBS
Not to be republished

ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಜಿಲ್ಲೆಗಳು ________________

ನಿನ್ನ ಜಿಲ್ಲೆಯ ಹೆಸರು ________________

ನಿನ್ನ ಜಿಲ್ಲೆಯಲ್ಲಿರುವ ತಾಲ್ಲೂಕುಗಳ ಹೆಸರು ____________ ____________

____________ ____________

____________ ____________

____________ ____________

____________ ____________

____________ ____________

____________ ____________


ನಮ್ಮ ರಾಜ್ಯದ ನಕ್ಷೆಯನ್ನು ಗಮನಿಸು. ರಾಜ್ಯದ ಉತ್ತರ ತುದಿಗೆ ಇರುವ ಜಿಲ್ಲೆ ಯಾವುದು? ದಕ್ಷಿಣ ತುದಿಯಲ್ಲಿ ಇರುವ ಜಿಲ್ಲೆ ಯಾವುದು ಗಮನಿಸು.

**ಚಟುವಟಿಕೆ :** ನಿನ್ನ ಜಿಲ್ಲೆಯ ಸುತ್ತಲೂ ಇರುವ ಜಿಲ್ಲೆಗಳ ಹೆಸರನ್ನು ದಿಕ್ಕುಗಳಿಗೆ ಅನುಸಾರ ಕೆಳಗೆ ಕೊಟ್ಟಿರುವ ಪಟ್ಟಿಯಲ್ಲಿ ಬರೆ.

| ದಿಕ್ಕುಗಳು | ಜಿಲ್ಲೆಯ ಹೆಸರು |
|---|---|
| ಪೂರ್ವ | |
| ಪಶ್ಚಿಮ | |
| ಉತ್ತರ | |
| ದಕ್ಷಿಣ | |
| ಆಗ್ನೇಯ | |
| ನೈರುತ್ಯ | |
| ವಾಯವ್ಯ | |
| ಈಶಾನ್ಯ | |

© KTBS Not to be republished

ಈ ಚಿತ್ರವನ್ನು ಗಮನಿಸು. ನಮ್ಮ ರಾಜ್ಯದ ಹಲವು ಜಿಲ್ಲೆಗಳಲ್ಲಿ ಕಂಡುಬರುವ ಪ್ರಾಣಿ–ಪಕ್ಷಿಗಳ ಚಿತ್ರಗಳನ್ನು ನೀಡಲಾಗಿದೆ.




**ಚಟುವಟಿಕೆ :** ನಿನ್ನ ಜಿಲ್ಲೆಯಲ್ಲಿ ಕಂಡುಬರುವ ಪ್ರಾಣಿ–ಪಕ್ಷಿಗಳನ್ನು ಪಟ್ಟಿಮಾಡು.

| **ಪ್ರಾಣಿಗಳು** | **ಪಕ್ಷಿಗಳು** |
|---|---|
| | |

©KTBS Not to be republished

ನಮ್ಮ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ರಾಗಿ, ಭತ್ತ, ಜೋಳ, ಕಬ್ಬು, ತೆಂಗು, ಅಡಿಕೆ, ಬೇಳೆಕಾಳುಗಳು, ಎಣ್ಣೆ ಕಾಳುಗಳು ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ.



**ಚಟುವಟಿಕೆ :** ನಿನ್ನ ಜಿಲ್ಲೆಯ ಮುಖ್ಯ ಬೆಳೆಗಳನ್ನು ಪಟ್ಟಿ ಮಾಡು.

____________ ____________

____________ ____________

____________ ____________

____________ ____________

____________ ____________

____________ ____________

____________ ____________

Not to be republished

ನಮ್ಮ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಕ್ಕರೆ, ಸಿಮೆಂಟ್, ಗೊಬ್ಬರ, ವಿಮಾನ, ಬಟ್ಟೆ ಮತ್ತು ಕಾಗದ ತಯಾರಿಕೆ ಇತ್ಯಾದಿ ಕೈಗಾರಿಕೆಗಳು ಕಂಡುಬರುತ್ತವೆ.







©KTBS Not to be republished

**ಚಟುವಟಿಕೆ :** ನಿನ್ನ ಜಿಲ್ಲೆಯಲ್ಲಿರುವ ಮುಖ್ಯ ಕೈಗಾರಿಕೆಗಳನ್ನು ಪಟ್ಟಿಮಾಡು.

________________________________


________________________________

________________________________

________________________________

________________________________

ಕೃಷಿ, ಮೀನುಗಾರಿಕೆ, ಬಟ್ಟೆ ತಯಾರಿಸುವುದು, ಬುಟ್ಟಿ ಹೆಣೆಯುವುದು, ಮಡಕೆ ಮಾಡುವುದು ಇನ್ನೂ ಹಲವು ವಿಧದ ಕಸುಬುಗಳು ನಮ್ಮ ರಾಜ್ಯದ ಜಿಲ್ಲೆಗಳಲ್ಲಿ ಕಂಡುಬರುತ್ತವೆ.















© KTBS Not to be republished

**ಚಟುವಟಿಕೆ :** ನಿನ್ನ ಜಿಲ್ಲೆಯ ಪ್ರಮುಖ ಕಸುಬುಗಳನ್ನು ಶಿಕ್ಷಕರ/ಹಿರಿಯರ ನೆರವಿನಿಂದ ಪಟ್ಟಿಮಾಡು.

____________________ ____________________ ____________________

____________________ ____________________ ____________________

ಭೀಮಾ, ಕೃಷ್ಣಾ, ತುಂಗಭದ್ರಾ, ನೇತ್ರಾವತಿ, ಕಾವೇರಿ–ಹೀಗೆ ಹಲವು ನದಿಗಳು ನಮ್ಮ ರಾಜ್ಯದಲ್ಲಿ ಹರಿಯುತ್ತವೆ.




©KTBS
Not to be republished

**ಚಟುವಟಿಕೆ :** ನಿನ್ನ ಜಿಲ್ಲೆಯಲ್ಲಿ ಹರಿಯುವ ನದಿಗಳ ಹೆಸರನ್ನು ಇಲ್ಲಿ ಬರೆ.

______________________

______________________


______________________

______________________

______________________

ಈ ಚಿತ್ರಗಳು ನಮ್ಮ ರಾಜ್ಯದ ಪ್ರಸಿದ್ಧ ಸ್ಥಳಗಳಾದ ಹಂಪೆ (ಕಲ್ಲಿನ ರಥ), ವಿಜಯಪುರ (ಗೋಳಗುಮ್ಮಟ), ಮೈಸೂರು (ಅರಮನೆ), ಬೆಂಗಳೂರು (ವಿಧಾನ ಸೌಧ), ಶಿವಮೊಗ್ಗ (ಜೋಗ ಜಲಪಾತ) ಮತ್ತು ಮಂಡ್ಯ (ಕೊಕ್ಕರೆ ಬೆಳ್ಳೂರು ಪಕ್ಷಿಧಾಮ) ಜಿಲ್ಲೆಗಳ ವಿಶೇಷತೆಯನ್ನು ತಿಳಿಸುತ್ತವೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಇಂತಹ ಪ್ರಸಿದ್ಧ ಸ್ಥಳಗಳಿವೆ.













©KTBS Not to be republished

**ಚಟುವಟಿಕೆ :**

- ನಿನ್ನ ಜಿಲ್ಲೆಯ ಪ್ರಸಿದ್ಧ ಸ್ಥಳಗಳನ್ನು ಇಲ್ಲಿ ಬರೆ.

  ______________, ______________, ______________, ______________, ______________.

  ಇವು ಏಕೆ ಪ್ರಸಿದ್ಧ ಎಂಬುದನ್ನು ತಿಳಿದುಕೊ.

- ನಿನ್ನ ಜಿಲ್ಲೆಯ ಪ್ರಸಿದ್ಧ ಸ್ಥಳಗಳ ಚಿತ್ರಗಳನ್ನು ಸಂಗ್ರಹಿಸಿ, ಇಲ್ಲಿ ಅಂಟಿಸು.

©KTBS Not to be republished

ನಮ್ಮ ರಾಜ್ಯದ ಪ್ರತಿಯೊಂದು ಜಿಲ್ಲೆಯೂ ವಿಶಿಷ್ಟ. ಪ್ರತಿಯೊಂದು ಜಿಲ್ಲೆಗೂ ತನ್ನದೇ ಆದ ಹವಾಗುಣ, ಬೆಳೆಗಳು, ಪ್ರಸಿದ್ಧ ಸ್ಥಳಗಳು, ಕೈಗಾರಿಕೆಗಳು, ಕಸುಬುಗಳು ಇವೆ. ನಿನ್ನ ಜಿಲ್ಲೆಯ ಬಗ್ಗೆ ತಿಳಿದುಕೊ. ಬೇರೆ ಜಿಲ್ಲೆಯ ಬಗ್ಗೆ ಪ್ರವಾಸ ಮಾಡಿ ಹೆಚ್ಚಿನ ವಿವರಗಳನ್ನು ತಿಳಿಯಲು ಪ್ರಯತ್ನಿಸು.